ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 12 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 235 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ

ಎಸ್.ಎಂ.ಕೃಷ್ಣ ಪಂಚಭೂತಗಳಲ್ಲಿ ಲೀನ

ಸಕಲ ಸರ್ಕಾರಿ ಗೌರವದೊಂದಿಗೆ ಸೋಮನಹಳ್ಳಿಯಲ್ಲಿ ಅಂತ್ಯಕ್ರಿಯೆ

ಸೋಮನಹಳ್ಳಿ (ಮದ್ದೂರು ತಾಲೂಕು) ಡಿ.11(ಮೋಹನ್‌ರಾಜ್)– ತುಂಬು ಜೀವನ ನಡೆಸಿ ಮಂಗಳವಾರ ಬೆಳಿಗ್ಗೆ ವಿಧಿವಶರಾದ ನಾಡಿನ ಹಿರಿಯ ಮುತ್ಸದ್ದಿ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ (92) ಹುಟ್ಟೂರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ಪಂಚಭೂತಗಳಲ್ಲಿ ಲೀನವಾದರು. ಸಕಲ ಸರ್ಕಾರಿ ಗೌರವಗಳೊಂದಿಗೆ ಒಕ್ಕಲಿಗರ ಸಂಪ್ರದಾಯದಂತೆ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮೊಮ್ಮಗ ಅಮರ್ತ್ಯ ಹೆಗಡೆ (ಎಸ್.ಎಂ.ಕೃಷ್ಣ ಅಳಿಯ ಸಿದ್ಧಾರ್ಥ ಹೆಗಡೆ ಪುತ್ರ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅಳಿಯ) ಬುಧವಾರ ಸಂಜೆ 5.23ರ ಶುಭಲಗ್ನದಲ್ಲಿ ತಾತ ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು. ಈ ದೃಶ್ಯಕ್ಕೆ ಎಸ್‌ಎಂಕೆ ಇಡೀ ಕುಟುಂಬ ಹಾಗೂ ರಾಜ್ಯದ ಘಟಾನುಘಟಿ ರಾಜಕೀಯ ನೇತಾರರು ಹಾಗೂ ಕೃಷ್ಣ ಅವರ ಸಾವಿರಾರು ಅಭಿಮಾನಿಗಳು ಸಾಕ್ಷಿಯಾದರು.

ಬುಧವಾರ ಬೆಳಿಗ್ಗೆ ಬೆಂಗಳೂರಿನ ಸದಾಶಿವನಗರ ನಿವಾಸದಿಂದ ಹೊರಟ ಎಸ್.ಎಂ.ಕೃಷ್ಣ ಪಾರ್ಥಿವ ಶರೀರ ತೆರೆದ ಅಲಂಕೃತ ವಾಹನದಲ್ಲಿ ಕೆಂಗೇರಿ, ಕುಂಬಳಗೂಡು, ಬಿಡದಿ, ರಾಮನಗರ, ಚನ್ನಪಟ್ಟಣ ಮಾರ್ಗವಾಗಿ ಮಧ್ಯಾಹ್ನ 2ಕ್ಕೆ ಮದ್ದೂರಿನ ಸೋಮನಹಳ್ಳಿ ತಲುಪಿತು. ಕೆಂಗೇರಿ, ಬಿಡದಿ, ರಾಮನಗರ ಮತ್ತು ಚನ್ನಪಟ್ಟಣದಲ್ಲಿ ಕೆಲಹೊತ್ತು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ■6ನೇ ಪುಟಕ್ಕೆ

ಪ್ರಧಾನಿ ಮೋದಿ ಶೋಕ ಸಂದೇಶ



ಬೆಂಗಳೂರು, ಡಿ.11–ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನಕ್ಕೆ ಸಂತಾಪ ಸೂಚಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ರಾತ್ರಿ ಶೋಕ ಸಂದೇಶ ಕಳಿಸಿದ್ದಾರೆ.

ಕೇಂದ್ರ ಸರ್ಕಾರದ ಪರವಾಗಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ್ ಜೋಶಿ ಅವರ ಮೂಲಕ ಪ್ರಧಾನಿ ಮೋದಿ ಅವರು ಶೋಕ ಸಂದೇಶವುಳ್ಳ ಪತ್ರ ಕಳಿಸಿದ್ದು, ಸಚಿವ ಜೋಶಿ ಮತ್ತು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಜೊತೆಗೂಡಿ ಪ್ರಧಾನಿಯವರ ಸಂತಾಪ ಸೂಚಕ ಪತ್ರವನ್ನು ಎಸ್.ಎಂ.ಕೃಷ್ಣ ಅವರ ಪತ್ನಿ ಪ್ರೇಮಾ ಕೃಷ್ಣ ಅವರಿಗೆ ಹಸ್ತಾಂತರಿಸಿದರು.

ಎಸ್.ಎಂ.ಕೃಷ್ಣರಿಗೆ 'ಕರ್ನಾಟಕ ರತ್ನ' ಗೌರವ ನೀಡಲು ಆರ್.ಅಶೋಕ್ ಮನವಿ

ಬೆಂಗಳೂರು, ಡಿ.11– ಮಾಜಿ ಸಿಎಂ ದಿವಂಗತ ಎಸ್.ಎಂ.ಕೃಷ್ಣ ಅವರಿಗೆ ಕರ್ನಾಟಕ ರತ್ನ ಗೌರವವನ್ನು ನೀಡಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ. ಶಾಸಕ, ಸಚಿವ, ಸ್ಪೀಕರ್, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ, ಹೀಗೆ ನಾನಾ ಹುದ್ದೆಗಳಲ್ಲಿ ಸೇವೆ ಸಲ್ಲಿಸುವ ಜೊತೆಗೆ, ಜನರ ಬದುಕಿನ ಸುಧಾರಣೆಗಾಗಿ, ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಅವರು ಅಪಾರವಾಗಿ ಶ್ರಮಿಸಿದ್ದರು.



ಅಶೋಕ್

ರಾಜಧಾನಿ ಬೆಂಗಳೂರಿಗೆ ಸಿಲಿಕಾನ್ ವ್ಯಾಲಿ ಹಾಗೂ ಐಟಿ ಕೇಂದ್ರದ ಸ್ಥಾನಮಾನ ನೀಡುವಲ್ಲಿ ಅವರ ಪಾತ್ರ ಗಣನೀಯ. ವಿದೇಶಾಂಗ ಸಚಿವರಾಗಿ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ಸೇವೆ ಸಲ್ಲಿಸಿ ಕರ್ನಾಟಕದ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ಎಸ್.ಎಂ.ಕೃಷ್ಣ ಅವರು ನಾಡಿನ ಪ್ರಗತಿಗೆ ನೀಡಿದ ಕೊಡುಗೆಯನ್ನು ಗುರುತಿಸಿ, ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಕರ್ನಾಟಕ ರತ್ನ' (ಮರಣೋತ್ತರ) ನೀಡುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ. ಆದ್ದರಿಂದ ತಾವು ಈ ಸಲಹೆಯನ್ನು ಪರಿಗಣಿಸಿ ಶ್ರೀಯುತರಿಗೆ 'ಕರ್ನಾಟಕ ರತ್ನ' ನೀಡಿ ಗೌರವ ಸಲ್ಲಿಸಬೇಕೆಂದು ಮನವಿ ಮಾಡಿದ್ದಾರೆ.



ಎಸ್.ಎಂ.ಕೃಷ್ಣ ಅವರಿಗೆ ಪತ್ನಿ ಪ್ರೇಮಾ ಕೃಷ್ಣ ಅವರು ಭಾವುಕರಾಗಿ ಅಂತಿಮ ವಿದಾಯ ಹೇಳುತ್ತಿರುವುದು.



ಹುಟ್ಟೂರು ಸೋಮನಹಳ್ಳಿಗೆ ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರ ಹೊತ್ತ ಅಲಂಕೃತ ವಾಹನ ಆಗಮಿಸಿದ ವೇಳೆ ಜಮಾಯಿಸಿದ್ದ ಜನಸ್ತೋಮ.

ಸಕಲ ಸರ್ಕಾರಿ ಗೌರವ

ಸೋಮನಹಳ್ಳಿ (ಮದ್ದೂರು ತಾಲೂಕು): 3.30ಕ್ಕೆ ಚಿತೆಯ ಜಾಗಕ್ಕೆ ಕೃಷ್ಣ ಅವರ ಪಾರ್ಥಿವ ಶರೀರವನ್ನು ತರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸರು ಬ್ಯಾಂಡ್ ಮೂಲಕ ರಾಷ್ಟ್ರಗೀತೆ ನುಡಿಸಿ ಗೌರವ ನಮನ ಸಲ್ಲಿಸಿದರು. ಆಗಸದತ್ತ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಪೊಲೀಸ್ ಗೌರವ ವಂದನೆ ಸಲ್ಲಿಸಲಾಯಿತು.

ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೂಗುಚ್ಛ ಅರ್ಪಿಸಿ ಕಣ್ಣೀರಿಟ್ಟರೆ, ಪ್ರಧಾನಿ ಮೋದಿ ಪರವಾಗಿ ಕೇಂದ್ರ ಸಚಿವರಾದ ಪ್ರಹ್ಲಾದ ಜೋಷಿ ಹಾಗೂ ಹೆಚ್.ಡಿ.ಕುಮಾರ ಸ್ವಾಮಿ, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್, ಮಾಜಿ ಸಿಎಂಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ■6ನೇ ಪುಟಕ್ಕೆ

ನಾನು ಮರಳಿನ ಮೇಲೆ ಅಕ್ಷರ ಕಲಿಯುವಾಗ ಎಸ್.ಎಂ.ಕೃಷ್ಣರವರು ವಿದೇಶದಲ್ಲಿ ಓದುತ್ತಿದ್ದರು

ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಣೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆ ನಡೆಯುವ ಸಂದರ್ಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಹೃದಯ ಸ್ಪರ್ಶಿ ಟ್ವೀಟ್ ಮಾಡಿದ್ದಾರೆ. ಆ ಟ್ವೀಟ್‌ನಲ್ಲಿ ಕೃಷ್ಣ ಅವರು, ವಯಸ್ಸಿನಲ್ಲಿ, ಅನುಭವದಲ್ಲಿ ತಮಗಿಂತ ಎಷ್ಟು ದೊಡ್ಡವರು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಡಿ.11ರಂದು ಮಧ್ಯಾಹ್ನ ಮಾಡಲಾಗಿರುವ ಈ ಟ್ವೀಟ್‌ನಲ್ಲಿ ಅವರು, ಬಹುಶಃ ನಾನು ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡುತ್ತ, ವೀರ ಮಕ್ಕಳ ಕುಣಿತ ಕಲಿಯುವ ಹೊತ್ತಲ್ಲಿ ಎಸ್.ಎಂ.ಕೃಷ್ಣರವರು ವಿದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕೃಷ್ಣರವರ ವೈಶಿಷ್ಟ್ಯವೆಂದರೆ ವಿದೇಶದಲ್ಲಿ ಶಿಕ್ಷಣ ಪಡೆದರೂ ಊರಿಗೆ ಮರಳಿ ಮಣ್ಣಿನ ಮಗನಾದರು ಎಂದು



ಅವರು ಬಣ್ಣಿಸಿದ್ದಾರೆ. ದ್ವೇಷದ ರಾಜಕಾರಣದಿಂದ ಬಹುದೂರವೇ ಇದ್ದ ಎಸ್.ಎಂ.ಕೃಷ್ಣ ಅವರೊಬ್ಬ ಸಜ್ಜನಿಕೆಯ ಜಂಟಲ್‌ಮೆನ್ ರಾಜಕಾರಣಿ. ಈ ಕಾರಣಕ್ಕಾಗಿಯೇ ಅಜಾತ ಶತ್ರುವಾಗಿ ನಮ್ಮ ನೆನಪುಗಳಲ್ಲಿ ಶಾಶ್ವತವಾಗಿರಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮದ್ದೂರು ಪಟ್ಟಣ ಸಂಪೂರ್ಣ ಬಂದ್

ಎಸ್.ಎಂ. ಕೃಷ್ಣ ಅವರ ನಿಧನದ ಹಿನ್ನೆಲೆಯಲ್ಲಿ ಮದ್ದೂರು ಪಟ್ಟಣವು ಸಂಪೂರ್ಣ ಬಂದ್ ಆಗಿತ್ತು. ವರ್ತಕರು ಅಂಗಡಿ, ಮುಂಗಟ್ಟುಗಳು, ಆಟೋಗಳು, ಸಿನಿಮಾ ಮಂದಿರ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆ ಹೊರತುಪಡಿಸಿ ಉಳಿದೆಲ್ಲವೂ ಬಂದ್ ಆಗಿತ್ತು. ಇಡೀ ಮದ್ದೂರು ಪಟ್ಟಣವನ್ನು ಬಂದ್ ಮಾಡುವ ಮೂಲಕ ಹುಟ್ಟೂರಿನ ಮನೆ ಮಗನಿಗೆ ತಾಲೂಕಿನ ಜನ ಗೌರವ ನಮನವನ್ನು ಅರ್ಪಿಸಿದರು. ಅಂತ್ಯಸಂಸ್ಕಾರ ನೆರವೇರಿದ ಸ್ಥಳದಲ್ಲಿ ಬಂದಿದ್ದ ಸಾವಿರಾರು ಜನರಿಗೆ ಊಟ ಮತ್ತು ನೀರಿನ ಕೊರತೆಯಾಗಬಾರದೆಂಬ ನಿಟ್ಟಿನಲ್ಲಿ ಹೆಜ್ಜೆ ಹೆಜ್ಜೆಗೂ ನೀರು ಮತ್ತು ಪಾರ್ಸೆಲ್ ಉಪಾಹಾರದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಮೈಸೂರು ಮಿತ್ರ ಗುರುವಾರ 12 ಡಿಸೆಂಬರ್ 2024

ಶ್ರೀ ಕ್ಷೇತ್ರ ಗೊಮ್ಮಟಗಿರಿಯಲ್ಲಿ ನಾಳೆಯಿಂದ ಮಹಾಮಸ್ತಕಾಭಿಷೇಕ



ಮೈಸೂರು,ಡಿ.11(ಎಂಟಿವೈ)– ಹುಣಸೂರು ತಾಲೂಕಿನ ಶ್ರೀ ಕ್ಷೇತ್ರ ಗೊಮ್ಮಟಗಿರಿಯಲ್ಲಿ ಡಿ.13ರಿಂದ 15ರವರೆಗೆ 75ನೇ ವರ್ಷದ ಮಹಾಮಸ್ತಕಾಭಿಷೇಕದ ಅಮೃತ ಮಹೋತ್ಸವ ಹಾಗೂ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಲಿದೆ ಎಂದು ಗೊಮ್ಮಟಗಿರಿ ಸೇವಾ ಸಮಿತಿ ಅಧ್ಯಕ್ಷ ಮನ್ಮಥ್‌ರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೊಮ್ಮಟಗಿರಿ ಸೇವಾ ಸಮಿತಿಯಿಂದ ಹಮ್ಮಿಕೊಂಡಿರುವ ಮಹಾಮಸ್ತಕಾಭಿಷೇಕದ ಅಮೃತ ಮಹೋತ್ಸವ ಅಂಗವಾಗಿ ಡಿ.12ರಂದು ಪೂರ್ವಭಾವಿ ಸಭೆ ನಡೆಯಲಿದೆ. ಡಿ.13ರಿಂದ 15ರವರೆಗೆ ಮೂರೂ ದಿನ ಬೆಳಗ್ಗೆ 11ಕ್ಕೆ ಮಹಾಮಸ್ತಕಾಭಿಷೇಕ ಜರುಗಲಿದೆ. ಡಿ.13ರ ಬೆಳಗ್ಗೆ 10.30ಕ್ಕೆ, ಅರ್ಹದ್ದಾಸರ ಸಭಾ ಮಂಟಪದಲ್ಲಿ ಶ್ರೀ ಕ್ಷೇತ್ರ ಕನಕಗಿರಿಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಹೊಂಬುಜ ಕ್ಷೇತ್ರದ ಸ್ವಸ್ತಿಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮವನ್ನು ಮೇಘಾಲಯ ರಾಜ್ಯಪಾಲರಾದ ಸಿ.ಹೆಚ್. ವಿಜಯಶಂಕರ್ ಉದ್ಘಾಟಿಸಲಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ, ಸಚಿವ ಡಿ.ಸುಧಾಕರ್, ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಡಿ.14ರಂದು ಬೆಳಗ್ಗೆ 11 ಗಂಟೆಗೆ ಮಹಾಮಸ್ತಕಾಭಿಷೇಕ ನೆರವೇರಲಿದೆ. ಮಧ್ಯಾಹ್ನ 2 ಗಂಟೆಗೆ ಅಮೃತ ಕುಟೀರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಸಚಿವ ಡಿ. ಸುಧಾಕರ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಸಚಿವ ಕೃಷ್ಣಭೈರೇಗೌಡ, ಈಶ್ವರ್ ಖಂಡ್ರೆ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಡಿ.15 ರಂದು ಬೆಳಗ್ಗೆ 11ಕ್ಕೆ ಮಹಾಮಸ್ತಕಾಭಿಷೇಕ ಜರುಗಲಿದೆ. ಬೆಳಗ್ಗೆ 10.30ಕ್ಕೆ ಬೃಹತ್ ಸಮವಸರಣ ನಿರ್ಮಾಣದ ಭೂಮಿ ಪೂಜೆ ನೆರವೇರಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಸಿ.ಎನ್. ಮಂಜೇಗೌಡ, ವಿವೇಕಾನಂದ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಗೊಮ್ಮಟಗಿರಿ ಸೇವಾ ಸಮಿತಿ ಪದಾಧಿಕಾರಿಗಳಾದ ಎಸ್.ಎಂ. ಪ್ರಕಾಶ್‌ಬಾಬು, ಧರಣೇಂದ್ರನ್, ಪ್ರಭಾಕರ್, ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

ಡಿ.15 ನೇತ್ರ ತಪಾಸಣೆ, ರೈತರು, ಯೋಧರಿಗೆ ಸನ್ಮಾನ

ಮೈಸೂರು,ಡಿ.11(ಜಿಎ)–ಮೈಸೂರಿನ ಮಾನವ ಹಕ್ಕುಗಳ ಸೇವಾ ಸಮಿತಿ ವತಿಯಿಂದ ಡಿ.15ರಂದು ಬೆಳಗ್ಗೆ 11ಗಂಟೆಗೆ ನಗರದ ಪುರಭವನದಲ್ಲಿ ಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ ಉಚಿತ ನೇತ್ರ ತಪಾಸಣೆ, ರೈತರು, ಮಾಜಿ ಯೋಧರಿಗೆ ಸನ್ಮಾನ, ಕಾನೂನು ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಕಾರ್ಯಾಧ್ಯಕ್ಷ ಡಾ.ತೇಜಸ್ ಪೃಥ್ವಿರಾಜ್ ಈ ವಿಷಯ ತಿಳಿಸಿ, ನೇತ್ರ ತಪಾಸಣೆ ವೇಳೆ ಉಚಿತ ಕನ್ನಡಕ ವಿತರಿಸಲಾಗುವುದು ಹಾಗೂ ಎಲ್ಲ ರೀತಿಯ ಕಣ್ಣಿನ ಸಮಸ್ಯೆಗಳನ್ನು ಅಗರ್‌ವಾಲ್ ಕಣ್ಣಿನ ಆಸ್ಪತ್ರೆ ವೈದ್ಯರು ತಪಾಸಣೆ ನಡೆಸಿ ಸಲಹೆ, ಸೂಚನೆ ನೀಡಲಿದ್ದಾರೆ. ಹಾಗೇ ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಉಚಿತ ಕಾನೂನು ಅರಿವು–ನೆರವು ಕಾರ್ಯಕ್ರಮ ಆಯೋಜಿಸಿದ್ದು, ಸಾರ್ವಜನಿಕರು ಪ್ರಯೋಜನ ಪಡೆಯಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಪದಾಧಿಕಾರಿಗಳಾದ ಡಾ.ಮೌಲ್ಯ, ಜಯಕುಮಾರ್, ಬಿ.ಅಮೀನಾ ಬೇಗಂ, ಡಾ.ಆರ್.ಉಮೇಶ್, ಪ್ರದೀಪ್‌ರಾವತ್ ಇದ್ದರು.

ಡಿ.21, ಸೆಂಟ್ ಜೋಸೆಫ್ ಶಾಲೆ ವಾರ್ಷಿಕೋತ್ಸವ

ಮೈಸೂರು,ಡಿ.11(ಎಂಟಿವೈ)– ಮೈಸೂರಿನ ಸೆಂಟ್ ಜೋಸೆಫ್ ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭ ಡಿ.21ರ ಸಂಜೆ 5.30ಕ್ಕೆ ಶಾಲೆಯ ಆವರಣದಲ್ಲಿ ನಡೆಯಲಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯ ಸಗಾಯ್‌ರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆಂಟ್ ಫಿಲೋಮಿನಾ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ನೆರವಿನಿಂದ ವಾರ್ಷಿಕೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೆವರೆಂಡ್ ಡಾ. ಬರ್ನಾರ್ಡ್ ಮೊರಾಸ್ ವಹಿಸಲಿದ್ದು, ಶಾಸಕ ತನ್ವೀರ್ ಸೇಠ್, ರೆವರೆಂಡ್ ಫಾದರ್ ಸ್ಟ್ಯಾನಿ ಡಿ ಅಲ್ಮೆಡಾ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಉಪಮೇಯರ್ ಎ.ಜೆ.ಅರ್ಜುನ್ ಕುಮಾರ್, ಬಿಜೆಪಿ ಮುಖಂಡ ಡಾ.ಅನಿಲ್ ಥಾಮಸ್ ಹಾಗೂ ಚಂದ್ರಗುಪ್ತ ವಿ. ಜೈನ್ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳಾದ ವಿಶ್ವರಾಜ್, ಇ.ಟಿ.ಇಮ್ಯಾನ್ಯುಯಲ್, ಡಾ.ಸಲೀಂ ಅಹಮದ್ ಇದ್ದರು.

ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಕೆ.ಸಿ.ಚಂದನ್ ಪದ್ಮರಾಜ್‌ಗೆ ಸನ್ಮಾನ



ಮೈಸೂರು ತಾಲೂಕು ಕಡಕೊಳ ಗ್ರಾಮದ ಕೆ.ಸಿ.ಚಂದನ್ ಪದ್ಮರಾಜ್ ಅವರನ್ನು ಪ್ರಗತಿಪರ ಸಂಘಟನೆಗಳ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಡಿ.11– ಕರ್ನಾಟಕ ರಾಜ್ಯ ಪರೀಕ್ಷಾ ಪ್ರಾಧಿಕಾರ ನಡೆಸಿದ ಸಹಾಯಕ ಪ್ರಾಧ್ಯಾಪಕ ಹುದ್ದೆ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಮೈಸೂರು ತಾಲೂಕು ಕಡಕೊಳ ಗ್ರಾಮದ ಕೆ.ಸಿ. ಚಂದನ್ ಪದ್ಮರಾಜ್ ಅವರನ್ನು ಪ್ರಗತಿಪರ ಸಂಘಟನೆಗಳ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಮಾಹಿತಿ ಹಕ್ಕು ಹಾಗೂ ಸಾಮಾಜಿಕ ಹೋರಾಟಗಾರರ ವೇದಿಕೆ ಮೈಸೂರು ಜಿಲ್ಲಾಧ್ಯಕ್ಷ ಕಡಕೊಳ ಕುಮಾರಸ್ವಾಮಿ, ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಪಿ.ಮಹೇಶ್, ಚಾಪೆ ಕೈಗಾರಿಕಾ ಸಹಕಾರ ಸಂಘದ ಉಪಾಧ್ಯಕ್ಷ ಯಲ್ಲಪ್ಪನಾಯಕ್, ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಉಪ ಸಮಿತಿ ಸದಸ್ಯ ರಫೀಕ್ ಪಾಷ, ಯುವ ಮುಖಂಡರಾದ ಸತೀಶ್, ವಿಶ್ವನಾಥ್. ಆಟೋ ಮಹೇಶ್ ಇತರರು ಉಪಸ್ಥಿತರಿದ್ದರು.

ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ



ಮೈಸೂರಿನ ಬೆಳವಾಡಿಯ ಸೈನಿಕ ಅಕಾಡೆಮಿಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಾಜಿ ಕಮಾಂಡೋ ಮತ್ತು ಸೈನಿಕ ಅಕಾಡೆಮಿ ಸಂಸ್ಥಾಪಕ ಸಿ.ಎಂ.ಶ್ರೀಧರ, ಅಧ್ಯಾಪಕ ವಿಜಯಕುಮಾರ್ ಮತ್ತು ಅಕಾಡೆಮಿ ಅಭ್ಯರ್ಥಿಗಳು ಉಪಸ್ಥಿತರಿದ್ದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳ ಭವಿಷ್ಯ

ಪುನರ್ ನಿರ್ಮಿಸುವ ಡಿಪಿಆರ್‌ಗೆ ಸಂಪುಟ ಅನುಮೋದನೆಗೆ ಸುಪ್ರೀಂಕೋರ್ಟ್ ಪ್ರಕರಣ ಅಡ್ಡಿಯಾಗುವ ಸಾಧ್ಯತೆ

ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ, ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ ಸಂಸ್ಥೆಗಳೂ ಪಿಟಿಷನ್‌ನಲ್ಲಿ ಪಾರ್ಟಿಗಳು



ಲ್ಯಾನ್ಸ್‌ಡೌನ್ ಕಟ್ಟಡ



ದೇವರಾಜ ಮಾರುಕಟ್ಟೆ

ಮೈಸೂರು,ಡಿ.11(ಆರ್‌ಕೆ)–ಮೈಸೂರಿನ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳನ್ನು ಪುನರ್ ನಿರ್ಮಿಸಲು ಸಿದ್ಧಪಡಿಸಿರುವ ಡಿಪಿಆರ್‌ಗೆ ಸಚಿವ ಸಂಪುಟ ಅನುಮೋದನೆ ನೀಡಲು ಸುಪ್ರೀಂಕೋರ್ಟ್‌ನಲ್ಲಿರುವ ಪ್ರಕರಣ ಅಡ್ಡಿಯಾಗುವ ಸಾಧ್ಯತೆ ಇದೆ.

ಶಿಥಿಲಾವಸ್ಥೆಯಲ್ಲಿರುವ ಈ ಎರಡೂ ಕಟ್ಟಡಗಳನ್ನು ನೆಲಸಮಗೊಳಿಸಿ ಪಾರಂಪರಿಕ ಶೈಲಿಯಲ್ಲೇ ಹೊಸದಾಗಿ ನಿರ್ಮಿಸಲು ಮೈಸೂರು ಮಹಾನಗರ ಪಾಲಿಕೆಯು ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಕುರಿತು ಇತ್ತೀಚೆಗಷ್ಟೇ ಮೈಸೂರಿನಲ್ಲಿ ಸಭೆ ನಡೆಸಿದ್ದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಸಂಪುಟ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ಈ ಯೋಜನೆಗೆ ಅನುಮೋದನೆ ಪಡೆಯುವುದಾಗಿ ಭರವಸೆ ನೀಡಿದ್ದರು.

ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ರಾಜಮನೆತನದ ಸದಸ್ಯರಲ್ಲೊಬ್ಬರಾದ ರಾಜಾಚಂದ್ರ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ತಮ್ಮ ಹಾಗೂ ಗೌರಿಸತ್ಯ ಅವರು ಸಲ್ಲಿಸಿರುವ ಸ್ಪೆಷಲ್ ಲೀವ್ ಪಿಟಿಷನ್ (SLP) ಸಂಬಂಧ ಸರ್ವೋಚ್ಚ ನ್ಯಾಯಾಲಯವು ವಿಚಾರಣೆ ಕೈಗೆತ್ತಿಕೊಂಡಿದೆ ಎಂದರು.

ಡಿಸೆಂಬರ್ 4ರಂದು ನಡೆದ ವಿಚಾರಣೆ ವೇಳೆ ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ (ASI) ಮತ್ತು INTACH ಸಂಸ್ಥೆಗಳನ್ನು ಪಾರ್ಟಿಯನ್ನಾಗಿ ಮಾಡಿರುವುದನ್ನು ನ್ಯಾಯಮೂರ್ತಿ ಸುಧಾಂಶು ದುಲಿಯಾ ಮತ್ತು ನ್ಯಾಯಮೂರ್ತಿ ಅಸಾನುದ್ದಿನ್ ಅಮಾನುಲ್ಲಾರನ್ನೊಳಗೊಂಡ ಪೀಠವು ಗಮನಿಸಿದೆ ಎಂದು ಅವರು ತಿಳಿಸಿದರು.

ವಾದ ಆಲಿಸಿದ ಪೀಠವು, ಎಎಸ್‌ಐ ಮತ್ತು ಇಂಟಕ್ ಸಂಸ್ಥೆಗಳನ್ನು ಪ್ರಕರಣದಲ್ಲಿ ಪಾರ್ಟಿಯನ್ನಾಗಿ ಮಾಡಿ ಅವರಿಗೆ ನೋಟಿಸ್ ನೀಡಬೇಕೆಂದು ಸೂಚಿಸಿದೆ. ಈ ವಿಷಯವನ್ನು 2025ರ ಜನವರಿ 8ರಂದು ನಡೆಯುವ ವಿಚಾರಣೆಗೆ ಪಟ್ಟಿ ಮಾಡಿ ಸಲ್ಲಿಸುವಂತೆಯೂ ಪೀಠವು ಸೂಚಿಸಿದೆ. ಅರ್ಜಿದಾರರ ಪರವಾಗಿ ವಕೀಲ ಡಾ.ಆದಿತ್ಯ ಸೋಂಧಿ ಅವರು ವಿಚಾರಣೆಗೆ ಹಾಜರಾಗಿದ್ದರು.

137 ವರ್ಷಗಳ ಹಳೆಯದಾದ, ಶಿಥಿಲಾವಸ್ಥೆಯಲ್ಲಿರುವ ದೇವರಾಜ ಮಾರುಕಟ್ಟೆ ಕಟ್ಟಡವನ್ನು ಕೆಡವಿ ಪುನರ್ ನಿರ್ಮಿಸಲು ಮುಂದಾಗಿರುವ ಪಾಲಿಕೆ ಕ್ರಮ ಸಂಬಂಧ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು, ರಾಜ್ಯ ಹೈಕೋರ್ಟ್ ವಜಾಗೊಳಿಸಿದ್ದರಿಂದ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಳೆ ಮತ್ತು ನ್ಯಾಯಮೂರ್ತಿ ಎಂಜಿಎಸ್ ಕಮಲ್ ಒಳಗೊಂಡ ವಿಭಾಗೀಯ ಪೀಠವು 2023ರ ಆಗಸ್ಟ್ 8ರಂದು ಪಿಐಎಲ್ ಅನ್ನು ವಜಾಗೊಳಿಸಿತ್ತು. ಪ್ರೊ. ಡಿ.ಶೈಜಯ್ ದೇವರಾಜ ಅರಸ್, ಜಿ.ಸತ್ಯನಾರಾಯಣ (ಗೌರಿ ಸತ್ಯ), ಎನ್.ನಿರಂಜನ್ ನಿಕ್ಕಂ (ನಿಧನರಾಗಿದ್ದಾರೆ) ಮತ್ತು ರಾಜಾಚಂದ್ರ ಸೇರಿದಂತೆ ಮೈಸೂರು ನಾಗರಿಕರ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು.

ದೇವರಾಜ ಮಾರುಕಟ್ಟೆ ಕಟ್ಟಡ ಶಿಥಿಲಗೊಂಡಿರುವುದರಿಂದ ನೆಲಸಮಗೊಳಿಸಬೇಕೆಂದು ಜಿಲ್ಲಾಧಿಕಾರಿಗಳು ರಚಿಸಿದ್ದ ಟಾಸ್ಕ್‌ಫೋರ್ಸ್ ಕಮಿಟಿ ಮತ್ತು ವಿಶೇಷ ಪಾರಂಪರಿಕ ಸಮಿತಿಯು ಶಿಫಾರಸು ಮಾಡಿತ್ತು.

ಹೈಕೋರ್ಟ್ ತೀರ್ಪು ಪ್ರಶ್ನಿಸಿ ನಾವು ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈಗ ರಾಜ್ಯ ಸರ್ಕಾರವು ದೇವರಾಜ ಮಾರುಕಟ್ಟೆ ಕಟ್ಟಡ ನೆಲಸಮಗೊಳಿಸಲು ಡಿಪಿಆರ್‌ಗೆ ಸಂಪುಟ ಒಪ್ಪಿಗೆ ನೀಡಲು ಅಡ್ಡಿಯಾಗುವ ಸಂಭವವಿದೆ ಎಂದು ರಾಜಾಚಂದ್ರ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕು. ಆ ಸಂಬಂಧ ಯಾವುದೇ ಪಕ್ಷಪಾತವಿಲ್ಲದ ಬಾಹ್ಯ ಸಂಸ್ಥೆಗಳ ಪರಿಣತರಿಂದ ಅಭಿಪ್ರಾಯ ಪಡೆಯಬೇಕೆಂದು ನಾವು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ್ದೇವೆ ಎಂದು ಅವರು ತಿಳಿಸಿದರು.

ಮೈಸೂರು–ನಂಜನಗೂಡು ಮಹಾಯೋಜನೆ–2031ರನ್ವಯ ದೇವರಾಜ ಮಾರುಕಟ್ಟೆಯನ್ನು ಗ್ರೇಡ್–1 ಪಾರಂಪರಿಕ ಕಟ್ಟಡ ಎಂದು ವರ್ಗೀಕರಿಸಿದ್ದಾಗ್ಯೂ, ವಿಶೇಷ ಪಾರಂಪರಿಕ ಸಮಿತಿಯು ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸಲು ವಿಫಲವಾಗಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಎಸ್.ಎಂ.ಕೃಷ್ಣ ಇಂದಿನ ಯುವ ರಾಜಕಾರಣಿಗಳಿಗೆ ಮಾದರಿ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್



ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣ ಮತ್ತು ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಮೈಸೂರು,ಡಿ.11(ಪಿಎಂ)– ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮತ್ತು ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ ಅವರ ನಿಧನದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಕೃಷ್ಣ ಹಾಗೂ ಜಯಣ್ಣ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಸಂತಾಪ ಸೂಚಿಸಲಾಯಿತು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮಾತನಾಡಿ, ಅಂದು 2004ನೇ ಇಸವಿಯಲ್ಲಿ ನಾನು ಮೈಸೂರಿನ ಉಪಮೇಯರ್ ಆಗಲು ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಕಾರಣ. ಅವರು ನನ್ನ ನಾಯಕತ್ವ ಗುರುತಿಸಿ ಅವಕಾಶ ಕಲ್ಪಿಸಿದರು ಎಂದು ಸ್ಮರಿಸಿದರು.

ಮುಖ್ಯಮಂತ್ರಿಗಳಾಗಿ ಎಸ್.ಎಂ.ಕೃಷ್ಣರ ಕೊಡುಗೆ ನಾಡಿಗೆ ಅಪಾರ. ಮೈಸೂರಿನಲ್ಲಿ ಹೊರವರ್ತುಲ ರಸ್ತೆ ಅಭಿವೃದ್ಧಿಗೆ ಅವಕಾಶ ಕಲ್ಪಿಸಿದರು. ಚಾಮುಂಡಿಬೆಟ್ಟ, ನಂಜನಗೂಡು ದೇವಸ್ಥಾನಗಳ ಅಭಿವೃದ್ಧಿಗೂ ಅನುವು ಮಾಡಿದರು. ಸಹಕಾರಿ ಕ್ಷೇತ್ರದಲ್ಲಿ ಯಶಸ್ವಿನಿ ಯೋಜನೆ ಜಾರಿಗೆ ತಂದರು. ಇದರಿಂದ ಇಂದಿಗೂ ಸಾಕಷ್ಟು ಪ್ರಯೋಜನಗಳು ಸಹಕಾರಿ ಕ್ಷೇತ್ರದವರಿಗೆ ಲಭ್ಯವಾಗುತ್ತಿದೆ. ಮಹಿಳೆಯರ ಆರ್ಥಿಕಾಭಿವೃದ್ಧಿಗಾಗಿ ಸ್ತ್ರೀ ಸಂಘಗಳ ಸ್ಥಾಪನೆಗೆ ಅವಕಾಶವಾಗುವಂತೆ ಮಾಡಿದರು. ಬರಗಾಲವಿದ್ದ ಹಿನ್ನೆಲೆಯಲ್ಲಿ ಮೋಡ ಬಿತ್ತನೆ ಎಂಬ ಪ್ರಯೋಗಕ್ಕೂ ನಾಂದಿ ಹಾಡಿದರು ಎಂದು ತಿಳಿಸಿದರು.

ವಿಧಾನ ಸಭಾಧ್ಯಕ್ಷರು ಹಾಗೂ ಕೇಂದ್ರದ ಸಚಿವರಾಗಿ ಅಜಾತಶತ್ರು ಎನ್ನಿಸಿಕೊಂಡು ಮೌಲ್ಯಯುತ ರಾಜಕಾರಣಕ್ಕೆ ಕೃಷ್ಣ ಹೆಸರಾಗಿದ್ದಾರೆ. ಆ ಮೂಲಕ ಜನಮಾನಸದಲ್ಲಿ ಅವರು ಶಾಶ್ವತವಾಗಿದ್ದಾರೆ. ಇಂದಿನ ಯುವ ರಾಜಕಾರಣಿಗಳಿಗೆ ಅವರು ಮಾದರಿಯಾಗಿದ್ದಾರೆ ಎಂದರು.

ಜೊತೆಗೆ ಮಾಜಿ ಶಾಸಕರೂ ಆದ ಹಾಲಿ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ ಅವರು ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಿದ್ದಾರೆ. ಆ ಮೂಲಕ ಹಲವು ಶ್ರಮಿಕ ವರ್ಗದವರನ್ನು ಮುಖ್ಯವಾಹಿನಿಗೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಅಗಲಿಕೆಯೂ ತುಂಬಲಾರದ ನಷ್ಟವಾಗಿದೆ ಎಂದು ಸಂತಾಪ ಸೂಚಿಸಿದರು. ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಪಾಲಿಕೆ ಮಾಜಿ ಸದಸ್ಯರಾದ ಫೈರೋಜ್ ಖಾನ್, ರಘುರಾಜೇ ಅರಸ್, ಮುಖಂಡರಾದ ಶೌಕತ್ ಅಲಿಖಾನ್, ಮಲ್ಲಿಕಾರ್ಜುನ, ರಂಗಸ್ವಾಮಿ ಪಾಪು, ಪದ್ಮನಾಭನ್, ಮೆಲ್ಲಹಳ್ಳಿ ರಾಜೇಶ್ ಸಿ.ಗೌಡ, ಮಹೇಂದ್ರ ಕಾಗಿನೆಲೆ, ಸುಬ್ರಹ್ಮಣ್ಯ, ಹರೀಶ್ ಮೊಗಣ್ಣಚಾರ್, ಪ್ರವೀಣ್, ಜಯಲಕ್ಷ್ಮೀ, ವನಜಾಕ್ಷಿ, ಎಸ್.ಪಿ.ಸಿದ್ದರಾಜೇ ಅರಸ್, ನಾಗೇಶ್, ಗುರುರಾಜ್, ಈಶ್ವರ್ ಚಕ್ಕಡಿ ಮತ್ತಿತರರಿದ್ದರು.

ಸುತ್ತೂರು ಕ್ಷೇತ್ರದಲ್ಲಿ ಶಿವದೀಪೋತ್ಸವ

ಮೈಸೂರು,ಡಿ.11–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃಗದ್ದುಗೆಯಲ್ಲಿ ಡಿ.13ರಂದು ಶುಕ್ರವಾರ ಸಂಜೆ ಶಿವದೀಪೋತ್ಸವ–ಕೃತ್ತಿಕೋತ್ಸವವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಸಂಜೆ ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು, ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ ಇರುತ್ತದೆ. ಜಾತ್ರಾ ಮಹೋತ್ಸವ ಪ್ರಸಾರ ರಥಕ್ಕೆ ಚಾಲನೆ ನೀಡಲಾಗುವುದು. ನಂತರ ಪದವಿಪೂರ್ವ ಶಿಕ್ಷಣ ಇಲಾಖೆ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಂಯೋಜನಾಧಿಕಾರಿ ಡಾ.ಗುಬ್ಬಿಗೂಡು ರಮೇಶ್ ಉಪನ್ಯಾಸ ನೀಡಲಿದ್ದಾರೆ.

ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ದೀಪೋತ್ಸವಗಳು ನೆರವೇರಲಿವೆ. ನಂತರ ಪ್ರಸಾದದ ವ್ಯವಸ್ಥೆ ಇರುತ್ತದೆ. ಶ್ರೀ ಕ್ಷೇತ್ರದ ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ.




ನಾಟಕದ ಪಾತ್ರಧಾರಿಗೆ ಸನ್ಮಾನ
ಮೈಸೂರಿನ ಪುರಭವನದಲ್ಲಿ ನಡೆದ ದಕ್ಷಯಜ್ಞ ನಾಟಕದಲ್ಲಿ ಭೃಗುವಿನ ಪಾತ್ರ ನಿರ್ವಹಿಸಿದ ಮೈಸೂರಿನ ಜೆಪಿ.ನಗರದ ನಿವಾಸಿ ಮುಳ್ಳೂರಿನ ಎಂ.ಪಾರ್ವತಪ್ಪ ಅವರನ್ನು ಸನ್ಮಾನಿಸಲಾಯಿತು. ರುವಾರಿ ಮುಳ್ಳೂರು ದೇವರಾಜು, ಚಿಕ್ಕಹಳ್ಳಿ ಪುಟ್ಟಣ್ಣ, ಕೆರೆಹಳ್ಳಿ ಬಿ.ದೊರೆಸ್ವಾಮಿ, ಕಾಂಗ್ರೆಸ್ ಮುಖಂಡರಾದ ಹುಯಿಲಾಳು ರಾಮಸ್ವಾಮಿ, ತುಮಕೂರು ಮಂಜು, ರಾಮನಗರದ ರಾಜಣ್ಣ, ಹೂಟಗಳ್ಳಿ ನಾಗರಾಜು, ಪ್ರಭುಲಿಂಗಸ್ವಾಮಿ, ಮುಳ್ಳೂರಿನ ಗ್ರಾಮಸ್ಥರು ಉಪಸ್ಥಿತರಿದ್ದರು.

ಶತಾಯುಷಿಗಳಿಗೆ ಸನ್ಮಾನ: ಅರ್ಜಿ ಆಹ್ವಾನ

ಮೈಸೂರು,ಡಿ.11–ಮೈಸೂರಿನ ಶ್ರೀರಾಂಪುರದ ಶ್ರೀ ಜೈನ್ ಎಜುಕೇಶನ್ ಸೊಸೈಟಿ, ಮಹಾವೀರ್ ವಿದ್ಯಾಮಂದಿರದ ವತಿಯಿಂದ ಅಜ್ಜ ಅಜ್ಜಿಯರ ದಿನವನ್ನು ಆಚರಿಸುತ್ತಿದ್ದು, ಆ ದಿನದಂದು 100 ವರ್ಷ ಅಥವಾ 100 ವರ್ಷ ಮೇಲ್ಪಟ್ಟ ಹಿರಿಯರನ್ನು ಸನ್ಮಾನಿಸಿ ಗೌರವಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಶತಾಯುಷಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮೈಸೂರಿನ ಸುತ್ತಮುತ್ತಲಿನ ಹಿರಿಯ ನಾಗರಿಕರು ತಮ್ಮ ಆಧಾರ್ ಪ್ರತಿಯೊಂದಿಗೆ ತಮ್ಮ ಹೆಸರನ್ನು ಮೊಬೈಲ್ ಸಂಖ್ಯೆ: 8147471375 ಮೂಲಕ ಸಂಪರ್ಕಿಸಿ ನೋಂದಾಯಿಸಿಕೊಳ್ಳಬೇಕೆಂದು ಶ್ರೀ ಮಹಾವೀರ್ ವಿದ್ಯಾಮಂದಿರದ ಕಾರ್ಯದರ್ಶಿ ಜೆ.ಇಬ್ಬಾ ಮನವಿ ಮಾಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.12.2024 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಮೈಸೂರಿನ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತಾತ್ರೇಯ ಜಯಂತಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮ, ಬೆಳಗ್ಗೆ 7 ಗಂಟೆಯಿಂದ ಅಹೋರಾತ್ರಿ ಅಖಂಡ ಹನುಮಾನ್ ಚಾಲೀಸಾ ಪಾರಾಯಣ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ಕಾಯಿಲೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಸಮಾರೋಪ ನುಡಿ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಪದವಿಪೂರ್ವ ಕಾಲೇಜು ಉಪನಿರ್ದೇಶಕ ಎಂ. ಮರಿಸ್ವಾಮಿ, ಉಪಸ್ಥಿತರು: ಪ್ರಾಂಶುಪಾಲ ಡಾ. ಅನಿಲ್ ಎಸ್. ಕರಭೀಮಗೋಳ, ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ ಬೆಳಗ್ಗೆ 10ರಿಂದ.

■ **ಸುಯೋಗ್ ಆಸ್ಪತ್ರೆ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ಶ್ರೀ ಕ್ಷೇತ್ರ ಗೊಮ್ಮಟಗಿರಿ ಸೇವಾ ಸಮಿತಿ :** ಶ್ರೀಕ್ಷೇತ್ರ ಗೊಮ್ಮಟಗಿರಿ ಭಗವಾನ್ ಬಾಹುಬಲಿಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ ಅಮೃತ ಮಹೋತ್ಸವ, ಜಾತ್ರಾ ಮಹೋತ್ಸವ, ಸ್ಥಳ: ಶ್ರೀಕ್ಷೇತ್ರ ಗೊಮ್ಮಟಗಿರಿ, ಇಲವಾಲ, ಬೆಳಗ್ಗೆ 10 ರಿಂದ.

■ **ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ, ಹಿರಿಯ ನಾಗರಿಕರ ಮಂಡಳಿ:** ಸಂಸ್ಥಾಪನಾ ದಿನಾಚರಣೆ, ಉದ್ಘಾಟನೆ: ಕಲುಬುರ್ಗಿ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಎಸ್.ಆರ್.ನಿರಂಜನ್, ಮುಖ್ಯ ಅತಿಥಿಗಳು: ರೋಟರಿ ಸಂಸ್ಥೆ ಮಾಜಿ ಡಿಸ್ಟ್ರಿಕ್ಟ್ ಗೌರ್ನರ್ ಜಿ.ಕೆ.ಬಾಲಕೃಷ್ಣ, ಸನ್ಮಾನಿತರು: ಡಾ.ಎಚ್.ಎಸ್. ಶಿವಣ್ಣ, ಅಣ್ಣೇಗೌಡ, ಎಸ್.ಜೆ.ಸತ್ಯನಾರಾಯಣ, ಜಯಪಾಲ, ಮನೋರಮಾ, ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಎಚ್.ಎಂ.ನಾಗರಾಜು, ಅಧ್ಯಕ್ಷತೆ: ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಛೇರ್ಮನ್ ಎಸ್.ವಿ.ಗೌಡಪ್ಪ, ಸ್ಥಳ: ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸೇನಾ ಪಡೆ :** ಕರ್ನಾಟಕ ಏಕೀಕರಣ ಮಹೋತ್ಸವದ ಅಂಗವಾಗಿ ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ ಹಾಗೂ ಕುವೆಂಪುರವರ ಸ್ಮರಣೆ ಕಾರ್ಯಕ್ರಮ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ, ಪುಷ್ಪಾರ್ಚನೆ : ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಸಾಧಕರಿಗೆ ಸನ್ಮಾನ: ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಟಿ. ಜವರೇಗೌಡ, ಅಧ್ಯಕ್ಷತೆ : ಮಾಜಿ ಮೇಯರ್ ಹೆಚ್. ಶ್ರೀಕಂಠಯ್ಯ, ಸ್ಥಳ: ರೋಟರಿ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30 ರಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30 ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6 ರಿಂದ ಹಸನ್ಮುಖಿ ಭಜನಾ ಮಂಡಳಿ ಅವರಿಂದ ಭಜನೆ, ಸಂಜೆ 7 ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಭಗವದ್ಗೀತೆ ಪ್ರವಚನ–6ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್:** ಹನುಮ ಜಯಂತಿ, ಸಂಜೆ 6.30ಕ್ಕೆ ಪುಣ್ಯಾಹವಾಚನ, ರಕ್ಷಾಬಂಧನ, ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, ರಾತ್ರಿ 9.30ಕ್ಕೆ ಪೂರ್ಣಾ ಹುತಿ, ಮಹಾಮಂಗಳಾರತಿ, ರಾತ್ರಿ 10 ಗಂಟೆ ನಂತರ ಶ್ರೀ ಮುರುಗನ್ ತಂಡದವರಿಂದ ಅಖಂಡ ಭಜನೆ ಕಾರ್ಯಕ್ರಮ, ಸ್ಥಳ: ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಬನ್ನಿಮಂಟಪ 'ಸಿ' ಬಡಾವಣೆ, ಹನುಮಂತನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು. ಎಸ್.ರಾಜಲಕ್ಷ್ಮಿ –ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ–ಚಂದ್ರಶೇಖರ ಪಾಟೀಲ್, ಉಪ ಅರಣ್ಯ ಸಂರಕ್ಷಣಾಧಿ ಕಾರಿಗಳು, ಅರಣ್ಯ ಸ್ಕ್ವಾಡ್ ಮೈಸೂರು ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ, ಮೈಸೂರು ಆಕಾಶವಾಣಿ ಆವರಣದಲ್ಲಿ ನಡೆದ ರೈತ ಉತ್ಪಾದಕ ಕಂಪನಿಗಳು ಹಾಗೂ ಖರೀದಿದಾರರ ಸಂವಾದ ಕಾರ್ಯಕ್ರಮದ ಬಾನುಲಿ ಅವತರಣಿಕೆಗಳು, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ–ಮೈಸೂರಿನ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ (ಭಾಗ–1), 9.30 ಕನ್ನಡ ಭಾರತಿ, 10.00 ಸಂಸ್ಕೃತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ



ಅಗಲಿದ ನಾಯಕ ಎಸ್.ಎಂ.ಕೃಷ್ಣ ಅವರ ಅಂತಿಮ ಸಂಸ್ಕಾರದ ವೇಳೆ ರಾಜ್ಯ ಸಶಸ್ತ್ರ ಪೊಲೀಸ್ ಪಡೆ ಆಗಸದೆಡೆಗೆ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಸರ್ಕಾರಿ ಗೌರವ ಸಲ್ಲಿಸಿತು.

ಅಂತ್ಯಸಂಸ್ಕಾರ ಕಾರ್ಯಕ್ಕೆ ಸಾಕ್ಷಿಯಾದ ಘಟಾನುಘಟಿ ನಾಯಕರು

ಸೋಮನಹಳ್ಳಿ (ಮದ್ದೂರು ತಾಲೂಕು)ಡಿ.11– ಎಸ್.ಎಂ.ಕೃಷ್ಣ ಅವರ ಅಂತ್ಯ ಸಂಸ್ಕಾರಕ್ಕೆ ಘಟಾನುಘಟಿ ನಾಯಕರು ಸಾಕ್ಷಿಯಾದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ನಿಡುಮಾಮಿಡಿ ಮಠದ ವೀರಚನ್ನಮಲ್ಲ ಸ್ವಾಮೀಜಿ, ದುರ್ದುಂಡೇಶ್ವರ ಮಠದ ಶಿವಯೋಗಿ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಚಿವರಾದ ಡಾ.ಜಿ.ಪರಮೇಶ್ವರ್, ಹೆಚ್.ಕೆ.ಪಾಟೀಲ್, ಡಾ.ಎಂ.ಸಿ.ಸುಧಾಕರ್, ಎನ್.ಚಲುವರಾಯಸ್ವಾಮಿ, ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಆರ್.ಬಿ.ತಿಮ್ಮಾಪುರ, ಡಿ.ಸುಧಾಕರ್, ಲಕ್ಷ್ಮಿ ಹೆಬ್ಬಾಳ್ಕರ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ಡಾ.ಸುಧಾಕರ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಶಾಸಕರಾದ ಪಿ.ರವಿಕುಮಾರ್ ಗಣಿಗ, ಕೆ.ಎಂ.ಉದಯ್, ಪಿ.ಎಂ. ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ರಮೇಶ ಬಂಡಿ ಸಿದ್ದೇಗೌಡ, ಟಿ.ಬಿ.ಜಯಚಂದ್ರ, ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಕೆ.ಶಿವಲಿಂಗೇಗೌಡ, ಕುಣಿಗಲ್ ರಂಗನಾಥ್, ಮುನಿರತ್ನ, ಎಸ್.ಟಿ.ಸೋಮಶೇಖರ್, ಹೆಚ್.ವಿಶ್ವನಾಥ್, ಸಿ.ಪಿ.ಯೋಗೇಶ್ವರ್, ಸಿ.ಟಿ.ರವಿ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಅಶೋಕ್ ಪಟ್ಟಣ, ಎನ್.ಎ. ಹ್ಯಾರೀಸ್, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಎಚ್.ಆಂಜನೇಯ, ಮಾಜಿ ಶಾಸಕರಾದ ರವೀಂದ್ರ ಶ್ರೀಕಂಠಯ್ಯ, ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ಎಲ್.ಆರ್.ಶಿವರಾಮೇಗೌಡ, ಮಲ್ಲಾಜಮ್ಮ, ಬಿ.ಸೋಮಶೇಖರ್, ಬಿ.ರಾಮಕೃಷ್ಣ, ಕಲ್ಪನಾ ಸಿದ್ದರಾಜು, ಕೆ.ಸಿ. ನಾರಾಯಣಗೌಡ, ಮಾಜಿ ಸಂಸದರಾದ ಸುಮಲತಾ ಅಂಬರೀಷ್, ಡಿ.ಕೆ.ಸುರೇಶ್, ನಟ ಅಭಿಷೇಕ್ ಅಂಬರೀಷ್, ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ, ವಾಗ್ಮಿ ಪ್ರೊ.ಕೃಷ್ಣೇಗೌಡ, ಡಿ.ಕೆ.ಶಿವಕುಮಾರ್ ಪತ್ನಿ ಉಷಾ, ಪುತ್ರ ಆಕಾಶ್ ಸೇರಿದಂತೆ ಹಲವು ಮಂದಿ ಗಣ್ಯರು ಭಾಗವಹಿಸಿದ್ದರು.



ಅಂತಿಮ ದರ್ಶನಕ್ಕೆ ಬರುತ್ತಿರುವ ಜನಸಮೂಹ

ಸಂಸ್ಕಾರವಂತ ಮನುಷ್ಯ ಹೇಗಿರಬೇಕು ಎಂಬುದಕ್ಕೆ ಎಸ್.ಎಂ.ಕೃಷ್ಣ ಮಾದರಿ

ತುಮಕೂರು, ಡಿ.11– ಸಂಸ್ಕಾರವಂತ ಮನುಷ್ಯ ಹೇಗಿರಬೇಕು ಎಂಬುದಕ್ಕೆ ಎಸ್.ಎಂ.ಕೃಷ್ಣ ಮಾದರಿಯಾಗಿದ್ದರು. ಅವರ ರಾಜಕೀಯ ಹಾಗೂ ಖಾಸಗಿ ಜೀವನದಲ್ಲಿ ಒರಟಾಗಿ, ಏಕವಚನದಲ್ಲಿ ಮಾತನಾಡಿದ್ದು ನಾವು ನೋಡಿಲ್ಲ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದ್ದಾರೆ.



ಮಾಧುಸ್ವಾಮಿ

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನಿಧನ ಹಿನ್ನೆಲೆ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿ ಸಂತಾಪ ಸೂಚಿಸಿ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ಅವರು ಕರ್ನಾಟಕ ರಾಜ್ಯದಲ್ಲಿ ಯಾವುದೇ ರಾಜಕಾರಣಿ ಪಡೆಯದಂತಹ ಸ್ಥಾನ, ಗೌರವ ಪಡೆದಿದ್ದಾರೆ. ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಎಲ್ಲಾ ಆಯಾಮಗಳಲ್ಲೂ ಕೆಲಸ ಮಾಡಿದ್ದಾರೆ. ಎಲ್ಲಾ ಸೇವೆಗೂ ಗೌರವ ತಂದುಕೊಡುವ ವ್ಯಕ್ತಿತ್ವ ಅವರದ್ದು ಎಂದರು.

ನಾವು ರಾಜಕಾರಣಕ್ಕೆ ಬರುವ ಮೊದಲೇ ಅವರು ಹಿರಿಯ ರಾಜಕಾರಣಿಯಾಗಿದ್ದರು. ನಮಗೆಲ್ಲಾ ತುಂಬಾ ಗೌರವ ಕೊಟ್ಟು ಮಾತನಾಡಿಸುತ್ತಿದ್ದರು. 1989–90ರಲ್ಲೇ ವಿಧಾನಸಭೆ ಸ್ಪೀಕರ್ ಆಗಿದ್ದರು. ವಿಧಾನಸಭೆಯಲ್ಲಿ ನಮ್ಮನ್ನು ಗುರುತಿಸಿ ಮಾತನಾಡಲು ಅವಕಾಶ ನೀಡುತ್ತಿದ್ದರು. ಅವರು ತೋರಿಸುತ್ತಿದ್ದ ಸೌಜನ್ಯ, ಹಾಗೂ ರಾಜಕೀಯ ಶಕ್ತಿಯನ್ನು ಎಂದಿಗೂ ಮರೆಯೋದಿಲ್ಲ. ವಿಧಾನಸಭೆಯಲ್ಲಿ ನಮ್ಮನ್ನು ಮೊದಲು ಗುರುತಿಸಿದ್ದು ಕೃಷ್ಣರವರು. ಆರಂಭದ ದಿನಗಳಲ್ಲಿ ಇಂತಹ ವಿಷಯಗಳಿಗೆ ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡುತ್ತಿದ್ದರು. ವಿಧಾನಸಭೆಯಲ್ಲಿ ಯಾರಿಗೂ ತಾರತಮ್ಯ ಮಾಡದೇ ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದರು. ಮಂತ್ರಿಯಾದ ಮೇಲೆ ನಮಗೆ ಹೆಚ್ಚಿನ ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಕಾರಣರಾಗಿದ್ದರು.

ರಾಷ್ಟ್ರಧ್ವಜ ಹಸ್ತಾಂತರ



ಸಂಜೆ 4.40ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜವನ್ನು, ಎಸ್.ಎಂ.ಕೃಷ್ಣ ಅವರ ಪತ್ನಿ ಪ್ರೇಮಾ, ಪುತ್ರಿ ಶಾಂಭವಿ ಅವರಿಗೆ ಹಸ್ತಾಂತರಿಸಿದರು.

ಸಂಜೆ 4:45ಕ್ಕೆ ಮೊಮ್ಮಗ ಅಮರ್ಥ್ಯ ಹೆಗಡೆ ನೇತೃತ್ವದಲ್ಲಿ ಸಂಬಂಧಿಗಳಾದ ಗುರುಚರಣ್, ಆಕಾಶ್ ಸೇರಿದಂತೆ ಕುಟುಂಬಸ್ಥರು ಪಾರ್ಥಿವ ಶರೀರವನ್ನು ಶವಪೆಟ್ಟಿಗೆಯಿಂದ ತೆಗೆದು ಹೂವಿನಿಂದ ಅಲಂಕೃತಗೊಂಡಿದ್ದ ಚಟ್ಟಕ್ಕೆ ಸ್ಥಳಾಂತರಿಸಿದರು. ತದನಂತರ ಪಾರ್ಥಿವ ಶರೀರವನ್ನು ಅಂತ್ಯಸಂಸ್ಕಾರಕ್ಕೆ ಏರ್ಪಾಡು ಮಾಡಿದ್ದ ಸ್ಥಳಕ್ಕೆ ತಂದು ಶ್ರೀಗಂಧದಿಂದ ಸಜ್ಜುಗೊಂಡಿದ್ದ ಚಿತೆ ಮೇಲೆ ಮಲಗಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಟ್ಟಕ್ಕೆ ಹೆಗಲು ಕೊಟ್ಟು ರಾಜಕೀಯ ಗುರುವಿಗೆ ಕಣ್ಣೀರಿಡುತ್ತಲೇ ಅಂತಿಮ ನಮನ ಸಲ್ಲಿಸಿದರು.

ಶ್ರೀಗಂಧದ ತುಂಡುಗಳ ಮೇಲೆ ಬಾಳೆಎಲೆ ಹರಡಿ, ಚಿತೆಯ ಸುತ್ತ ಪುರೋಹಿತರು, ಕುಟುಂಬಸ್ಥರು ಗೋವಿನ ತುಪ್ಪ ಹಾಕಿದರು. ತಮಟೆಯ ವಾದನ, ವೇದಘೋಷಗಳೊಂದಿಗೆ ಪಾರ್ಥಿವ ಶರೀರವನ್ನು ಸಂಜೆ 4.55ಕ್ಕೆ ಚಿತೆಯ ಮೇಲೆ ಮಲಗಿಸಲಾಯಿತು. ಮೊಮ್ಮಗ ಅಮರ್ಥ್ಯ ಹೆಗಡೆಯವರು ಮತ್ತು ಕುಟುಂಬಸ್ಥರು ಅಕ್ಕಿ ಹಾಕಿ, ಗಂಧದ ಚಕ್ಕೆಯನ್ನು ಇಟ್ಟರು. ಕೊನೆಯ ಬಾರಿಗೆ ಎಸ್.ಎಂ.ಕೃಷ್ಣ ಅವರ ಮುಖವನ್ನು ನೋಡಿ ಭಾವುಕರಾಗಿಯೇ ಅಂತಿಮ ವಿಧಿ–ವಿಧಾನವನ್ನು ನೆರವೇರಿಸಿದರು.

ಯಾರನ್ನೂ ದ್ವೇಷಿಸಲಿಲ್ಲ: ಎಸ್.ಎಂ.ಕೃಷ್ಣ ಅಗಲಿಕೆಯ ಕುರಿತು ನೋವು ಹಂಚಿಕೊಂಡ ನಟಿ ರಮ್ಯಾ

ಬೆಂಗಳೂರು, ಡಿ.11– ಕರುನಾಡು ಕಂಡ ಅದಮ್ಯ ಚೇತನ, ಸೌಮ್ಯ ಸ್ವಭಾವದ ಅಜಾತಶತ್ರು, ದೂರದೃಷ್ಟಿಯ ಕನಸುಗಾರ ಮಾಜಿ ಸಿಎಂ ಎಸ್.ಎಂ ಕೃಷ್ಣ ಅವರ ಅಗಲಿಕೆಯ ಕುರಿತು ನಟಿ ಹಾಗೂ ಮಾಜಿ ಸಂಸದೆ ರಮ್ಯಾ ನೋವಿನ ನುಡಿಗಳನ್ನು ಹಂಚಿಕೊಂಡಿದ್ದಾರೆ. ತಮ್ಮ ಸೋಷಿಯಲ್ ಮೀಡಿಯಾ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ಕುರಿತು ಭಾವುಕ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಒಬ್ಬ ಸ್ಟೇಟ್‌ಮನ್ ಎಲ್ಲಾ ಅರ್ಥಗಳಲ್ಲಿ ರಾಜಕಾರಣಿ ಎಂದಿಗೂ ಅಲ್ಲ. ಅವರು ಯಾರನ್ನೂ, ತಮ್ಮ ಪ್ರತಿಸ್ಪರ್ಧಿಗಳನ್ನು ಸಹ ದ್ವೇಷಿಸಿ ಮಾತನಾಡಲಿಲ್ಲ. ಭವಿಷ್ಯದ ದೃಷ್ಟಿಯುಳ್ಳವ, ದಯಾಮಯಿ ಅನುಕಂಪದಿಂದ ಕೂಡಿರುವ, ಸುಂದರವಾಗಿ ಮಾತನಾಡುವ, ವಿದ್ಯಾವಂತ, ಹಾಸ್ಯಭರಿತ ವ್ಯಕ್ತಿತ್ವದವರು ನೀವು, ನಿಮ್ಮಂತೆ ಮತ್ತೊಬ್ಬರು ಇರಲು ಆಗುವುದಿಲ್ಲ.. ಎಲ್ಲದಕ್ಕಾಗಿ ಧನ್ಯವಾದಗಳು ಎಂದು ಬರೆದುಕೊಂಡಿದ್ದಾರೆ. ಕೊನೆಯಲ್ಲಿ ನೀವು ಈಗ ನಿಮ್ಮ ಬೆಸ್ಟ್‌ಫ್ರೆಂಡ್ ಜೊತೆಗೆ ಇದ್ದೀರಾ ಎಂದು ಬರೆದು ಹಾರ್ಟ್ ಎಮೋಜಿ ಹಾಕಿದ್ದಾರೆ. ಮಂಗಳವಾರ (ಡಿ.10) ಸದಾಶಿವನಗರಕ್ಕೆ ಆಗಮಿಸಿ ಎಸ್‌ಎಂ ಕೃಷ್ಣ ಪಾರ್ಥಿವ ಶರೀರಕ್ಕೆ ರಮ್ಯಾ ಅಂತಿಮ ನಮನ ಸಲ್ಲಿಸಿ, ಯಾವುದೇ ಪ್ರತಿಕ್ರಿಯೆ ನೀಡದೇ ಹೊರಟಿದ್ದರು. ಈಗ ನಾನು ಮಾತನಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಹೇಳಿ ತೆರಳಿದ್ದರು.



ಜಿಟಿಡಿಯಿಂದ ಎಸ್.ಎಂ.ಕೃಷ್ಣರಿಗೆ ಅಂತಿಮ ನಮನ



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಪ್ರಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನಿಟ್ಟು ನಮನ ಸಲ್ಲಿಸಿದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಅಂತಿಮ ದರ್ಶನ ಪಡೆದರು.

ರಾಜಕೀಯ ಗುರುವಿಗೆ ಹೆಗಲು ಕೊಟ್ಟು, ಬಿಕ್ಕಿ ಬಿಕ್ಕಿ ಅತ್ತ ಡಿಕೆಶಿ

ಅಂತ್ಯಸಂಸ್ಕಾರದ ಕಾರ್ಯ ವಿಧಿವಿಧಾನ ಆರಂಭದಿಂದ ಹಿಡಿದು ಅಂತ್ಯದವರೆಗೂ ಮೈಕ್ ಹಿಡಿದು ಕಾರ್ಯನಿರ್ವಹಣೆ ಮಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಚ್ಚುಕಟ್ಟಾಗಿ ಅಂತ್ಯಸಂಸ್ಕಾರ ನೆರವೇರಿಸಲು ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬದ ಸದಸ್ಯನಾಗಿ ಕಾರಣೀಭೂತರಾದರು.

ಬಳಿಕ ಪಾರ್ಥಿವ ಶರೀರಕ್ಕೆ ಹೆಗಲು ಕೊಟ್ಟ ಡಿಕೆಶಿ, ಪುಷ್ಪ ನಮನ ಸಲ್ಲಿಸುವಾಗ ಕೃಷ್ಣರ ಪಾದಕ್ಕೆ ಹಣೆ ಕೊಟ್ಟು ಬಿಕ್ಕಿ ಬಿಕ್ಕಿ ಅತ್ತರು. ಬಳಿಕ ತಾವೇ ಸಮಾಧಾನಪಡಿಸಿಕೊಂಡು ಅಂತ್ಯ ಸಂಸ್ಕಾರದ ಕಾರ್ಯವನ್ನು ನೆರವೇರಿಸಿದರು.



ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಹೆಗಲು ಕೊಟ್ಟ ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್



ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಅವರ ಮೊಮ್ಮಗ ಅಮರ್ಥ್ಯ ಹೆಗಡೆ ಅಗ್ನಿಸ್ಪರ್ಶ ಮಾಡಿದರು.

ಮೈಸೂರು ಮಿತ್ರ ಗುರುವಾರ 12 ಡಿಸೆಂಬರ್ 2024

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೋ ಲೇಟ್ ಇವತ್ತು?
ವಿದ್ಯಾರ್ಥಿ : ಅಪ್ಪ-ಅಮ್ಮ ಜಗಳ ಆಡ್ತಾ ಇದ್ರು ಟೀಚರ್
ಟೀಚರ್ : ಅವರಿಬ್ಬರು ಜಗಳ ಆಡೋದಕ್ಕೂ ನೀನು ಲೇಟಾಗಿ ಬರೋದಿಕ್ಕೂ ಏನೋ ಸಂಬಂಧ? ಸ್ಕೂಲ್ ಹತ್ತಿರವಿದೆ, ನಡ್ಕೊಂಡ್ ಬರೋಕಾಗಲ್ವ
ವಿದ್ಯಾರ್ಥಿ : ಒಂದು ಶೂ ಅಪ್ಪನ ಕೈಯಲ್ಲಿ..., ಇನ್ನೊಂದು ಶೂ ಅಮ್ಮನ ಕೈಯಲ್ಲಿತ್ತು ಟೀಚರ್

ಮೈಸೂರು ಮಿತ್ರ
ಗುರುವಾರ, 12 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಮನವೇ ದೇಗುಲ ಮತ್ತೆ ಇಳೆಯೇ ಗುಡಿಯೆಂದೆ,
ಬಾಳನಲಿದಿನ್ನಾವ ದೇವನಲ್ಲೆಂದೆ. -ವಿ.ಕೃ.ಗೋಕಾಕ್ .

ವೇದ ಸುಳ್ಳಾದರೂ { ಚಿಂತೆ ಮಾಡಿದರೆ
ಗಾದೆ ಸುಳ್ಳಾಗದು { ಸಂತೆ ಸಾಗೀತೆ?

ನಿಮ್ಮ ಪತ್ರಗಳು

ಗುಂಡಿ ಬಿದ್ದಿರುವ ಯಾದವಗಿರಿ ರೈಲ್ವೆ ಬ್ರಿಡ್ಜ್ ರಸ್ತೆ ಸರಿಪಡಿಸಿ

ಮಾನ್ಯರೇ,

ಮೈಸೂರು ಸಯ್ಯಾಜಿರಾವ್ ರಸ್ತೆಯ ಹೈವೇ ಸರ್ಕಲ್‌ನಿಂದ ಯಾದವಗಿರಿಗೆ ಸಂಪರ್ಕಿಸುವ ರಸ್ತೆಯ ರೈಲ್ವೆ ಬ್ರಿಡ್ಜ್‌ನ ಕೆಳಗಿನ ರಸ್ತೆಯು ಸಂಪೂರ್ಣ ಹಾಳಾಗಿದೆ. ಬರೀ ಗುಂಡಿಗಳಿಂದ ತುಂಬಿರುವ ಈ ರಸ್ತೆಯು ಅಪಘಾತಕ್ಕೆ ದಾರಿ ಮಾಡಿ ಕೊಡುವಂತಿದೆ. ಇದೇ ರೈಲ್ವೆ ಬ್ರಿಡ್ಜ್‌ನ ತಿರುವಿನಲ್ಲಿ ಪ್ರತಿದಿನ ಟ್ರಾಫಿಕ್ ಪೊಲೀಸರು ಸಾರ್ವಜನಿಕ ಸುರಕ್ಷತೆಗೆ ಹೆಲ್ಮೆಟ್ ಧರಿಸದೆ ಬರುವವರಿಂದ ದಂಡ ವಸೂಲಿ ಮಾಡುತ್ತಾರೆ. ಆದರೆ ಹಲವು ತಿಂಗಳುಗಳಿಂದ ಗುಂಡಿ ಬಿದ್ದ ರಸ್ತೆಯು ಪೊಲೀಸರಿಗೂ, ಸ್ಥಳೀಯ ಅಧಿಕಾರಿ ವರ್ಗದವರಿಗೂ ಕಂಡರೂ ಕಾಣದಂತೆ ಇರುವುದು ದುರದೃಷ್ಟಕರ. ಸಾರ್ವಜನಿಕ ಸುರಕ್ಷತೆಗೆ ಹೆಲ್ಮೆಟ್ ಕಡ್ಡಾಯ ಸರಿ. ಆದರೆ ಗುಂಡಿ ಬಿದ್ದ ರಸ್ತೆಯ ಸರಿಪಡಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಇನ್ನಾದರೂ ಗುಂಡಿ ಮುಚ್ಚುವ ಮನಸ್ಸು ಅಧಿಕಾರಿ ವರ್ಗದವರು ಮಾಡುವರೆಂದು ವಿನಂತಿ.

-ಮಂಜೇಶ್ ದೇವಾಳ್ಳಿ, ಮೈಸೂರು

ರಾಜಕೀಯ ಕ್ಷೇತ್ರದ ಧ್ರುವತಾರೆ ಕಣ್ಮರೆ

ಮಾನ್ಯರೆ,



ಸಜ್ಜನ ರಾಜಕಾರಣಿ ಎಂದೇ ಖ್ಯಾತರಾಗಿದ್ದ ಎಸ್.ಎಂ. ಕೃಷ್ಣರವರ ನಿಧನದಿಂದಾಗಿ ರಾಜಕೀಯ ಕ್ಷೇತ್ರದ ಧ್ರುವತಾರೆಯೊಂದು ಕಣ್ಮರೆಯಾದಂತಾಗಿದೆ. ಸುಮಾರು ಐದು ದಶಕಗಳ ಕಾಲ ರಾಜಕೀಯ ವಲಯದಲ್ಲಿ ಅಜಾತ ಶತ್ರು ಎಂದೇ ಹೆಸರು ಪಡೆದಿದ್ದ ಕೃಷ್ಣರವರು ಮುಖ್ಯಮಂತ್ರಿ, ಸ್ಪೀಕರ್, ಕೇಂದ್ರ ಮಂತ್ರಿ ಹಾಗೂ ರಾಜ್ಯಪಾಲ ಹುದ್ದೆ ಸೇರಿದಂತೆ ಹಲವು ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿದವರು. ತಮ್ಮ ಅಧಿಕಾರದ ಅವಧಿಯಲ್ಲಿ ಎಲ್ಲೂ ಸಭ್ಯತೆಯ ಎಲ್ಲೆ ಮೀರಿದವರಲ್ಲ. ತಮ್ಮ ಮುಖ್ಯಮಂತ್ರಿ ಅವಧಿಯಲ್ಲಿ ಬೆಂಗಳೂರು ನಗರವನ್ನು ಐಟಿ ಹಬ್ ಆಗಿ ಪರಿವರ್ತಿಸಿದ ಎಸ್.ಎಂ.ಕೃಷ್ಣರವರು ಬೆಂಗಳೂರು- ಮೈಸೂರು ಹೆದ್ದಾರಿ ನಿರ್ಮಾಣಕ್ಕೆ ಪ್ರಮುಖ ಕಾರಣಕರ್ತರು. ಮೇರುನಟ ಡಾ. ರಾಜ್‌ಕುಮಾರ್ ಅವರು ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣವಾದ ದಿನಗಳಲ್ಲಿ ಎಸ್.ಎಂ. ಕೃಷ್ಣ ಅವರು ನಿಭಾಯಿಸಿದ ಕ್ಲಿಷ್ಟ ಸಂದರ್ಭದ ದಿನಗಳನ್ನು ಯಾರೂ ಮರೆಯುವಂತಿಲ್ಲ. ದೇಶ ಕಂಡ ಸಂಭಾವಿತ ರಾಜಕಾರಣಿ ಎಂದೇ ಹೆಸರಾಗಿದ್ದ ಕೃಷ್ಣರವರ ನಿಧನದಿಂದ ರಾಜಕೀಯ ಕ್ಷೇತ್ರದ ಪ್ರಮುಖ ಕೊಂಡಿಯೊಂದು ಕಳಚಿದಂತಾಗಿದೆ.

- ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು,

ಅಕ್ಷರ ಜಾತ್ರೆಗೆ ಒತ್ತುಕೊಡಲಿ, ಊಟಕ್ಕಲ್ಲ

ಮಾನ್ಯರೆ,

ಒಂದಷ್ಟು ದಿನಗಳಿಂದ ದಿನಪತ್ರಿಕೆಗಳ ಅಂತರಂಗವನ್ನು ಇಣಿಕಿ ನೋಡಿದಾಗ ಕಾಣ ಸಿಗುತ್ತಿರುವ ಸುದ್ದಿಯ ವರದಿ 'ಸಕ್ಕರೆ ನಾಡು' ಮಂಡ್ಯದಲ್ಲಿ ಡಿ. 20ರಿಂದ ಮೂರು ದಿನಗಳು ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ನೀಡಬೇಕೆಂಬ ಚರ್ಚೆ ಬಹಳ ಬಿರುಸಾಗಿಯೇ ವ್ಯಕ್ತವಾಗುತ್ತಾ ಬಂದಿದೆ. ಆಹಾರ ಸಮಾನತೆ ಇರಲಿ, ಬಹುತ್ವದ ನಾಡಿನಲ್ಲಿ ಮಾಂಸಾಹಾರಕ್ಕೆ ನಿಷೇಧವೇಕೆ ಎಂದು ಮಂಡ್ಯದ ಸಮಾನ ಮನಸ್ಕರು ಪ್ರಶ್ನಿಸಿದ್ದಾರೆ. ಇದುವರೆಗಿನ ಯಾವ ಸಮ್ಮೇಳನದಲ್ಲೂ ಮಾಂಸಾಹಾರದ ಊಟ ನೀಡಿಲ್ಲ. ಹೀಗಿರುವಾಗ ಊಟಕ್ಕೆ ಇಷ್ಟೊಂದು ಮಹತ್ವವೇಕೆ?

ಸಮ್ಮೇಳನದಲ್ಲಿ ಕನ್ನಡದ ಬಗ್ಗೆ ಹೆಚ್ಚು ಚರ್ಚೆಯಾಗಲಿ ಎಂಬುದು ನಮ್ಮ ಕನ್ನಡ ಮನಸ್ಸುಗಳ ಅನಿಸಿಕೆಯಾಗಿದೆ. ಅಕ್ಷರ ಜಾತ್ರೆಯಲ್ಲಿ ಊಟ ಇರಬೇಕೆ ವಿನಃ ಅನ್ನದ (ಊಟದ) ಜಾತ್ರೆಯಲ್ಲಿ ಅಕ್ಷರ ಜಾತ್ರೆ ಕಳಪೆಯಾಗಬಾರದು. ಜೊತೆಗೆ ಸಾಹಿತ್ಯ ಸಮ್ಮೇಳನದಲ್ಲಿ ನೆಲ, ಮೂಲ, ಸಂಸ್ಕೃತಿ, ಜನಪದ ಸಾಹಿತ್ಯ, ಜನಪದ ಕಲೆ, ವೈಭವ ಇವುಗಳ ಬಗ್ಗೆ ಚರ್ಚೆಯಾಗಬೇಕೆ ವಿನಃ ಕೆಲಸಕ್ಕೆ ಬಾರದ ಬಾಡೂಟದ ಬಗ್ಗೆ ಚರ್ಚಿಸುವುದು ಹಾಸ್ಯಾಸ್ಪದ. ಜನ,ಸಾಹಿತ್ಯಾಸಕ್ತರು ದೂರದೂರಿನಿಂದ ಬಂದಿರುತ್ತಾರೆ ನಿಜ. ಹಾಗಾಗಿ ಅವರಿಗೆ ಉತ್ತಮವಾದ ಊಟದ ವ್ಯವಸ್ಥೆ ಆಗಬೇಕೆ ವಿನಃ ಸಸ್ಯಾಹಾರ, ಮಾಂಸಾಹಾರ ಬೇಕೆ ಎಂಬ ಚರ್ಚೆ ಅಲ್ಲ. ಸಾಂಪ್ರದಾಯಿಕವಾಗಿ ಈ ಹಿಂದಿನ ಸಮ್ಮೇಳನದಲ್ಲಿ ಕೊಟ್ಟಿರುವ ಸಸ್ಯಾಹಾರವನ್ನೇ ನೀಡಿದರೆ ಒಳ್ಳೆಯದು. ಮಾಂಸಾಹಾರ ಕೊಟ್ಟರೆ ಕೆಲವರು ಮದ್ಯ ಸೇವಿಸಿ ಸಮ್ಮೇಳನದ ವಾತಾವರಣ ಹಾಳು ಮಾಡುವ ಸಂಭವವೇ ಅಧಿಕವಾಗಿರುತ್ತದೆ. ಒಂದಂತು ಸತ್ಯ, ಪ್ರಸ್ತುತ ನಡೆಯುತ್ತಿರುವ ಸಮ್ಮೇಳನದ ಮೂಲ ಉದ್ದೇಶವನ್ನು ಮರೆತ ಜನತೆ ಈಗಲಾದರೂ ಸಮ್ಮೇಳನದ ಘನತೆಯನ್ನು ಎತ್ತಿ ಹಿಡಿದು ಈ ಹಿಂದಿನ ಪರಂಪರೆಯ ನೆಲೆಯಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನವು ನಡೆದು ಕನ್ನಡಮ್ಮನ ತೇರನ್ನು ಮುಂದೆ ಎಳೆದು ಸಾಗಬೇಕಾದ ಪವಿತ್ರ ಕರ್ತವ್ಯಕ್ಕೆ ಕನ್ನಡಿಗರಾದ ನಾವು ಸಾಕ್ಷಿದೀಪಗಳಾಗಬೇಕು. ಆಗಲೇ ನಮ್ಮೊಳಗೆ ನಿಜದಿ ಕನ್ನಡತ್ವ ಬೆಳಗಲು ಸಾಧ್ಯವಾಗುತ್ತದೆ. ಜೈ ಕನ್ನಡ ಮಾತೆ-ಭುವನೇಶ್ವರಿ ಮಾತೆಗೆ ಶಿರ ಬಾಗಿದ ನಮನ.

-ಪರಮೇಶ ಕೆ.ಉತ್ತನಹಳ್ಳಿ, ಕನ್ನಡ ಸಹಾಯಕ ಪ್ರಾಧ್ಯಾಪಕ, ಮೈಸೂರು.

ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಂಕ ಮುಕ್ತ ಮಾಡಲು ಮನವಿ

ಮಾನ್ಯರೇ,

ಪ್ರತಿ ಜಿಲ್ಲೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವಾಗ ಸ್ಥಳೀಯ ಜಿಲ್ಲಾಡಳಿತ ತಮ್ಮ ವ್ಯಾಪ್ತಿಯಲ್ಲಿ ಮುಕ್ತ ಸಂಚಾರಕ್ಕಾಗಿ ಉಚಿತ ಪ್ರಯಾಣಕ್ಕೆ ಅನುವು ಮಾಡಿಕೊಟ್ಟು ಕನ್ನಡದ ಈ ಹಬ್ಬಕ್ಕೆ ಹೆಚ್ಚು ಉತ್ತೇಜನ ಕೊಡುವುದು ನಿಜಕ್ಕೂ ಶ್ಲಾಘನೀಯ. ಆದರೆ ಈ ಬಾರಿ ಡಿ.20 ರಿಂದ ಮಂಡ್ಯ ನಗರದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು, ಮೈಸೂರು ಜಿಲ್ಲೆ ಹಾಗೂ ಬೆಂಗಳೂರು ಭಾಗದಿಂದ ಈ ಸಮ್ಮೇಳನಕ್ಕೆ ಬರುವವರ ಸಂಖ್ಯೆ ಹೆಚ್ಚಿದೆ. ಅವರು ಸ್ವಂತ ವಾಹನಗಳಲ್ಲಿ ಓಡಾಡುವಾಗ ರಾಷ್ಟ್ರೀಯ ಹೆದ್ದಾರಿಯ ಸುಂಕ ಕಟ್ಟಿ ಬರಬೇಕು. ಇಲ್ಲದಿದ್ದರೆ ಬದಲು ರಸ್ತೆಯಲ್ಲಿ ಬರಬೇಕು. ಹೀಗಾಗಿ ಬದಲಿ ರಸ್ತೆಗಳಲ್ಲಿ ಒತ್ತಡ ಹೆಚ್ಚಾಗಿ ಸಮಸ್ಯೆ ಆಗುತ್ತದೆ. ಆದ ಕಾರಣ ತಾವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಜೊತೆ ಮಾತನಾಡಿ ಈ ಮೂರು ದಿನ ಬಿಡದಿ ಹಾಗೂ ಮೈಸೂರು ಕಡೆಯ ಎರಡು ಕಡೆ ಸುಂಕ ಮುಕ್ತವನ್ನಾಗಿ ಮಾಡಲು ಶ್ರಮ ವಹಿಸಲು ಮೈಸೂರು, ಮಂಡ್ಯ, ರಾಮನಗರ ಜಿಲ್ಲಾಧಿಕಾರಿಗಳಿಗೆ ಮತ್ತು ಕೇಂದ್ರ ಕ.ಸಾ.ಪ ಅಧ್ಯಕ್ಷರಿಗೆ ಮನವಿ.

-ಅರವಿಂದ್ ಶರ್ಮ, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ವಾರ್ಷಿಕೋತ್ಸವಗಳು... ಪ್ರವಾಸಗಳು... ಯಾಂತ್ರಿಕ ಪ್ರಯಾಸಗಳು

ಶೈಕ್ಷಣಿಕ ವರ್ಷ ಮುಗಿಯುತ್ತಾ ಬಂದಿದೆ. ಹತ್ತನೆಯ ತರಗತಿ ಹಾಗೂ ಎರಡನೆಯ ಪಿಯುಸಿ ಓದುತ್ತಿರುವ ಮಕ್ಕಳ ಅಂತಿಮ ಪರೀಕ್ಷೆಯ ದಿನಾಂಕಗಳು ಪ್ರಕಟವಾಗಿರುವುದರಿಂದ, ಶಾಲಾ ಕಾಲೇಜುಗಳಲ್ಲಿ ಮಿಂಚಿನ ಸಂಚಾರ ಆದಂತಿದೆ. ಪಾಠ ಪ್ರವಚನಗಳು ಮುಗಿದು ಪುನರಾವರ್ತನೆಯ ತರಗತಿಗಳು ಬಹಳ ಜೋರಿನಲ್ಲಿ ಪ್ರಾರಂಭವಾಗಿವೆ. ಹುಡುಗಾಟವೆಲ್ಲವನ್ನೂ ಕಟ್ಟಿಟ್ಟು, ಈ ತರಗತಿಗಳ ಮಕ್ಕಳು ಓದಿನಲ್ಲಿ ತಲ್ಲೀನರಾಗಿಬಿಟ್ಟಿದ್ದಾರೆ. ಬೇರೆ ತರಗತಿಯ ಮಕ್ಕಳು ಕೂಡಾ ಪರೀಕ್ಷೆಯ ನಿರೀಕ್ಷೆಯಲ್ಲಿ ನಿಧಾನಕ್ಕೆ ಓದಿನ ಓಘ ರೂಢಿಸಿಕೊಳ್ಳಲು ಸಿದ್ಧರಾಗುತ್ತಿದ್ದಾರೆ.

ಈ ಎಲ್ಲದರ ಮಧ್ಯೆ, ಓದನ್ನು ಗಂಭೀರವಾಗಿ ಪ್ರಾರಂಭಿಸಲು ಸುಮುಹೂರ್ತಗಳನ್ನು ಹುಡುಕುವ, ಒಳ್ಳೆಯ ಘಳಿಗೆಗಳನ್ನು ಕಾಯುವ ಒಂದಷ್ಟು ವಿದ್ಯಾರ್ಥಿಗಳೂ ಇರುತ್ತಾರೆ. ಅವರೆಲ್ಲಾ ಡಿಸೆಂಬರ್, ಜನವರಿ ಬಂತೆಂದರೆ, ಕಾಯುವುದು, ಶಾಲಾ ಪ್ರವಾಸಕ್ಕಾಗಿ ಮತ್ತು ಶಾಲಾ ವಾರ್ಷಿಕೋತ್ಸವಕ್ಕಾಗಿ.

ಒಂದಷ್ಟು ವಿದ್ಯಾರ್ಥಿಗಳು ಎಂದರೆ ತಪ್ಪಾಗುತ್ತದೆ. ಬಹುಶಃ ಶಾಲೆಯಲ್ಲಿ ಓದುವ ಪ್ರತಿ ವಿದ್ಯಾರ್ಥಿಯೂ ಈ ಎರಡು ಸಂದರ್ಭಗಳಿಗಾಗಿ ಶಾಲೆ ಪ್ರಾರಂಭವಾದ ಜೂನ್ ತಿಂಗಳಿಂದಲೇ ಕಾಯುಲು ಪ್ರಾರಂಭಿಸುತ್ತಾನೆ ಎಂದರೆ ಖಂಡಿತವಾಗಿ ಉತ್ಪ್ರೇಕ್ಷೆಯಲ್ಲ.

ಈ ಎರಡು ಸಂದರ್ಭಗಳೂ ವಿದ್ಯಾರ್ಥಿ ಜೀವನದಲ್ಲಿ ಅತಿಮುಖ್ಯವಾದವುಗಳು. ಓದು ಬರಹ ಪಾಠ ಪ್ರವಚನ ಹೋಮ್‌ವರ್ಕ್ ಇವುಗಳೆಲ್ಲದರಿಂದ ದೂರವಾಗಿ, ಸಹಪಾಠಿಗಳೊಡನೆ ಮನದುಂಬಿ ನಕ್ಕು ನಲಿಯುವ ಸುಂದರ ಅವಕಾಶ ದೊರೆಯುವುದು ಈ ಎರಡು ಘಟ್ಟಗಳಲ್ಲಿ. ಎರಡೂ ಬೇರೆಬೇರೆಯಾಗಿ ಬೇರೆ ರೀತಿಯಲ್ಲಿ ವಿದ್ಯಾರ್ಥಿಗಳ ಅಥವಾ ಮಕ್ಕಳ ವಿವಿಧ ರೀತಿಯ ಸಾಮರ್ಥ್ಯಗಳನ್ನು ಒರೆಗೆ ಹಚ್ಚುತ್ತವೆ. ಶಾಲೆಯ ಬಗೆಗೆ ಜೀವನದುದ್ದಕ್ಕೂ ಕಾಪಿಟ್ಟುಕೊಳ್ಳುವಂತಹ ನೆನಪುಗಳ ಬುತ್ತಿಯನ್ನು, ಈ ಎರಡು ಕಾರ್ಯಕ್ರಮಗಳು ಕಟ್ಟಿಕೊಡುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಶಿಕ್ಷಕರಿಗೂ ಸಹ.

ವಿದ್ಯಾರ್ಥಿಗಳು ಹೇಗೆ ಇವುಗಳಿಗೆ ಕಾಯುತ್ತಾರೋ ಹಾಗೆಯೇ ಶಿಕ್ಷಕರೂ ಕೂಡ ಶಾಲೆ ಶುರುವಾದಂದಿನಿಂದ ಈ ಎಲ್ಲದಕ್ಕೂ ಸಿದ್ಧತೆ, ಯೋಜನೆಗಳನ್ನು ಮನಸ್ಸಿನಲ್ಲಿಯೇ ತಯಾರಿಸಿಕೊಳ್ಳುತ್ತಿರುತ್ತಾರೆ ಎಂದರೆ ಅತಿಶಯೋಕ್ತಿಯಲ್ಲ.

ಮೊದಲಿಗೆ ಶಾಲಾ ವಾರ್ಷಿಕೋತ್ಸವದ ಬಗ್ಗೆ ಮಾತನಾಡೋಣ.

ಸಿನಿಮಾಗಳಲ್ಲಿ ಶಾಲಾ ವಾರ್ಷಿಕೋತ್ಸವ ನಡೆಸಿದ ಹಾಡುಗಳು, ದೃಶ್ಯಗಳು ನೆನಪಿವೆಯೇ? ಪುಟಾಣಿ ಏಜೆಂಟ್ 123 ಚಿತ್ರದ, ಸಹ್ಯಾದ್ರಿ ಸಾಲಿನಲಿ, ಸುವರ್ಣ ಸೇತುವೆ ಚಿತ್ರದ ಮಲೆನಾಡಿನ್ ಮೂಲೆಮ್ಯಾಗೆ, ಚಿನ್ನಾ ನೀ ನಗುತಿರು ಚಿತ್ರದ ಸಿಂಡ್ರೆಲ್ಲಾ?. ಹೀಗೆ ಶಾಲಾ ವಾರ್ಷಿಕೋತ್ಸವದಲ್ಲಿ ನೀವು ನೋಡಿದ ಕೇಳಿದ ಭಾಗವಹಿಸಿದ ಒಳ್ಳೆಯ ಹಾಡುಗಳು ನೃತ್ಯಗಳು ನಾಟಕಗಳು ಇನ್ನೂ ನೆನಪಿನಲ್ಲಿ ಹಸಿರಾಗಿರಬಹುದು ಅಲ್ಲವೇ? ದಂಗೆ ಎದ್ದ ಮಕ್ಕಳು ಚಿತ್ರದಲ್ಲಿ ಮಕ್ಕಳು ತಯಾರಿ ನಡೆಸುವ ದೃಶ್ಯಗಳು ಈಗ ನೋಡಿದರೂ ನಗು ತರಿಸುತ್ತವೆ. ನಮ್ಮನ್ನು ಹಿಂದಕ್ಕೆ ಕೊಂಡೊಯ್ಯುತ್ತವೆ ಅಲ್ಲವೆ?

ಶಾಲಾ ವಾರ್ಷಿಕೋತ್ಸವವೆಂದರೆ, ಬರೀ ಹಾಡು ನೃತ್ಯಗಳ ಭರಾಟೆಯಲ್ಲ. ವಿದ್ಯಾರ್ಥಿಗಳ ಸರ್ವತೋಮುಖ ಪ್ರತಿಭೆಗಳನ್ನು ಅನಾವರಣಗೊಳಿಸಲು ಒಂದು ವೇದಿಕೆ. ವಾರ್ಷಿಕೋತ್ಸವಕ್ಕೆ ಮುಂಚೆ ಮಕ್ಕಳಿಗೆ ನಾನಾ ರೀತಿಯ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ವಿವಿಧ ರೀತಿಯ ಗೀತ ಗಾಯನ, ಭಾಷಣ, ಚರ್ಚಾಸ್ಪರ್ಧೆ, ಆಶುಭಾಷಣ, ಛದ್ಮವೇಷ, ಏಕಪಾತ್ರಾಭಿನಯ, ಪ್ರಬಂಧ, ಚಿತ್ರರಚನೆ, ನೃತ್ಯಸ್ಪರ್ಧೆಗಳು ಒಂದು ಕಡೆಯಾದರೆ, ಕ್ರೀಡೆಯಲ್ಲಿ ಆಸಕ್ತಿಯಿರುವ ಮಕ್ಕಳಿಗೆ ನಾನಾ ವಿಧದ ಕ್ರೀಡೆಗಳ ಸ್ಪರ್ಧೆಗಳು ನಡೆಯುತ್ತವೆ. ಈ ಎಲ್ಲ ಸ್ಪರ್ಧೆಗಳಲ್ಲಿ ಮಕ್ಕಳಿಗೆ ವೈಯಕ್ತಿಕವಾಗಿ ಮಾತ್ರ ವಲ್ಲದೆ, ಗುಂಪಿನಲ್ಲಿ ಸಹಪಾಠಿಗಳೊಡಗೂಡಿ ತಮ್ಮ ಪ್ರತಿಭೆಯನ್ನು ತೋರಿಸುವ ಯಥೇಚ್ಛವಾದ ಅವಕಾಶ ಇರುತ್ತದೆ. ಅವುಗಳಲ್ಲಿ ಬಹುಮಾನ ಗಳಿಸಿದವರಿಗೆ ಅಂದು ಬಹುಮಾನ ಪಡೆಯುವ ಸಂಭ್ರಮ. ಫೋಟೋ ತೆಗೆಯಿಸಿಕೊಳ್ಳುವ ಕಾತುರ.

ಇನ್ನು ನೃತ್ಯ-ನಾಟಕಗಳಲ್ಲಿ ಭಾಗಿಯಾಗಿರುವವರ ಸಂಭ್ರಮ ಹೇಳ ತೀರದು. ಮೊದಲಿಗೆ ಯಾವ ಹಾಡಿಗೆ ನೃತ್ಯ ಮಾಡಬೇಕೆಂಬ ಲ್ಲಿಂದ ಜಿಜ್ಞಾಸೆ ಪ್ರಾರಂಭವಾಗುತ್ತದೆ. ಈಗ ಎಲ್ಲೆಡೆ ಸಿನಿಮಾ ಹಾಡುಗಳದೇ ಭರಾಟೆ. ಎಲ್ಲೋ ಕೆಲವು ಶಾಲೆಗಳಲ್ಲಿ ಸಿನಿಮಾ ಹಾಡುಗಳಿಗೆ ನೃತ್ಯ ಮಾಡಿಸುವುದನ್ನು ನಿಷೇಧಿಸಿರುತ್ತಾರೆ. ಉಳಿದಂತೆ ಅವುಗಳದೇ ಕಾರುಬಾರು.

ಬಿಡುಗಡೆಯಾಗಿರುವ ಹಾಡುಗಳಲ್ಲಿ ಅತಿ ಹೆಚ್ಚು ಜನಪ್ರಿಯವಾಗಿ ಹಿಟ್ ಆಗಿರುವ ಹಾಡುಗಳ ಆಯ್ಕೆಗೆ ಅಕ್ಷರಶಃ ಪೈಪೋಟಿ ಇರುತ್ತದೆ. ನಮಗೆ ಇಷ್ಟವಾಗಿರುವ ಹಾಡನ್ನು ಬೇರೆ ತರಗತಿಯವರೋ, ಬೇರೆ ಶಿಕ್ಷಕರೋ ಮೊದಲು ಆರಿಸಿಕೊಂಡು ಬಿಟ್ಟರೆ ಉಂಟಾಗುವ ನಿರಾಶೆಯನ್ನು ಅನುಭವಿಸಿದವರು ಮಾತ್ರ ಬಲ್ಲರು. ಎಷ್ಟೋಬಾರಿ ಇಂತಹ ವಿಷಯಗಳು ಜಗಳಕ್ಕೆ ತಿರುಗಿ, ಮುಖ್ಯೋಪಾಧ್ಯಾಯರು ರಾಜಿ ಸಂಧಾನಕ್ಕೆ ನಿಲ್ಲುವಂತಹ ಪರಿಸ್ಥಿತಿ ಎಷ್ಟೋಕಡೆ ಖಂಡಿತವಾಗಿ ಉದ್ಭವಿಸಿರುತ್ತದೆ.

ಸ್ವಲ್ಪ ವರ್ಷಗಳ ಹಿಂದೆ ಹೀಗಿರಲಿಲ್ಲ. ಆಗೆಲ್ಲಾ ಜನಪದ ಗೀತೆಗಳು, ದೇಶಭಕ್ತಿಗೀತೆಗಳಿಗೆ ಮಕ್ಕಳು ನೃತ್ಯ ಮಾಡುತ್ತಿದ್ದರು. ಕೋಲಾಟವಂತೂ ಸಮಾರಂಭದ ಮುಖ್ಯ ಆಕರ್ಷಣೆಯಾಗಿರುತ್ತಿತ್ತು. ಹಾಡುಗಳನ್ನು ಮಕ್ಕಳೇ ಹಾಡುತ್ತಿದ್ದರು. ಹಿಮ್ಮೇಳಕ್ಕೆ ಗೆಜ್ಜೆ, ಕಂಜರ, ಕೋಲುಗಳನ್ನು ಮಕ್ಕಳೇ ನುಡಿಸಿಕೊಂಡು ಸೊಗಸಾಗಿ ಹಾಡುತ್ತಿದ್ದರು. ಆ ಹಾಡಿಗೆ ಮಕ್ಕಳು ನರ್ತಿಸುತ್ತಿದ್ದರು. ನರ್ತಿಸಿದ ಮಕ್ಕಳಿಗೆ ಎಷ್ಟು ಚಪ್ಪಾಳೆ ಸಿಗುತ್ತಿತ್ತೋ, ಅದಕ್ಕಿಂತಾ ಕೊಂಚ ಹೆಚ್ಚಿನ ಪ್ರಶಂಸೆ ಹಾಡನ್ನು ಹಾಡಿದ ಮಕ್ಕಳಿಗೆ ಸಿಗುತ್ತಿತ್ತು. ಸ್ವಾಗತ ನೃತ್ಯದ ಜೊತೆ ಸಾಮಾನ್ಯವಾಗಿ ಒಂದು ಭರತನಾಟ್ಯವೂ ಇದ್ದು ಅದಕ್ಕೂ ಸಂಗೀತ ಬಲ್ಲ ಮಕ್ಕಳು ಹಾಡುತ್ತಿದ್ದರು. ಟೇಪ್ ರೆಕಾರ್ಡರ್‌ನ ಒಂದು ಅಥವಾ ಎರಡು ಹಾಡುಗಳಿಗೆ ನರ್ತಿಸಲು ಮಾತ್ರ ಅವಕಾಶವಿರುತ್ತಿತ್ತು. ಅದರಲ್ಲಿ ಶಾಲೆಯ ಅತ್ಯಂತ ನುರಿತ ನೃತ್ಯಪಟುಗಳಿಗೆ ಅವಕಾಶವಿದ್ದು, ಅವರಿಗೆ ಅದು ಒಂದು ರೀತಿಯಲ್ಲಿ ಕೋಡು ಮೂಡಿಸುತ್ತಿತ್ತು!

ಇವಲ್ಲದೆ ಮಕ್ಕಳು ನಾಟಕಗಳನ್ನೂ ಮಾಡುತ್ತಿದ್ದರು. ನಾಟಕ ಕಲೆಯಲ್ಲಿ ಆಸಕ್ತಿಯಿದ್ದ ಶಿಕ್ಷಕರೇ, ಐತಿಹಾಸಿಕ, ಪೌರಾಣಿಕ ಅಥವಾ ಸಾಮಾಜಿಕ ನಾಟಕಗಳನ್ನು, ತಾವೇ ಬರೆದು ಆಡಿಸುತ್ತಿದ್ದರು.

ಇನ್ನು ಈ ನೃತ್ಯ-ನಾಟಕಗಳಿಗೆ ಬೇಕಾದ ಬಟ್ಟೆಗಳನ್ನು ಹೊಂದಿಸುವುದು ಮತ್ತೊಂದು ಸಾಹಸವೆಂದರೂ ತಪ್ಪಾಗಲಾರದು. ಆಗೆಲ್ಲ ಪಾಲ್ಗೊಳ್ಳುತ್ತಿರುವವರೇ ಬಟ್ಟೆ ಇತ್ಯಾದಿ ಪರಿಕರಗಳನ್ನು ಹೊಂದಿಸಿಕೊಳ್ಳಬೇಕಿತ್ತು. ಆಗೆಲ್ಲ ಶಿಕ್ಷಕರು ಹೆಚ್ಚೆಂದರೆ ಒಂದೇ ಬಣ್ಣದ ಸೀರೆಗಳನ್ನು, ಕಚ್ಚೆ ಹಾಕಿಯೋ, ಅಥವಾ ಮೊಳಕಾಲು ಮುಚ್ಚುವವರೆಗೋ ಉಡಲು ಹೇಳುತ್ತಿದ್ದರು. ಒಂದೇ ಬಣ್ಣವೆಂದರೆ ಒಂದೇ ಬಣ್ಣ ಎಂದಷ್ಟೇ ಅರ್ಥ, ಅದು ಯಾವ ಷೇಡ್‌ನದ್ದಾದರೂ ಆಗಿರಬಹುದಿತ್ತು! ಇನ್ನು ಸರಬಳೆ ಆಭರಣಗಳನ್ನಂತೂ ಎಲ್ಲರೂ ಹಂಚಿಕೊಳ್ಳುತ್ತಿದ್ದರು. ಮೊದಲೇ, "ನೋಡು, ನನ್ನ ಡ್ಯಾನ್ಸು ಮೂರನೆಯದು. ನಿನ್ನದು ಐದನೆಯದ್ದಲ್ಲವಾ? ಅದಕ್ಕೆ ನಿನ್ನ ಬೈತಲೆಬೊಟ್ಟು, ಸೊಂಟದಪಟ್ಟಿ ನನಗೆ ಕೊಟ್ಟಿರು. ನನ್ನ ಡ್ಯಾನ್ಸ್ ಮುಗಿದ ತಕ್ಷಣ ಬಿಚ್ಚಿ, ನಾನೇ ನಿನಗೆ ಹಾಕಿಕೊಡುತ್ತೇನೆ,' ಎಂದು ಮಕ್ಕಳೇ ಮಾತನಾಡಿಕೊಳ್ಳುತ್ತಿದ್ದರು, ಇಲ್ಲವಾದಲ್ಲಿ ಶಿಕ್ಷಕರೇ ಹಾಗೆ ವ್ಯವಸ್ಥೆ ಮಾಡುತ್ತಿದ್ದರು! ಹೀಗೆ ಒಡವೆ ಸೀರೆ ಸ್ಟಿಕ್ಕರು ಮೇಕಪ್‌ನ ರೋಸ್, ಲಿಪ್ಸ್ಟಿಕ್ ಎಲ್ಲವನ್ನೂ ಎಲ್ಲರೂ ಹಂಚಿಕೊಂಡು ಖುಷಿ ಪಡುತ್ತಿದ್ದರು. ಮಕ್ಕಳಲ್ಲಿ ಆ ಸಂದರ್ಭದಲ್ಲಿ ಎಂತಹಾ ಸಹಕಾರ ಮನೋಭಾವ ಅಪ್ರಯತ್ನವಾಗಿ ಬೆಳೆಯುತ್ತಿತ್ತೆಂದರೆ, ಯಾವ ಮುನಿಸು-ಕಿನಿಸು ಉಳಿಯುತ್ತಿರಲಿಲ್ಲ. ಸಹಕಾರದ ಸಹಾಯಪರತೆಯ ಭಾವ ತಂತಾನೆ ಬೆಳೆದು ಭಾವೈಕ್ಯತೆಯ ಪಾಠ ಅಲ್ಲಿಯೇ ಆಗಿಬಿಡುತ್ತಿತ್ತು. ಎಲ್ಲಿಯೂ ಯಾರಮೇಲೂ ಯಾವುದೇ ಒತ್ತಡವಿಲ್ಲ. ಭಾಗವಹಿಸುವ ಖುಷಿ ಅಷ್ಟೇ. ನನಗೆ ನೆನಪಿರುವ ಹಾಗೆ, ನಮ್ಮ ಶಾಲೆಯ ಟೀಚರ್ ಒಬ್ಬರು ಒಂದು ಜೋಡಿ ಗೆಜ್ಜೆಗಳು, ಬೈತಲೆ ಬೊಟ್ಟು, ಸೊಂಟದ ಪಟ್ಟಿ ಮತ್ತು 7 ಎಳೆಯ ಮುತ್ತಿನ ಸರವನ್ನು ತೆಗೆದಿಟ್ಟುಕೊಂಡಿದ್ದರು. ವಾರ್ಷಿಕೋತ್ಸವ ಬಂದಾಗ ಅದೂ ಆಚೆ ಬರುತ್ತಿತ್ತು. ಪ್ರತೀ ನೃತ್ಯದಲ್ಲಿಯೂ ಒಬ್ಬರಲ್ಲ ಒಬ್ಬರು ಅದನ್ನು ತೊಟ್ಟಿರುತ್ತಿದ್ದರು. ಸಮಾರಂಭ ಮುಗಿದ ಮೇಲೆ ಅದು ಮತ್ತೆ ಅವರ ಪೆಟ್ಟಿಗೆಗೆ!



ಫೈಲ್ ಚಿತ್ರ

> ಬದಲಾಗಿರುವ ಈ ಕಾಲದಲ್ಲಿ ಐಷಾರಾಮಿ ಎನ್ನುವುದು ಎಲ್ಲರ ಕೈಗೂ ಎಟುಕುತ್ತಿದೆ. ಹಣದ ಅಭಾವ ಕೊಂಚ ಕಡಿಮೆಯಾಗಿರುವ ಈ ಹೊತ್ತಿನಲ್ಲಿ ಪೋಷಕರು ತಮ್ಮ ಮಕ್ಕಳು ಕಷ್ಟಪಡುವುದನ್ನು ಕನಸಿನಲ್ಲಿಯೂ ಬಯಸಲಾರರು. ಮಕ್ಕಳು ಸುಖದಿಂದ ಇರುವುದನ್ನು ಕಾಣುವ ಹಕ್ಕು ಅವರಿಗಿದೆ. ಎಲ್ಲವೂ ನಿಜವೇ. ಆದರೆ ಮಕ್ಕಳನ್ನು ಹೀಗೆ ಬೆಳೆಸುವುದರಿಂದ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ಯಾರಾದರೂ ಏಕೆ ಯೋಚಿಸುತ್ತಿಲ್ಲ? ಇಂದಿನ ಮಕ್ಕಳಲ್ಲಿ ಸ್ವಾರ್ಥ ಹೆಚ್ಚಾಗುತ್ತಿದೆ. ಕಷ್ಟ ಸಹಿಷ್ಣುತೆ ಇಲ್ಲವಾಗುತ್ತಿದೆ, ಮಾನಸಿಕ ಸಮಸ್ಯೆಗಳಿಗೆ ಮಕ್ಕಳು ಚಿಕ್ಕವಯಸ್ಸಿನಲ್ಲಿಯೇ ತುತ್ತಾಗುತ್ತಿದ್ದಾರೆ, ಆತ್ಮಹತ್ಯೆ ಯೋಚನೆಗಳು ಅವರನ್ನು ಕಾಡುತ್ತಿವೆ. ನಾಗರಿಕ ಪ್ರಜ್ಞೆ ಇಲ್ಲವಾಗುತ್ತಿದೆ, ಉಡಾಫೆ ಮನೋಭಾವ ಬೆಳೆಯುತ್ತಿದೆ. ಇದೆಲ್ಲದ್ದಕ್ಕೂ ನಾವು ಮಕ್ಕಳನ್ನು ಅತಿಸುರಕ್ಷಿತ ವಲಯದಲ್ಲಿ ಬೆಳೆಸುತ್ತಿರುವ ಬಗೆಯೇ ಕಾರಣವಲ್ಲವೇ?

ಈಗ ಶಾಲೆಗಳಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೀವೆಲ್ಲರೂ ಕಂಡಿದ್ದೀರಿ. ಮಕ್ಕಳು ಮಕ್ಕಳಾಗಿ ಉಳಿದೇ ಇಲ್ಲ. ವಿವಿಧ ಭಾಷೆಗಳ ಚಲನಚಿತ್ರಗಳ ಅರ್ಥವಿಲ್ಲದ ಅಬ್ಬರದ ಹಾಡುಗಳಿಗೆ ನರ್ತಿಸುವುದನ್ನೇ ಸಂಭ್ರಮ ಎಂದುಕೊಂಡುಬಿಟ್ಟಿದ್ದಾರೆ. ಈ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಕಲಿಕೆಗೆ ಅವಕಾಶವೇ ಇಲ್ಲ. ಅಲ್ಲಿ ನಟ ನಟಿಯರು ಮಾಡಿದ ಸ್ಟೆಪ್ಪುಗಳನ್ನೇ ಯಥಾವತ್ತಾಗಿ ಮಾಡಿ ಶಹಬಾಸ್ ಗಿರಿ ದಕ್ಕಿಸಿಕೊಳ್ಳಬೇಕು ಎನ್ನುವುದೇ ಮಕ್ಕಳ ಪರಮಗುರಿಯಾಗಿರುತ್ತದೆ. ಅಲ್ಲದೆ ವಯಸ್ಸಿಗೆ ಮೀರಿದ, ಅರ್ಥವಾಗದ ಭಾವನೆಗಳನ್ನು ಬಿಂಬಿಸುವ ಹಾಡುಗಳಿಗೆ ಪುಟ್ಟಪುಟ್ಟ ಮಕ್ಕಳಿಂದ ನೃತ್ಯ ಮಾಡಿಸುತ್ತಾರೆ. ನಾನೇನು ಬಿಡಿಸಿ ಹೇಳಬೇಕಾಗಿಲ್ಲ. ಇತ್ತೀಚೆಗೆ ಅಸ್ಸಾಮ್‌ನ ಧೇಮಾಜಿ ಎಂಬಲ್ಲಿ ಶಿಕ್ಷಕರ ದಿನಾಚರಣೆಯಂದು ಚಿಕ್ಕ ಮಕ್ಕಳಿಂದ ಅಶ್ಲೀಲವಾಗಿ ನೃತ್ಯ ಮಾಡಿಸಿದ್ದನ್ನು ನೋಡಿ ಎಲ್ಲರೂ ಹೌಹಾರಿದ್ದು ನೆನಪಿರಬೇಕು. ಅದೊಂದು ವಿಡಿಯೋ ವೈರಲ್ ಆಗಿ ಎಲ್ಲರಿಗೂ ತಿಳಿಯಿತು ಆದರೆ ವೈರಲ್ ಆಗದೆಯೇ ಇದು ಇಂದು ಎಲ್ಲೆಡೆ ರಾಜಾರೋಷವಾಗಿ ಆಗುತ್ತಿದೆ ಎಂಬ ಸತ್ಯವನ್ನು ನಾವು ನಿರಾಕರಿಸಲಾಗುವುದಿಲ್ಲ.

ಇನ್ನು ಬಟ್ಟೆ ಬರೆ ಈಗೆಲ್ಲಾ ವಾರ್ಷಿಕೋತ್ಸವವೂ ವ್ಯಾಪಾರೀಕರಣವಾಗುತ್ತಿದೆ ಎನ್ನುವುದು ಅರಗಿಸಿಕೊಳ್ಳಲು ಕಷ್ಟವಾದ ಸತ್ಯ.. ವಾರ್ಷಿಕೋತ್ಸವದಲ್ಲಿ ನೃತ್ಯದಲ್ಲಿ ಪಾಲ್ಗೊಳ್ಳಬೇಕೆಂದರೆ ಪೋಷಕರ ಬಳಿ ಹಣ ವಿರಲೇಬೇಕು. ಬಟ್ಟೆ, ಮೇಕಪ್, ಆಭರಣ, ಚಪ್ಪಲಿ ಕೇಶಾಲಂಕಾರ ಎಂದು ಎಲ್ಲಕ್ಕೂ ಪ್ರತ್ಯೇಕವಾಗಿ ಹಣವನ್ನು ತೆರಬೇಕು. ಅವುಗಳನ್ನು ಹಾಕಿಕೊಂಡ ಮಕ್ಕಳು ಒಂದೇ ಥರ ಕಾಣುತ್ತಾವಾದ್ದರಿಂದ, ನೃತ್ಯ ಮುಗಿಯುಷ್ಟರಲ್ಲಿ ನಮ್ಮ ಮಕ್ಕಳನ್ನು ಕಂಡುಹಿಡಿದು ಕಣ್ತುಂಬಿಕೊಂಡರೆ ಅಷ್ಟೇ ಲಾಭ!

ಇನ್ನು ಆಗ ಶಿಕ್ಷರಿಗೆ ತಮ್ಮ ತಮ್ಮ ತರಗತಿಯ ಮಕ್ಕಳು ಮಾಡುವ ನೃತ್ಯಗಳು ವಿಶಿಷ್ಟವಾಗಿ ಮೂಡಿಬರಬೇಕು ಎಂಬ ಹಂಬಲ ಇರುತ್ತಿತ್ತು. ನೃತ್ಯ ಬರುವ ಬೇರೆ ಮಕ್ಕಳ ಕೈಲಿ ಹೊಸ ಸ್ಟೆಪ್ಪುಗಳನ್ನು ಕಲಿಸುವಂತೆ ಕೇಳಿಕೊಳ್ಳುತ್ತಿದ್ದರು. ಈಗ ಬಹಳಷ್ಟು ಜನ ಶಿಕ್ಷಕರು ಯಾವುದೇ ರಿಸ್ಕ್ ತೆಗೆದುಕೊಳ್ಳುವುದೇ ಇಲ್ಲ. ಈಗಿನ ತರಗತಿಗಳು ಅತ್ಯಾಧುನಿಕವಾದುವುಗಳು. ತಾವು ಆರಿಸಿಕೊಂಡ ಹಾಡನ್ನು, ತರಗತಿಯ ಮಲ್ಟಿಮೀಡಿಯಾ ಸ್ಕ್ರೀನ್‌ನಲ್ಲಿ ಹಾಕಿ, ಮಕ್ಕಳಿಗೆ ಪ್ರಾಕ್ಟೀಸು ಮಾಡಲು ಹೇಳಿಬಿಡುತ್ತಾರೆ. ಅಲ್ಲಿ ಯಾವ ಕ್ರಿಯೇಟಿವಿಟಿಗೂ ಅವಕಾಶವೇ ಇಲ್ಲ. ಇದು ಖಂಡಿತವಾಗಿ ಕಪೋಲಕಲ್ಪಿತವಲ್ಲ. ಪ್ರತಿಷ್ಠಿತ ಶಾಲೆಯೊಂದರಲ್ಲಿ ನಾನು ಕಣ್ಣಾರೆ ನೋಡಿರುವುದು.

ಇದಲ್ಲದೆ, ಸಾಂಸ್ಕೃತಿಕ ಕಾರ್ಯಕ್ರಮಗಳ Outsourcing ಕೂಡ ನಡೆಯುತ್ತದೆ. ವೇದಿಕೆಯ ಕಾರ್ಯಕ್ರಮಗಳನ್ನು ತಲೆನೋವು ಎಂದು ಭಾವಿಸುವ ಎಷ್ಟೋ ಶಿಕ್ಷಕರು ಈ ರೀತಿಯ ಅಭ್ಯಾಸ ಮಾಡಿಕೊಳ್ಳುತ್ತಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಶಾಲೆ ಕೇಳಿದ್ದನ್ನು ಮಕ್ಕಳಿಗೆ ಕಲಿಸಿ ಹೋಗುತ್ತಾರೆ. ಹೀಗಿರುವಾಗ ಮಕ್ಕಳಿಗೆ ಕಲಿಕೆಯ ಪ್ರಕ್ರಿಯೆಯಲ್ಲಿ ಅಭಿರುಚಿ ಬೆಳೆಯಬಹುದಾದ ಯಾವುದೇ ಅವಕಾಶವೇ ಇಲ್ಲವಾಗುತ್ತದೆ.

ಶಾಲೆಯ ಮಕ್ಕಳ ಸಂಭ್ರಮವಾಗಬೇಕಿದ್ದ ವಾರ್ಷಿಕೋತ್ಸವಗಳು ಇಂದು ಶಾಲೆಗಳ ಪ್ರತಿಷ್ಠೆಯ ವಿಷಯವಾಗಿ ಮಾರ್ಪಟ್ಟು ನಿಜವಾದ ಬಣ್ಣ ಕಳೆದುಕೊಳ್ಳುತ್ತಿವೆ. ನಾವು ಓದುತ್ತಿದ್ದಾಗ ವಾರ್ಷಿಕೋತ್ಸವದ ದಿನ ಹತ್ತಿರವಾದಂತೆ ನಮ್ಮ ಸಂಭ್ರಮ ಮುಗಿಲು ಮುಟ್ಟುತ್ತಿತ್ತು. ಇಡೀ ಶಾಲೆಯನ್ನು ಗುಡಿಸಿ ಸಾರಿಸಿ ಸಿಂಗರಿಸುತ್ತಿದ್ದೆವು. ವಾರ್ಷಿಕೋತ್ಸವದ ಹಿಂದಿನ ಎರಡು ದಿನಗಳಂತೂ ಅಭ್ಯಾಸಕ್ಕೆಂದೇ ಮೀಸಲಾಗಿರುತ್ತಿದ್ದವು. ಎಲ್ಲ ತರಗತಿಗಳಲ್ಲೂ ಇಣುಕಿ ನೋಡಿ ನೋಡಿ ಆನಂದಿಸುತ್ತಿದ್ದೆವು. ಶಾಲೆಯ ಆವರಣದಲ್ಲಿಯೇ ನಡೆಯುತ್ತಿದ್ದ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳಲು ಮುಂದಿನ ಸಾಲಿನಲ್ಲಿ ವಿರಾಜಮಾನರಾಗಲು ಪೈಪೋಟಿ ನಡೆಸುತ್ತಿದ್ದೆವು. ನಮ್ಮ ನಮ್ಮ ಸ್ನೇಹಿತರು ವೇದಿಕೆಯ ಮೇಲೆ ಬಂದಾಗ ಕೇಕೆ ಹಾಕಿ ಸಂಭ್ರಮಿಸಿ ಹುರಿದುಂಬಿಸುತ್ತಿದ್ದೆವು.

ಆದರೆ ಇಂದು ಹಲವಾರು ಕಾರಣಗಳನ್ನೊಡ್ಡಿ ಬಹುತೇಕ ಶಾಲೆಗಳು ವಾರ್ಷಿಕೋತ್ಸವವನ್ನು ನಗರದ ಕಲಾಮಂದಿರಗಳಲ್ಲಿ ನಡೆಸುತ್ತವೆ. ಅಲ್ಲಿಗೆ, ನೃತ್ಯ-ನಾಟಕಗಳಲ್ಲಿ ಭಾಗವಹಿಸುತ್ತಿರುವ ಮಕ್ಕಳಿಗೆ ಮತ್ತು ಅವರ ಪೋಷಕರಿಗೆ ಮಾತ್ರ ಪ್ರವೇಶ. ಎಲ್ಲರಿಗೂ ಸೀಟ್ ನಂಬರ್‌ಗಳು. ನಿಜವಾಗಿ ಯಾರಿಗಾಗಿ ನಡೆಯುತ್ತವೆ ಇಂತಹಾ ಸಮಾರಂಭಗಳು ಎಂದೇ ಅನುಮಾನವಾಗುತ್ತದೆ. ಅಲ್ಲಿ ಮಕ್ಕಳ ಕಲರವವೇ ಇರುವುದಿಲ್ಲ. ತಮ್ಮ ಸ್ನೇಹಿತರು ವೇದಿಕೆಯ ಮೇಲೆ ಬಂದಾಗ ಹುರಿದುಂಬಿಸುವ ಮಕ್ಕಳಿರುವುದಿಲ್ಲ. ನೃತ್ಯವನ್ನು ನೋಡಿ ಶುದ್ಧವಾಗಿ ಆನಂದಿಸುವ ಮನಸುಗಳೇ ಅಲ್ಲಿರುವುದಿಲ್ಲ. ಮೊಬೈಲ್‌ನಲ್ಲಿ ಸೆರೆ ಹಿಡಿಯುವ ಹುಚ್ಚಿನ ಪೋಷಕರ ಸಂಖ್ಯೆಯೇ ಅಲ್ಲಿ ಹೆಚ್ಚು.

ಪರಿಸ್ಥಿತಿ ಬದಲಾಗಿದೆ. ಒಪ್ಪಿಕೊಳ್ಳೋಣ. ಆದರೆ ಒಂದು ಸಮಾರಂಭದ ನಿಜ ಧ್ಯೇಯವೇ ಅಳಿಯುವಷ್ಟು ಬದಲಾಗಿದೆಯೇ? ಅಥವಾ ನಾವು ಬದಲಾಯಿಸಿದ್ದೇವೆಯೇ? ನಾವೇ ಉತ್ತರ ಕಂಡುಕೊಳ್ಳಬೇಕು. ಇನ್ನು ಶೈಕ್ಷಣಿಕ ಪ್ರವಾಸಗಳದ್ದು ಮತ್ತೊಂದು ಕಥೆ. ಇಂದು ಬಹುತೇಕ ಶಾಲೆಗಳು ರಿಸ್ಕ್ ಬೇಡ ಎಂದು, ಮಕ್ಕಳನ್ನು ರೆಸಾರ್ಟಿಗೋ, ಜಿಆರ್‌ಎಸ್-ವಂಡರ್ ಲಾ ನಂತಹಾ ಫ್ಯಾಂಟಸಿ ಪಾರ್ಕುಗಳಿಗೋ ಒಂದು ದಿನದ ಮಟ್ಟಿಗೆ ಕರೆದುಕೊಂಡು ಹೋಗಿ, ಪ್ರವಾಸ ಮಾಡಿದೆವು ಎನ್ನುತ್ತಿವೆ!

ಎಲ್ಲಿಯ ಶೈಕ್ಷಣಿಕ ಪ್ರವಾಸ ಇದು, ಮಕ್ಕಳನ್ನು ಶಾಲೆಯಿಂದ ಪ್ರವಾಸ ಕರೆದುಕೊಂಡು ಹೋಗುವ ಹಿಂದೆ ಬಹಳಷ್ಟು ಉತ್ತಮ ಉದ್ದೇಶಗಳ ಈಡೇರಿಕೆಯ ನಿರೀಕ್ಷೆಗಳಿರುತ್ತವೆ. ಮಕ್ಕಳು ಐತಿಹಾಸಿಕ ಸ್ಥಳಗಳನ್ನು ನೋಡಿ ಕಲಿಯಬೇಕು ಎಂಬುದಷ್ಟೇ ಅಲ್ಲ. ಮಕ್ಕಳು ಹೊರಪ್ರಪಂಚದ ಜೊತೆ ವ್ಯವಹರಿಸುವುದನ್ನು ಕಲಿಯಬೇಕು, ಹೋದಲ್ಲಿನ ಹೊಸ ಪರಿಸರಕ್ಕೆ ತಕ್ಕಂತೆ ವ್ಯವಹರಿಸುವುದನ್ನು ಕಲಿಯಬೇಕು, ಸಹಪಾಠಿಗಳೊಡನೆ ಹೊಂದಿಕೊಂಡು ಅನುಸರಿಸಿಕೊಂಡು ಹೋಗುವುದನ್ನು ಕಲಿಯಬೇಕು, ತಂದೆ ತಾಯಿ ಜೊತೆಗಿಲ್ಲದಾಗ ತಮ್ಮನ್ನು ತಾವು ಸಂಭಾಳಿಸಿಕೊಳ್ಳುವುದನ್ನು ಕಲಿಯಬೇಕು, ಹಣವನ್ನು ಸರಿಯಾದ ಬಗೆಯಲ್ಲಿ ಖರ್ಚು ಮಾಡುವುದನ್ನು ಅರಿಯಬೇಕು. ಇತ್ಯಾದಿ. ಈಗಿನ ಪ್ರವಾಸದ ಸ್ಟೈಲ್‌ನಲ್ಲಿ ಇದೆಲ್ಲಾ ಎಲ್ಲಿ ಆಗುತ್ತಿದೆ

ಬದಲಾಗಿರುವ ಈ ಕಾಲದಲ್ಲಿ ಐಷಾರಾಮಿ ಎನ್ನುವುದು ಎಲ್ಲರ ಕೈಗೂ ಎಟುಕುತ್ತಿದೆ. ಹಣದ ಅಭಾವ ಕೊಂಚ ಕಡಿಮೆಯಾಗಿರುವ ಈ ಹೊತ್ತಿನಲ್ಲಿ ಪೋಷಕರು ತಮ್ಮ ಮಕ್ಕಳು ಕಷ್ಟಪಡುವುದನ್ನು ಕನಸಿನಲ್ಲಿಯೂ ಬಯಸಲಾರರು. ಮಕ್ಕಳು ಸುಖದಿಂದ ಇರುವುದನ್ನು ಕಾಣುವ ಹಕ್ಕು ಅವರಿಗಿದೆ. ಎಲ್ಲವೂ ನಿಜವೇ. ಆದರೆ ಮಕ್ಕಳನ್ನು ಹೀಗೆ ಬೆಳೆಸುವುದರಿಂದ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ಯಾರಾದರೂ ಏಕೆ ಯೋಚಿಸುತ್ತಿಲ್ಲ? ಇಂದಿನ ಮಕ್ಕಳಲ್ಲಿ ಸ್ವಾರ್ಥ ಹೆಚ್ಚಾಗುತ್ತಿದೆ, ಕಷ್ಟ ಸಹಿಷ್ಣುತೆ ಇಲ್ಲವಾಗುತ್ತಿದೆ, ಮಾನಸಿಕ ಸಮಸ್ಯೆಗಳಿಗೆ ಮಕ್ಕಳು ಚಿಕ್ಕವಯಸ್ಸಿನಲ್ಲಿಯೇ ತುತ್ತಾಗುತ್ತಿದ್ದಾರೆ, ಆತ್ಮಹತ್ಯೆಯ ಯೋಚನೆಗಳು ಅವರನ್ನು ಕಾಡುತ್ತಿವೆ, ನಾಗರಿಕ ಪ್ರಜ್ಞೆ ಇಲ್ಲವಾಗುತ್ತಿದೆ, ಉಡಾಫೆ ಮನೋಭಾವ ಬೆಳೆಯುತ್ತಿದೆ, ಇದೆಲ್ಲದ್ದಕ್ಕೂ ನಾವು ಮಕ್ಕಳನ್ನು ಅತಿಸುರಕ್ಷಿತ ವಲಯದಲ್ಲಿ ಬೆಳೆಸುತ್ತಿರುವ ಬಗೆಯೇ ಕಾರಣವಲ್ಲವೇ? ವ್ಯಾವಹಾರಿಕತೆ ಮಿತಿಮೀರಿ ಶಾಲೆಗಳು ಕಾರ್ಪೋರೇಟ್ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಿರುವುದರಿಂದ ಇವೆಲ್ಲಾ ಅನಾಹುತಗಳು ಉಂಟಾಗುತ್ತಿರುವುದಲ್ಲವೇ?


ಹಿಂದೆಲ್ಲಾ ಮಕ್ಕಳೇ ತಮ್ಮ ತಮ್ಮ ತರಗತಿಯ ಕೊಠಡಿಗಳನ್ನು ಗುಡಿಸಿ ಸ್ವಚ್ಛವಾಗಿಡುತ್ತಿದ್ದರು, ಕೈತೋಟ ಮಾಡುತ್ತಿದ್ದರು, ಶಾಲೆಯ ಆವರಣವನ್ನು ಸ್ವಚ್ಛಗೊಳಿಸುವುದೂ ಸರದಿಯಂತೆ ನಡೆಯುತ್ತಿತ್ತು. ಎಲ್ಲವೂ ಸಹಜವೆಂಬಂತೆ ನಡೆಯುತ್ತಿತ್ತು. ಈಗ ಅದೆಲ್ಲಕ್ಕೂ ತಿಲಾಂಜಲಿ ಇಟ್ಟು, ಜಪಾನಿನ ಶಾಲೆಗಳನ್ನು ಪ್ರಶಂಸಾದೃಷ್ಟಿಯಿಂದ ನೋಡುವ ಅಸಹಾಯಕತೆಯನ್ನು ಬೆಳೆಸಿಕೊಂಡಿದ್ದೇವೆ. ಹಿಂದೆ ಒಮ್ಮೆ ಚರ್ಚೆ ಮಾಡಿದ್ದೇ ವಿಷಯ! ಆದರೆ ಮೂಲ ಸಮಸ್ಯೆ ಒಂದೇ ಆಗಿರುವುದರಿಂದ ಅಲ್ಲಿಯೇ ಗಿರಕಿ ಹೊಡೆಯುತ್ತಿದೆ!

ಮಕ್ಕಳಿಗಾಗಿಯೇ ರೂಪಿಸಿರುವ ವಾರ್ಷಿಕೋತ್ಸವ ಮತ್ತು ಶಾಲಾ ಪ್ರವಾಸದಂತಹ ಅತ್ಯುತ್ತಮ ಚಟುವಟಿಕೆಗಳನ್ನು ಯಾವುದೋ ಸಲ್ಲದ ಗುರಿಗಾಗಿ ಅತಂತ್ರಗೊಳಿಸಿ ಮಕ್ಕಳ ಖುಷಿಯನ್ನು ಕಿತ್ತುಕೊಂಡು ಅವರನ್ನು ರೋಬೋಟ್‌ಗಳಂತೆ ಮಾಡುವುದು ಅಕ್ಷಮ್ಯ ಅಪರಾಧವಾಗುತ್ತದೆ ಎಂಬುದು ನಮ್ಮ ಮನಸಿನಿಂದ ಮರೆಯಾಗದಿರಲಿ. ಇದಕ್ಕೆ ಪರಿಹಾರ ಕಂಡುಕೊಂಡು ಮಕ್ಕಳ ಬಾಲ್ಯವನ್ನು ಕಸಿಯದಿರುವ ದಿಟ್ಟ ನಿರ್ಧಾರವನ್ನು, ಅದಕ್ಕೆ ಪೂರಕವಾದ ಅಭ್ಯಾಸಗಳನ್ನು ನಾವು, ಅಂದರೆ ಸಮಾಜ ಅಥವಾ ನಾವೇ ರೂಪಿಸಿರುವ ವ್ಯವಸ್ಥೆ ಅಳವಡಿಸಿಕೊಳ್ಳಬೇಕಾಗಿದೆ ಅಲ್ಲವೇ?

ವೈಯಕ್ತಿಕ ದ್ವೇಷ ಸಾಧಿಸಲು ಕೆಲ ಮಹಿಳೆಯರಿಂದ ಸೆಕ್ಷನ್ 498 ಎ ದುರ್ಬಳಕೆ: ಸುಪ್ರೀಂ ಕಳವಳ

ಹೊಸದಿಲ್ಲಿ, ಡಿ.11-ವಿವಾಹಿತ ಮಹಿಳೆಯರ ವಿರುದ್ಧ ಪತಿ ಹಾಗೂ ಅವರ ಸಂಬಂಧಿಕರು ಎಸಗುವ ದೌರ್ಜನ್ಯ ತಡೆಯಲು ಇರುವ ಸೆಕ್ಷನ್ 498 ಎ ಕಾನೂನು ಇತ್ತೀಚೆಗೆ ದುರುಪಯೋಗವಾಗುತ್ತಿರುವ ಬಗ್ಗೆ ಸುಪ್ರೀಂಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಪತಿ ಹಾಗೂ ಆತನ ಕುಟುಂಬದ ವಿರುದ್ಧ ವೈಯಕ್ತಿಕ ದ್ವೇಷ ಸಾಧಿಸಲು ಕೆಲ ಮಹಿಳೆಯರು ಸೆಕ್ಷನ್ 498 ಎ ಕಾನೂನು ಅಸ್ತ್ರವನ್ನಾಗಿ ಬಳಸುತ್ತಿರುವ ಪ್ರವೃತ್ತಿ ಹೆಚ್ಚುತ್ತಿದೆ. ಕೆಲವೊಮ್ಮೆ ಕೌಟುಂಬಿಕ ದೌರ್ಜನ್ಯ ಮತ್ತು ಕಿರುಕುಳದಿಂದ ಮಹಿಳೆಯರನ್ನು ರಕ್ಷಿಸಲು ಬಳಕೆಯಾಗಬೇಕಿದ್ದ ಈ ಸೆಕ್ಷನ್, ಇತ್ತೀಚೆಗೆ ದ್ವೇಷ ಸಾಧಿಸಲು ದುರ್ಬಳಕೆಯಾಗುತ್ತಿದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಎನ್.ಕೋಟೀಶ್ವರ ಸಿಂಗ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ. ಕೆಲ ಸಂದರ್ಭಗಳಲ್ಲಿ ಮಹಿಳೆಯರು ತಮ್ಮ ಅಸಹಜ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಪತಿ ಮತ್ತು ಆತನ ಕುಟುಂಬದ ವಿರುದ್ಧ ಐಪಿಸಿ ಸೆಕ್ಷನ್ 498 ಎ ಅಡಿಯಲ್ಲಿ ಪ್ರಕರಣ ದಾಖಲಿಸುತ್ತಿದ್ದಾರೆ. ವಿವಾಹದ ನಂತರ ಇತ್ತೀಚೆಗೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿವೆ. ಬಳಿಕ ಕೆಲ ಮಹಿಳೆಯರು 498 ಎ ರೀತಿಯ ಸೆಕ್ಷನ್‌ಗಳನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಪತಿ, ಮತ್ತವರ ಕುಟುಂಬದ ವಿರುದ್ಧದ ದೂರು ನೀಡುತ್ತಾರೆ. ಬಳಿಕ ಸರಿಯಾಗಿ ತನಿಖೆ ಆಗದಿದ್ದಲ್ಲಿ ಕಾನೂನು ದುರುಪಯೋಗವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಆತಂಕ ವ್ಯಕ್ತಪಡಿಸಿದೆ.



ದೌರ್ಜನ್ಯ ಅನುಭವಿಸಿದ ಮಹಿಳೆ ಮೌನವಾಗಿರಬೇಕು, ಐಪಿಸಿಯ ಸೆಕ್ಷನ್ 498 ಎ ಅಡಿಯಲ್ಲಿ ಪ್ರಕರಣ ದಾಖಲಿಸುವುದರಿಂದ ಹಿಂದೆ ಸರಿಯಬೇಕು ಎಂದು ಹೇಳುತ್ತಿಲ್ಲ. ಆದರೆ ವಿನಾಕಾರಣ ದ್ವೇಷ ಸಾಧಿಸಲು ಕಾನೂನು ಬಳಕೆ ಆಗಬಾರದು. ಇಂತಹ ಪ್ರಕರಣಗಳನ್ನೂ ಪ್ರೋತ್ಸಾಹಿಸಬಾರದು ಎಂದು ಕೋರ್ಟ್ ಹೇಳಿದೆ. ಪ್ರಕರಣವೊಂದರಲ್ಲಿ ವಿಚ್ಛೇದನ ಕೋರಿ ಪತಿ ಮೇಲ್ಮನವಿ ಸಲ್ಲಿಸಿದ್ದರು. ಬಳಿಕ ಆತನ ಪತ್ನಿ, ಪತಿ ಹಾಗೂ ಆತನ ಕುಟುಂಬಸ್ಥರ ವಿರುದ್ಧ ಹಲ್ಲೆ, ವರದಕ್ಷಿಣೆ ಕಿರುಕುಳ ಆರೋಪ ಹೊರಿಸಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣವನ್ನು ತೆಲಂಗಾಣ ಹೈಕೋರ್ಟ್ ರದ್ದುಗೊಳಿಸಲು ನಿರಾಕರಿಸಿತ್ತು. ಹೀಗಾಗಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ವಾದ ಪ್ರತಿವಾದ ಆಲಿಸಿದ ಸುಪ್ರೀಂಕೋರ್ಟ್, ವೈಯಕ್ತಿಕ ದ್ವೇಷದಿಂದ ಪತ್ನಿ ಪ್ರಕರಣ ದಾಖಲಿಸಿದ್ದು, ಆಕೆಯ ರಕ್ಷಣೆಗೆಂದು ಇದ್ದಂತಹ ಕಾನೂನನ್ನು, ಆಕೆಯೇ ದುರುಪಯೋಗಪಡಿಸಿಕೊಳ್ಳುತ್ತಿದ್ದಾಳೆ ಎಂದಿತು. ಬಳಿಕ ಐಪಿಸಿ ಸೆಕ್ಷನ್ 498 ಎ ದುರುಪಯೋಗ ಆಗುತ್ತಿರುವ ಬಗ್ಗೆ ಸುಪ್ರೀಂಕೋರ್ಟ್ ಕಳವಳ ವ್ಯಕ್ತಪಡಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಭರದಿಂದ ಸಾಗುತ್ತಿದೆ ಸಿವೇಜ್ ಫಾರಂನ 7 ಲಕ್ಷ ಟನ್ ತ್ಯಾಜ್ಯ ತೆರವು ಕಾರ್ಯ

2026ರ ಜನವರಿ ಅಂತ್ಯದೊಳಗೆ ಪೂರ್ಣ ತ್ಯಾಜ್ಯ ತೆರವು ಸಾಧ್ಯತೆ




ಮೈಸೂರಿನ ವಿದ್ಯಾರಣ್ಯಪುರಂ ಬಡಾವಣೆಯಲ್ಲಿರುವ ಸಿವೇಜ್ ಫಾರಂ ಕಸ ಸಂಗ್ರಹಣಾ ಘಟಕದಲ್ಲಿ ಸುಮಾರು 20 ವರ್ಷದಿಂದ ವಿಲೇವಾರಿಯಾಗದೆ ಉಳಿದಿದ್ದ ಕಸ ತೆರವು ಕಾರ್ಯ ನಡೆಯುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.11(ಜಿಎ)–ಪಾರಂಪರಿಕ ನಗರಿಗೆ ಶಾಪವಾಗಿದ್ದ 20 ವರ್ಷದಿಂದ ವಿಲೇವಾರಿಯಾಗದ 7 ಲಕ್ಷ ಟನ್ ಲೆಗಸಿ ವೇಸ್ಟ್‌ನ (ಪಾರಂಪರಿಕ ತ್ಯಾಜ್ಯ) ತೆರವಿನ ಕಾರ್ಯ ಭರದಿಂದ ಸಾಗಿದ್ದು, 2026ರ ಜನವರಿ ಅಂತ್ಯ ದೊಳಗೆ ಪೂರ್ಣ ಗೊಳ್ಳುವ ಸಾಧ್ಯತೆ ಇದೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ರುವ ಸಿವೇಜ್ ಫಾರಂ ಕಸ ಸಂಗ್ರ ಹಣಾ ಘಟಕದಲ್ಲಿ 20 ವರ್ಷದಿಂದ ವಿಲೇ ವಾರಿಯಾಗದೆ ಉಳಿದಿರುವ ಮೈಸೂರಿನ ಅಂದಾಜು 7 ಲಕ್ಷ ಟನ್ ಲೆಗಸಿ ವೇಸ್ಟ್ (ಪಾರಂಪರಿಕ ತ್ಯಾಜ್ಯ)ತೆರವಿನ ಕಾರ್ಯ ವನ್ನು ಸೂರತ್ ಮೂಲದ ಎಂ/ಎಸ್ ಡಿ.ಹೆಚ್.ಪಟೇಲ್ ಸಂಸ್ಥೆಗೆ ವಹಿಸಿದ್ದು, ಜೂನ್ ತಿಂಗಳಿನಿಂದ ಆರಂಭಿಸಿದ್ದಾರೆ.

ಮೈಸೂರಿನಲ್ಲಿ ನಿತ್ಯವೂ 500 ಟನ್ ಕಸ ಉತ್ಪತ್ತಿಯಾಗುತ್ತದೆ. ಅದರಲ್ಲಿ 250 ಟನ್ ಕಸ ವಿಲೇವಾರಿಯಾಗುತ್ತಿದೆ. ನಿತ್ಯ 250 ಟನ್ ಕಸ ಹಾಗೆಯೇ ಬಾಕಿ ಉಳಿ ಯುತ್ತಿದೆ. ಸುಮಾರು 20 ವರ್ಷಗಳಿಂದ ಹೀಗೆ ಬಾಕಿ ಉಳಿದಿತ್ತು. ಸಂಪೂರ್ಣ ವೈಜ್ಞಾನಿಕವಾಗಿ ಕಸ ವಿಲೇವಾರಿ ಆಗಬೇಕಿ ರುವ ಹಿನ್ನೆಲೆಯಲ್ಲಿ 59 ಕೋಟಿ ರೂ.ಗಳ ಪರಿಷ್ಕೃತ ಡಿಪಿಆರ್ ಸಿದ್ಧಪಡಿಸಿ ಅನು ಮೋದನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಈ ಪ್ರಸ್ತಾವ ಕುರಿತು ಹಿಂದಿನ ವಿಧಾನ ಸಭಾ ಚುನಾವಣೆ ನೀತಿಸಂಹಿತೆ ಜಾರಿಗೂ ಮುನ್ನಾ ದಿನ ಸರ್ಕಾರದ ಮುಖ್ಯ ಕಾರ್ಯ ದರ್ಶಿ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಯೋಜನೆಗೆ ಅನುಮೋದನೆ ದೊರೆಯಿತು.

ನಂತರ ಕಳೆದ ಮಾರ್ಚ್‌ನಿಂದ ಆರಂಭ ವಾದ ಕಸ ತೆರವು ಕಾರ್ಯಕ್ಕೆ ಸಂಸ್ಥೆಯು ನಿತ್ಯ ಕಾರ್ಯಕ್ಕೆ ಅನುಕೂಲವಾಗುವಂತೆ ಸಿವೇಜ್ ಫಾರಂ ಆವರಣದಲ್ಲಿ ಘಟಕ ನಿರ್ಮಾಣ ಮಾಡಿಕೊಂಡರು. ಹಾಗೇ ಸಿಬ್ಬಂದಿಗೆ ತಂಗುದಾಣವನ್ನು ನಿರ್ಮಿಸಿ, ಕಸ ತೆರವು ಕಾರ್ಯಕ್ಕೆ ಅಡ್ಡಿಯಾಗದಂತೆ ಸಕಲ ಸಿದ್ಧತೆ ಮಾಡಿಕೊಂಡು ನಂತರ ಜೂನ್ ತಿಂಗಳಿಂದ ತೆರವು ಕಾರ್ಯ ಆರಂಭಿಸಿದೆ.

ಹಂತಹಂತವಾಗಿ ಕಸ ತೆರವು: ಸುವೇಜ್ ಫಾರಂನಲ್ಲಿರುವ ರಾಶಿ ರಾಶಿ ಕಸದ ಭಾಗವನ್ನು ಪ್ರತ್ಯೇಕವಾದ ಆರು ಬ್ಲಾಕ್ ಗಳನ್ನು ಮಾಡಿಕೊಂಡಿದ್ದು, ಇದರಲ್ಲಿ ಈಗ ಬ್ಲಾಕ್ 1ರಲ್ಲಿ ಶೇ.35ರಷ್ಟು ಕಸ ವನ್ನು ತೆರವು ಮಾಡಿದ್ದು, ಮುಂದಿನ ದಿನಗಳಲ್ಲಿ ಇತರ ಬ್ಲಾಕ್‌ಗಳಲ್ಲಿ ಕಸ ತೆರವು ಮಾಡಲಿದ್ದಾರೆ.

> “ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರಂ ಕಸವು ಪ್ರತಿ ಬಾರಿ ಚುನಾವಣಾ ಅಸ್ತ್ರವಾಗಿತ್ತು.ಆದರೆ, ಈ ಹಿಂದಿನ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹಾಗೂ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ವಿಶೇಷ ಒತ್ತು ನೀಡಿದ ಪರಿಣಾಮ ಇಂದು ಕಸ ತೆರವು ಕಾರ್ಯ ಆರಂಭವಾಗಿದ್ದು, ತ್ವರಿತವಾಗಿ ಕಸ ಬೇರ್ಪಡಿಸುವ ಕಾರ್ಯ ನಡೆಯುತ್ತಿದೆ. ಜೆ.ಪಿ.ನಗರ ನಿವಾಸಿಗಳಿಗೆ ನೀಡಿದ ಭರವಸೆಯಂತೆ 2026ರ ಜನವರಿ ಅಂತ್ಯದೊಳಗೆ ಜೆಪಿ ನಗರ ಹಾಗೂ ಸುತ್ತಮುತ್ತಲ ಪ್ರದೇಶವನ್ನು ವಾಸನೆ ಮತ್ತು ಕಸ ಮುಕ್ತ ಸ್ಥಳವಾಗಿ ಮಾಡಿಕೊಡುತ್ತೇವೆ. **–ಟಿ.ಎಸ್.ಶ್ರೀವತ್ಸ, ಶಾಸಕ**

> “ಸಂಸ್ಥೆ ವತಿಯಿಂದ ತ್ವರಿತವಾಗಿ ಕಸ ತೆರವು ಕಾರ್ಯ ನಡೆಯುತ್ತಿದ್ದು, ಪ್ಲಾಸ್ಟಿಕ್, ಮಣ್ಣು, ಗೊಬ್ಬರ ಸೇರಿದಂತೆ ಇತರ ವಸ್ತುಗಳಾಗಿ ಬೇರ್ಪಡಿಸಿ ಮರು ಬಳಕೆಯಾಗುವಂತೆ ಕೆಲಸ ನಡೆಯತ್ತಿದೆ. ಬ್ಲಾಕ್ 1ರಲ್ಲಿ ಶೇ.35ರಷ್ಟು ಕಸ ತೆರವು ಆಗಿದೆ. 2025ರ ಜನವರಿಗೆ ಮುಂಚಿತವಾಗಿ ಯೋಜನೆ ಅಂತ್ಯಗೊಳಿಸುತ್ತೇವೆ.
> **–ಗೋಪಾಲ್‌ಸಿಂಗ್, ಯೋಜನೆಯ ಜನರಲ್ ಮ್ಯಾನೇಜರ್, ಎಂ/ಎಸ್ ಡಿ.ಹೆಚ್.ಪಟೇಲ್ ಸಂಸ್ಥೆ**

ಬೃಹತ್ ಯಂತ್ರ ಬಳಕೆ: ರಾಶಿ ರಾಶಿ ಕಸವನ್ನು ತೆರವು ಮಾಡಲು ಸಂಸ್ಥೆ ವತಿಯಿಂದ ಪವರ್ ಸ್ಕ್ರೀನ್ ಎಂಬ ಎರಡು ಬೃಹತ್ ಯಂತ್ರಗಳನ್ನು ಬಳಸಿ ಕೊಂಡು ತೆರವು ಕಾರ್ಯವನ್ನು ಚುರು ಕಾಗಿ ನಡೆಸುತ್ತಿದ್ದಾರೆ. ಈ ಯಂತ್ರವು ಪ್ಲಾಸ್ಟಿಕ್, ಮಣ್ಣು, ಗೊಬ್ಬರ ಸೇರಿದಂತೆ ಇತರ ವಸ್ತುಗಳನ್ನು ಬೇರ್ಪಡಿಸುವ ಕಾರ್ಯ ಮಾಡಲು ಸಹಕಾರಿಯಾಗಿದ್ದು, ನಿತ್ಯವೂ 10 ಗಂಟೆ ಕಾರ್ಯ ನಿರ್ವಹಿಸಿ 1,000 ಟನ್‌ನಷ್ಟು ಕಸ ತೆರವು ಕಾರ್ಯ ಮಾಡುವ ಸಾಮರ್ಥ್ಯ ಹೊಂದಿದೆ.

26 ಸಿಬ್ಬಂದಿ ನೇಮಕ: ಸಂಸ್ಥೆ ವತಿ ಯಿಂದ ಕಸ ತೆರವು ಕಾರ್ಯನಿರ್ವಹಿಸಲು ದೇಶದ ವಿವಿಧ ರಾಜ್ಯಗಳ 26 ಮಂದಿ ಯನ್ನು ನೇಮಿಸಿಕೊಂಡಿದ್ದು, ಅವ ರಿಗೆ ಯಾವುದೇ ಆರೋಗ್ಯ ಸಮಸ್ಯೆ ಬಾರ ದಂತೆ ಪಿಇಪಿ ಕಿಟ್ ನೀಡಲಾಗಿದೆ. ಅವರ ಆರೋಗ್ಯದಲ್ಲಿ ವ್ಯತ್ಯಯ ಕಂಡುಬಂದಲ್ಲಿ ತಕ್ಷಣ ತಪಾಸಣೆ ಮಾಡಿಸಲಾಗುತ್ತದೆ.

ಮರು ಬಳಕೆ: ಯಂತ್ರದಲ್ಲಿ ಕಸವನ್ನು ಬೇರ್ಪಡಿಸಿದ ನಂತರ ಕಸದಲ್ಲಿರುವ ಪ್ಲಾಸ್ಟಿಕ್ ಅನ್ನು ರಾಜ್ಯದ ಕಲ್ಬುರ್ಗಿ ಹಾಗೂ ದೇಶದ ಇತರೆ ರಾಜ್ಯಗಳಲ್ಲಿ ಇರುವ ಸಿಮೆಂಟ್ ತಯಾರಿಕಾ ಘಟಕಗಳಿಗೆ ರಫ್ತು ಮಾಡಲಾಗುತ್ತಿದೆ. ಗೊಬ್ಬರಕ್ಕೆ ಯೋಗ್ಯ ವಿರುವ ಕಸವನ್ನು ಗೊಬ್ಬರಕ್ಕೆ ಬಳಕೆ ಮಾಡಲು ನೀಡಲಾಗು ತ್ತಿದೆ. ಕಸದಿಂದ ಸಂಗ್ರಹವಾಗುತ್ತಿರುವ ಮಣ್ಣನ್ನು ನೆಲ ಭರ್ತಿ (ಲ್ಯಾಂಡ್ ಫಿಲ್ಲಿಂಗ್)ಗೆ ಬಳಸ ಲಾಗುತ್ತಿದ್ದು, ಹೀಗೆ ಸಿವೇಜ್ ಫಾರಂ ನಲ್ಲಿ ತೆರವುಗೊಳುತ್ತಿರುವ ಕಸವು ಪ್ಲಾಸ್ಟಿಕ್, ಮಣ್ಣು, ಗೊಬ್ಬರ ಸೇರಿದಂತೆ ಇತರ ವಸ್ತುಗಳಾಗಿ ಮರು ಬಳಕೆಯಾಗುತ್ತಿದೆ.

ರಿಮ್ಸ್‌ನಲ್ಲಿ ನಾಲ್ವರು, ಚಿತ್ರದುರ್ಗ ಜಿಲ್ಲಾಸ್ಪತ್ರೆಯಲ್ಲಿ ಓರ್ವ ಬಾಣಂತಿ ಸಾವು

ಬೆಂಗಳೂರು, ಡಿ.11– ಬಳ್ಳಾರಿಯ ಬೀಮ್ಸ್ ನಲ್ಲಿ ಬಾಣಂತಿಯರ ಸರಣಿ ಸಾವು ಪ್ರಕರಣ ಇಡೀ ರಾಜ್ಯವನ್ನು ಬೆಚ್ಚಿ ಬೀಳಿಸಿರುವಂತೆಯೇ ಮತ್ತೆ ಐವರು ಬಾಣಂತಿಯರು ಸಾವನ್ನಪ್ಪಿರುವುದು ರಾಯಚೂರು ಹಾಗೂ ಚಿತ್ರದುರ್ಗದಲ್ಲಿ ವರದಿಯಾಗಿದೆ.


ಅಕ್ಟೋಬರ್ ತಿಂಗಳಲ್ಲಿ ಸಿಂಧನೂರು ತಾಲೂಕಿನ ತಾಲೂಕು ಆಸ್ಪತ್ರೆಯಲ್ಲಿ ನಾಲ್ವರು ಬಾಣಂತಿಯರು ಮೃತಪಟ್ಟಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಮೃತರನ್ನು ಚಂದ್ರಕಲಾ (26) ರೇಣುಕಮ್ಮ (32) ಮೌಸಮಿ ಮಂದಾಲ್ (22) ಚನ್ನಮ್ಮ (25) ಎಂದು ಗುರುತಿಸಲಾ ಗಿದೆ. ಅಕ್ಟೋಬರ್ ತಿಂಗಳಲ್ಲಿ ಹೆರಿಗೆ ಯಾದ 300 ಗರ್ಭಿಣಿಯರ ಪೈಕಿ ಏಳು ಮಂದಿ ಗಂಭೀರ ಪರಿಸ್ಥಿತಿಗೆ ತೆರಳಿದ್ದರೆ, ನಾಲ್ವರು ಸಾವನ್ನಪ್ಪಿದ್ದರು. ಇವರೆಲ್ಲರೂ ಸೀಜರೀಯನ್ ಸರ್ಜರಿಗೆ ಒಳಗಾಗಿದ್ದರು.

ಅ.21 ರಂದು ಚನ್ನಮ್ಮ ಮಗುವಿಗೆ ಜನ್ಮ ನೀಡಿದ 9 ದಿನಗಳ ಬಳಿಕ ಮೃತ ಪಟ್ಟಿದ್ದರು. ಮೌಸಮಿ ಅ.22 ರಂದು ಮಗುವಿಗೆ ಜನ್ಮ ನೀಡಿದ ಮಾರನೇ ದಿನವೇ ಸಾವನ್ನಪ್ಪಿದ್ದರು. ಇನ್ನೂ ಅ.31 ರಂದು ಹೆರಿಗೆಯಾದ ರೇಣುಕಮ್ಮ ಮಾರನೇ ದಿನವೇ ಮೃತಪಟ್ಟಿ ದ್ದರು. ತಾಯಂದಿರು ಪರಿಸ್ಥಿತಿ ಗಂಭೀರ ವಾದ ಕೂಡಲೇ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವರನ್ನು ಸ್ಥಳಾಂತರಿಸ ಲಾಗಿತ್ತು. ಅಲ್ಲಿ ಅವರು ಸಾವನ್ನಪ್ಪಿದ್ದರು. ವೈದ್ಯರ ನಿರ್ಲಕ್ಷ್ಯದಿಂದ ಅವರು ಸಾವನ್ನಪ್ಪಿದ್ದು, ನ್ಯಾಯ ಕೊಡಿಸ ಬೇಕು ಎಂದು ಮೃತರ ಕುಟುಂಬಸ್ಥರು ಒತ್ತಾಯಿಸಿದ್ದಾರೆ. ಮೃತರ ಕುಟುಂಬ ಸದಸ್ಯರಿಗೆ ಪರಿಹಾರ ನೀಡಬೇಕು, ಇಲ್ಲದಿದ್ದರೆ ಬೆಳಗಾವಿಯ ಸುವರ್ಣ ಸೌಧದ ಎದುರು ಶಿಶುಗಳೊಂದಿಗೆ ಪ್ರತಿಭಟನೆ ನಡೆಸುವು ದಾಗಿ ಎಚ್ಚರಿಕೆ ನೀಡಿದ್ದಾರೆ. ಆದಾಗ್ಯೂ, ವಿವಿಧ ಕಾರಣ ಗಳಿಂದ ಬಾಣಂತಿಯರ ಸಾವಾಗಿದೆ ಎಂದು ರಾಯ ಚೂರು ಜಿಲ್ಲಾಧಿಕಾರಿ ಕೆ ನಿತೀಶ್ ತಿಳಿಸಿದ್ದಾರೆ. IV fluid ನಿಂದ ಸಾವು ಸಂಭವಿ ಸಿವೆಯೇ ಎಂಬುದನ್ನು ಒಂದು ವಾರದೊಳಗೆ ಕಂಡುಹಿಡಿಯ ಲಾಗುವುದು. ಈ ಬಗ್ಗೆ ವರದಿ ಸಲ್ಲಿಸಿದ ನಂತರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳ ಲಿದೆ ಎಂದು ಅವರು ಹೇಳಿದ್ದಾರೆ.

ಈ ಮಧ್ಯೆ, ಚಳ್ಳಕರೆ ಬಳಿಯ ಜಾಗನೂರು ಹಟ್ಟಿ ನಿವಾಸಿ ರೋಜಾ (24)ಚಿತ್ರದುರ್ಗ ಜಿಲ್ಲಾಸ್ಪತ್ರೆಯಲ್ಲಿ ಮಂಗಳವಾರ ಸಾವನ್ನಪ್ಪಿದ್ದಾರೆ. ಅ.30 ರಂದು ಗಂಡು ಮಗುವಿಗೆ ಜನ್ಮ ನೀಡಿದ ಆಕೆ, ಹೆರಿಗೆಯಾದ ಐದು ದಿನಗಳ ನಂತರ ಮನೆಗೆ ವಾಪಸ್ ಬಂದಿದ್ದರು. ಅವರು ಕೂಡಾ ಸಿಜರೀಯನ್ ಚಿಕಿತ್ಸೆಗೆ ಒಳಗಾಗಿದ್ದರು. ಹೆರಿಗೆಯಾದ 40 ದಿನಗಳ ನಂತರ ಆಕೆಗೆ ಹೊಟ್ಟೆ ನೋವು ಕಾಣಿಸಿಕೊಂಡಿದ್ದು, ಹಲವು ಬಾರಿ ವಾಂತಿ ಮಾಡಿಕೊಂಡಿದ್ದಾರೆ. ಹೀಗಾಗಿ ಮತ್ತೆ ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ಸೇರಿಸಿ ದಾಗ ಅವರು ಮೃತಪಟ್ಟಿದ್ದಾರೆ. ವೈದ್ಯರ ನಿರ್ಲಕ್ಷ್ಯವೇ ಇದಕ್ಕೆ ಕಾರಣವಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ರೋಜಾ ಕುಟುಂಬಸ್ಥರು ಆಗ್ರಹಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಪಾಲಿಕೆಯಿಂದ ದಾಖಲೆಯ 190.41 ಕೋಟಿ ರೂ. ಆಸ್ತಿ ತೆರಿಗೆ ವಸೂಲಿ

2025ರ ಮಾರ್ಚ್ 31ರೊಳಗೆ 225 ಕೋಟಿ ರೂ. ಗುರಿ ಸಾಧನೆ: ಆಯುಕ್ತ ಷರೀಫ್



ಮೈಸೂರು,ಡಿ.11(ಆರ್‌ಕೆ)– ಮೈಸೂರು ನಗರವನ್ನು ಮೂಲಸೌಕರ್ಯದೊಂದಿಗೆ ನಿರ್ವಹಣೆ ಮಾಡಲು ಪ್ರಮುಖ ಆದಾಯದ ಮೂಲವಾಗಿರುವ ಆಸ್ತಿ ತೆರಿಗೆ ವಸೂಲಿ ಮಾಡಲು ಮೈಸೂರು ಮಹಾನಗರಪಾಲಿಕೆಯು ತೀವ್ರಗತಿಯ ಕಾರ್ಯಾಚರಣೆ ನಡೆಸುತ್ತಿದೆ.

ಮೈಸೂರು ನಗರದಲ್ಲಿ 2,25,000 ನೋಂದಾಯಿತ ಹಾಗೂ 1,95,000 ರೆವಿನ್ಯೂ ಆಸ್ತಿಗಳಿದ್ದು, 2024ರ ಏಪ್ರಿಲ್ 1ರಿಂದ 2025ರ ಮಾರ್ಚ್ 31ರವರೆಗೆ ಒಟ್ಟು 225 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿ ಸುವ ಗುರಿ ಹೊಂದಿದ್ದ ಪಾಲಿಕೆಯು, ಡಿಸೆಂಬರ್ 10ರವರೆಗೆ 191 ಕೋಟಿ, 41 ಲಕ್ಷ ರೂ. ತೆರಿಗೆ ವಸೂಲಿ ಮಾಡಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ‘ಮೈಸೂರು ಮಿತ್ರ’ನಿಗೆ ತಿಳಿಸಿದ್ದಾರೆ.

ಅದರಿಂದ 1,63,000 ಆಸ್ತಿಗಳಿಂದ ಶೇ.85ರಷ್ಟು ತೆರಿಗೆ ವಸೂಲಿ ಮಾಡಿ ದಂತಾಗಿದ್ದು, ಬಾಕಿ ತೆರಿಗೆಯನ್ನು 2025ರ ಮಾರ್ಚ್ 31ರೊಳಗಾಗಿ ವಸೂಲಿ ಮಾಡಿ ಶೇ.100 ಗುರಿ ಸಾಧಿಸಲಾಗುವುದು ಎಂದು ಆಯುಕ್ತರು ವಿಶ್ವಾಸ ವ್ಯಕ್ತಪಡಿಸಿದರು.

ಈ ಕುರಿತು ‘ಮೈಸೂರು ಮಿತ್ರ’ನಿಗೆ ಮಾಹಿತಿ ನೀಡಿರುವ ಪಾಲಿಕೆ ಉಪ ಆಯುಕ್ತ(ಕಂದಾಯ) ಸೋಮಶೇಖರ್, ಸಾಮಾನ್ಯವಾಗಿ ಪ್ರತೀ ವರ್ಷ ಮಾರ್ಚ್ ಮಾಹೆಯಲ್ಲಿ ಶೇ. 5 ರಿಯಾಯಿತಿ ನೀಡ ಲಾಗುತ್ತದೆ. ಆದರೆ,



ಷರೀಫ್

ಈ ವರ್ಷ ಸೆಪ್ಟೆಂಬರ್‌ವರೆಗೂ ರಿಯಾಯಿತಿ ನೀಡಿದ್ದರಿಂದ ಅತೀ ಹೆಚ್ಚು ಪ್ರಮಾಣದ ಆಸ್ತಿ ತೆರಿಗೆ ಬಾಕಿ ಹಣ ಸಂದಾಯವಾದ ಕಾರಣ ಈ ಬಾರಿ ಡಿಸೆಂಬರ್ ಮೊದಲ ವಾರದವರೆಗೆ ದಾಖಲೆ ಪ್ರಮಾಣದ ಆಸ್ತಿ ತೆರಿಗೆ ಸಂಗ್ರಹಿಸಲು ಸಾಧ್ಯವಾಗಿದೆ ಎಂದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನ ಏಪ್ರಿಲ್ ತಿಂಗಳಲ್ಲಿ ಅತೀ ಹೆಚ್ಚು ತೆರಿಗೆ ಸಂಗ್ರಹಿಸಲಾಗಿತ್ತು. ನಮಗೆ ನೋಂದಾಯಿತ ಆಸ್ತಿಗಳಿಂದ ಹೆಚ್ಚಿನ ಪ್ರಮಾಣದ ತೆರಿಗೆ ಬರುತ್ತದೆ. ಆದರೆ, ರೆವಿನ್ಯೂ ಬಡಾವಣೆಗಳಿಂದ ನಿರೀಕ್ಷಿತ ಪ್ರಮಾಣದ ಸಂಪನ್ಮೂಲ ಬರುವುದಿಲ್ಲ ಎಂದು ಸೋಮಶೇಖರ್ ತಿಳಿಸಿದರು.

ಇದೀಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಕೆಲ ವಸತಿ ಬಡಾವಣೆಗಳನ್ನು ಪಾಲಿಕೆಗೆ ಹಸ್ತಾಂತರಿಸುತ್ತಿರುವುದರಿಂದ ಸರ್ಕಾರವು ‘ಬಿ’ ಖಾತಾ ಮಾಡಲು ಅವಕಾಶ ನೀಡಿರುವ ಕಾರಣ ಪ್ರಸಕ್ತ ಹಣಕಾಸು ವರ್ಷದಲ್ಲಿ ನಿರೀಕ್ಷಿತ ಆದಾಯ ಕ್ರೋಢೀಕರಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಪಾಲಿಕೆಗೆ ಆಸ್ತಿ ತೆರಿಗೆಯೇ ಪ್ರಮುಖ ಆದಾಯದ ಮೂಲವಾಗಿದ್ದು, ಅದರಿಂದ ರಸ್ತೆ, ಬೀದಿದೀಪ, ಒಳಚರಂಡಿ, ಪಾರ್ಕುಗಳ ನಿರ್ವಹಣೆ, ನಗರದ ಸ್ವಚ್ಛತೆ ಸೇರಿದಂತೆ ಮೂಲಸೌಕರ್ಯ ಒದಗಿಸಬೇಕಾಗಿದ್ದು, ನಾಗರಿಕರು ಕಾಲ ಕಾಲಕ್ಕೆ ಆಸ್ತಿ ತೆರಿಗೆಯನ್ನು ಪಾವತಿಸಿ ಸಹಕರಿಸಬೇಕೆಂದೂ ಸೋಮಶೇಖರ್ ತಿಳಿಸಿದ್ದಾರೆ.

ವಿಶೇಷ ಪ್ರೋತ್ಸಾಹಧನ ಪಡೆಯಲು ಅರ್ಜಿ ಆಹ್ವಾನ

ಮೈಸೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ 2024–25ನೇ ಸಾಲಿಗೆ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ Ed Special Incentive Scheme” National Council for Teacher Education ನಿಂದ ಮಾನ್ಯತೆ ಪಡೆದಿರುವ ಬಿ.ಎಡ್ ಕೋರ್ಸ್‌ಗಳ ಸರ್ಕಾರಿ/ ಅರೆಸರ್ಕಾರಿ/ ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಬಿ.ಎಡ್ ಕೋರ್ಸ್‌ಗಳಲ್ಲಿ ದಾಖಲಾತಿ ಹೊಂದಿ ವ್ಯಾಸಂಗ ಮಾಡುತ್ತಿರುವ ಅಲ್ಪ ಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ರೂ. 25000 ಗಳ ವಿಶೇಷ ಪ್ರೋತ್ಸಾಹಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ https://sevasindhu.karnataka.gov.in ಸೇವಾಸಿಂಧು ತಂತ್ರಾಂಶದಲ್ಲಿ ಡಿಸೆಂಬರ್ 25 ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 82777 99990 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಎಟಿಐ ಅತಿಥಿಗೃಹದಲ್ಲಿ ವಸ್ತುಗಳ ನಾಪತ್ತೆ ಪ್ರಕರಣ
ರೋಹಿಣಿ ಸಿಂಧೂರಿ ಪರ 77,297 ರೂ. ಪಾವತಿಸಿದ ಮಾಜಿ ವ್ಯವಸ್ಥಾಪಕ



ರೋಹಿಣಿ ಸಿಂಧೂರಿ

ಮೈಸೂರು, ಡಿ.11(ಆರ್‌ಕೆ)– ಜಿಲ್ಲಾಧಿಕಾರಿಯಾಗಿದ್ದ ವೇಳೆ ರೋಹಿಣಿ ಸಿಂಧೂರಿ ಅವರು ವಾಸ್ತವ್ಯ ಹೂಡಿದ್ದ ಮೈಸೂರಿನ ಲಲಿತ ಮಹಲ್ ರಸ್ತೆಯ ಆಡಳಿತ ತರಬೇತಿ ಸಂಸ್ಥೆ (ಎಟಿಐ) ಅತಿಥಿಗೃಹದಲ್ಲಿ ವಸ್ತುಗಳು ಕಣ್ಮರೆಯಾಗಿದ್ದ ಪ್ರಕರಣ ಇದೀಗ ಮುಕ್ತಾಯವಾಗಿದೆ.


ರೋಹಿಣಿ ಸಿಂಧೂರಿ ಪಾವತಿಸಬೇಕಾಗಿದ್ದ 77,297 ರೂ. ಹಣವನ್ನು ಅಂದಿನ ಅತಿಥಿಗೃಹದ ವ್ಯವಸ್ಥಾಪಕರಾಗಿದ್ದ ವಿಶ್ವಾಸ್ ಅವರು ಜಮಾ ಮಾಡಿರುವುದರಿಂದ ಪೀಠೋಪಕರಣ ಹಾಗೂ ಇತರ ವಸ್ತುಗಳ ನಾಪತ್ತೆಯಾಗಿದ್ದ ಪ್ರಕರಣ ಇತ್ಯರ್ಥವಾದಂತಾಗಿದೆ. 2020ರ ಅಕ್ಟೋಬರ್ 2ರಿಂದ ನವೆಂಬರ್ 14ರವರೆಗೆ ಆಡಳಿತ ತರಬೇತಿ ಸಂಸ್ಥೆ ಅತಿಥಿಗೃಹದಲ್ಲಿ ಅಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ವಾಸ್ತವ್ಯ ಹೂಡಿದ್ದರು. ವಸತಿ ಖಾಲಿ ಮಾಡಿಸಿ ಅಧಿಕೃತ ನಿವಾಸಕ್ಕೆ ಸ್ಥಳಾಂತರಗೊಂಡ ನಂತರ ಅತಿಥಿಗೃಹದಲ್ಲಿದ್ದ ಕೆಲ ಪೀಠೋಪಕರಣಗಳು ಹಾಗೂ ಗೃಹೋಪಯೋಗಿ ವಸ್ತುಗಳು ಕಣ್ಮರೆಯಾಗಿರುವುದು ಕಂಡುಬಂದಿತ್ತು.

ಈ ಸಂಬಂಧ ಅಂದಿನ ಎಟಿಐ ಜಂಟಿ ನಿರ್ದೇಶಕರು ರೋಹಿಣಿ ಸಿಂಧೂರಿ ಅವರಿಗೆ ಪತ್ರ ಬರೆದು ವಸ್ತುಗಳನ್ನು ಹಿಂದಿರುಗಿಸುವಂತೆ ಕೋರಿಕೊಂಡಿದ್ದರಾದರೂ ಪ್ರತಿಕ್ರಿಯಿಸಿರಲಿಲ್ಲವಾದ್ದರಿಂದ ಸರ್ಕಾರಕ್ಕೆ ಪತ್ರ ಬರೆದಿದ್ದ ಜಂಟಿ ನಿರ್ದೇಶಕರು, ನಾಪತ್ತೆಯಾಗಿದ್ದ ವಸ್ತುಗಳ ಮೌಲ್ಯ 77,297 ರೂ. ಹಣವನ್ನು ಸಿಂಧೂರಿ ಅವರ ವೇತನದಿಂದ ಕಡಿತ ಮಾಡಿ ಸಂಸ್ಥೆ ಖಾತೆಗೆ ಜಮೆ ಮಾಡುವಂತೆ ಮನವಿ ಮಾಡಿದ್ದರು.

ಈ ಕುರಿತಂತೆ ನಡೆಸಿರುವ ತನಿಖಾ ಪ್ರಾಥಮಿಕ ವರದಿ ಸಲ್ಲಿಸುವಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಹಂತೇಶ ಅವರ ಸುತ್ತೋಲೆ ಹೊರಡಿಸಿದ್ದ ಹಿನ್ನೆಲೆಯಲ್ಲಿ ಲಿಖಿತ ಮಾಹಿತಿಯೊಂದಿಗೆ ಎಟಿಐ ಜಂಟಿ ನಿರ್ದೇಶಕರು ವರದಿ ನೀಡಿದ್ದರು.

ಸದರಿ ಹಣವನ್ನು ಮಾಜಿ ವ್ಯವಸ್ಥಾಪಕ ವಿಶ್ವಾಸ ಅವರು ರೋಹಿಣಿ ಸಿಂಧೂರಿ ಅವರು ಪಾವತಿಸಬೇಕಾದ ಹಣವನ್ನು ಸಂಸ್ಥೆ ಖಾತೆಗೆ ಜಮೆ ಮಾಡಿರುವ ಬಗ್ಗೆ ಜಂಟಿ ನಿರ್ದೇಶಕಿ ರೂಪಾ ಅವರು ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ.

ಜಗದೀಪ್ ಧನ್‌ಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ
ವಿಪಕ್ಷಗಳ ತೀವ್ರ ಗದ್ದಲ; ರಾಜ್ಯಸಭೆ ಕಲಾಪ ಗುರುವಾರಕ್ಕೆ ಮುಂದೂಡಿಕೆ



ನವದೆಹಲಿ,ಡಿ.11–ಸಭಾಪತಿ ಜಗದೀಪ್ ಧನ್‌ಕರ್ ಅವರನ್ನು ಪದಚ್ಯುತಗೊಳಿಸುವ ಅವಿಶ್ವಾಸ ನಿರ್ಣಯದ ಕುರಿತು ವಿರೋಧ ಪಕ್ಷಗಳು ತೀವ್ರ ಗದ್ದಲ ಸೃಷ್ಟಿಸಿದ ಹಿನ್ನೆಲೆಯಲ್ಲಿ ರಾಜ್ಯಸಭೆ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಗಿದೆ.

ಕಲಾಪ ಆರಂಭವಾಗುತ್ತಿದ್ದಂತೆಯೇ ಪ್ರತಿಪಕ್ಷ ಸದಸ್ಯರು ಸಭಾಪತಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಕಲಾಪಕ್ಕೆ ಅಡ್ಡಿಯುಂಟು ಮಾಡಿದರು. ಅವಿಶ್ವಾಸ ನಿರ್ಣಯ ಕುರಿತು ಚರ್ಚೆಗೆ ಒತ್ತಾಯಿಸಿದರು.

ಇದಕ್ಕೆ ಸಭಾಪತಿಗಳು ಒಪ್ಪದೆ, ಪಟ್ಟಿ ಮಾಡಲಾದ ವಿಷಯಗಳ ಕುರಿತು ಚರ್ಚೆಗೆ ಅನುಮತಿ ನೀಡಿದರು. ಇದಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಗದ್ದಲವನ್ನುಂಟು ಮಾಡಿದವು. ಬಳಿಕ ಸದನವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಲಾಯಿತು. ಮತ್ತೆ ಕಲಾಪ ಆರಂಭವಾದಾಗಲೂ ವಿಪಕ್ಷಗಳು ಗದ್ದಲವನ್ನು ಮುಂದುವರೆಸಿದವು. ಹೀಗಾಗಿ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

ಪ್ರತಿಪಕ್ಷಗಳ ವಿಚಾರದಲ್ಲಿ ಉದ್ದೇಶಪೂರ್ವಕವಾಗಿ ಪಕ್ಷಪಾತ ಹಾಗೂ ಪ್ರತಿಪಕ್ಷ ನಾಯಕರು ಮಾತನಾಡಲು ನೀಡುವ ಸಮಯದ ವಿಷಯದಲ್ಲಿ ತಾರತಮ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿ ರಾಜ್ಯಸಭೆ ಸಭಾಪತಿ ಜಗದೀಪ್ ಧನ್‌ಕರ್ ವಿರುದ್ಧ ಮಂಗಳವಾರ ವಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಿವೆ.

ಸೋಮವಾರ ನಡೆದ ಕಲಾಪದಲ್ಲಿ ಸಭಾಪತಿ ನಡೆದುಕೊಂಡ ರೀತಿಗೆ ಆಕ್ಷೇಪಿಸಿದ್ದ ಪ್ರತಿಪಕ್ಷ ನಾಯಕರು, ಪ್ರಸಕ್ತ ಅಧಿವೇಶನದಲ್ಲೇ ಅವಿಶ್ವಾಸ ನಿರ್ಣಯ ಮಂಡಿಸಿದ್ದು, ಸಭಾಪತಿ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯ ಪತ್ರಕ್ಕೆ 70 ಸಂಸದರು ಸಹಿ ಹಾಕಿದ್ದಾರೆ ಎನ್ನಲಾಗಿದೆ. ಕಾಂಗ್ರೆಸ್, ಆರ್‌ಜೆಡಿ, ಟಿಎಂಸಿ, ಸಿಪಿಐ, ಸಿಪಿಐ(ಎಂ), ಜೆಎಂಎಂ, ಎಎಪಿ, ಡಿಎಂಕೆ, ಮತ್ತು ಸಮಾಜವಾದಿ ಪಕ್ಷ ಸೇರಿ 60ಕ್ಕೂ ಹೆಚ್ಚು ವಿರೋಧ ಪಕ್ಷದ ಸಂಸದರು ಸಹಿ ಹಾಕಿದ್ದು, ಸಹಿ ಹಾಕಿದ ನೋಟಿಸ್ ಅನ್ನು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತಿಪಕ್ಷಗಳ ಪರವಾಗಿ ಕಾಂಗ್ರೆಸ್ ನಾಯಕರಾದ ಜೈರಾಮ್ ರಮೇಶ್ ಮತ್ತು ನಾಸೀರ್ ಹುಸೇನ್ ಅವರು ಸಲ್ಲಿಸಿದ್ದಾರೆ.

ಬಂಟರ ಸಂಘದ ವಾರ್ಷಿಕ ಕ್ರೀಡಾಕೂಟ ಸಂಪನ್ನ



ಬಂಟರ ವಾರ್ಷಿಕ ಕ್ರೀಡಾಕೂಟದಲ್ಲಿ ನಾನಾ ಆಟೋಟಗಳಲ್ಲಿ ಸದಸ್ಯರು ಪಾಲ್ಗೊಂಡಿದ್ದರು.

ಮೈಸೂರು,ಡಿ.11–ಮೈಸೂರಿನ ಬಂಟರ ಸಂಘದ ವತಿಯಿಂದ ಸದಸ್ಯರಲ್ಲಿ ಸೌಹಾರ್ದತೆ ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವ ಉದ್ದೇಶದೊಂದಿಗೆ ಎರಡು ದಿನಗಳ ಬಂಟರ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು.

ಬಂಟರ ಸಂಘದ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ, ಮ್ಯಾನೇಜಿಂಗ್ ಟ್ರಸ್ಟಿ ವೈ.ವಿ.ಸತೀಶ್ ಶೆಟ್ಟಿ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಬಂಟರ ಸಂಘದ ಕ್ರೀಡಾ ಸಮಿತಿ ಅಧ್ಯಕ್ಷ ಪಿ.ಸುರೇಶ್ ಆಳ್ವ, ಗೌರವ ಕಾರ್ಯದರ್ಶಿ ಎಂ.ನಂದ್ಯಪ್ಪ ಶೆಟ್ಟಿ, ಕ್ರೀಡಾಕೂಟದ ಮುಖ್ಯ ರೂವಾರಿ ಸುಧಾಕರ್ ರೈ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಮಾಜಿ ನಿರ್ದೇಶಕ ಡಾ.ಸಿ.ಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಂಟರ ಸಂಘದ ಉಪಾಧ್ಯಕ್ಷ ಕೆ.ಎಚ್.ಸರ್ವೋತ್ತಮ ಶೆಟ್ಟಿ, ಹರ್ಷ ಮೇಲಾಂಟ, ಕಾರ್ಯದರ್ಶಿ ಎಂ.ನಂದ್ಯಪ್ಪ ಶೆಟ್ಟಿ, ಕೋಶಾಧಿಕಾರಿ ಶ್ರೀಮತಿ ಅಲಕರಣಿ ಎಸ್.ಶೆಟ್ಟಿ, ಜಂಟಿ ಕಾರ್ಯದರ್ಶಿ ತುಕಾರಾಮ ರೈ ಮತ್ತಿತರರು ಉಪಸ್ಥಿತರಿದ್ದರು.

ಲಕ್ಷ ದೀಪೋತ್ಸವ ಪೋಸ್ಟರ್ ಬಿಡುಗಡೆ



ಮೈಸೂರಿನ ಶ್ರೀ ಕಲ್ಯಾಣ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಡಿ.15ರ ಭಾನುವಾರ ವಿಷ್ಣು ದೀಪೋತ್ಸವದ ಪ್ರಯುಕ್ತ ಲಕ್ಷ ದೀಪೋತ್ಸವ ಕಾರ್ಯಕ್ರಮದ ಪೋಸ್ಟರ್ ಅನ್ನು ದೇವಸ್ಥಾನದ ಸಂಸ್ಥಾಪಕ ಎಚ್.ಜಿ.ಗಿರಿಧರ್ ಬಿಡುಗಡೆ ಮಾಡಿದರು. ಬಿಜೆಪಿ ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಪ್ರಧಾನ ಕಾರ್ಯದರ್ಶಿ ಪದ್ಮನಾಥ್, ಅರ್ಚಕ ದರ್ಶನ್‌ಕುಮಾರ್, ನಿಕಿತ್, ಪ್ರಕಾಶ್ ಇನ್ನಿತರರಿದ್ದರು.

ಕಾಶ್ಮೀರಿ ವಿದ್ಯಾರ್ಥಿ ತಂಡದಿಂದ ಮೈಸೂರಿನ ಸಂಸ್ಕೃತಿ ಅಧ್ಯಯನ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ ‘ಕಾಶ್ಮೀರಿ ಯುವ ವಿನಿಮಯ’ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಗಲಿಕೆಗೆ ಅಧಿಕಾರಿಗಳು ಹಾಗೂ ಕಾಶ್ಮೀರಿ ಯುವ ವಿದ್ಯಾರ್ಥಿಗಳು ಮೌನಾಚರಿಸಿದರು.

ಮೈಸೂರು,ಡಿ.11(ಎಂಟಿವೈ)– ಕೇಂದ್ರ ಯುವ ವ್ಯವಹಾರಗಳ ಮತ್ತು ಕ್ರೀಡಾ ಸಚಿವಾಲಯ, ಗೃಹ ಸಚಿವಾಲಯ ಹಾಗೂ ನೆಹರು ಯುವ ಕೇಂದ್ರದ ವತಿಯಿಂದ ಆಯೋಜಿಸಿದ್ದ ‘ಯುವ ವಿನಿಮಯ’ ಕಾರ್ಯಕ್ರಮದಲ್ಲಿ ಕಾಶ್ಮೀರದಿಂದ 132 ವಿದ್ಯಾರ್ಥಿಗಳು ಆಗಮಿಸಿ, ಮೈಸೂರಿನ ಸಂಸ್ಕೃತಿಯ ಬಗ್ಗೆ ಮಾಹಿತಿ ಪಡೆಯುವ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ನಡೆಯಬೇಕಾಗಿದ್ದ ವರ್ಣ ರಂಜಿತ ಕಾರ್ಯಕ್ರಮ ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಅವರ ಅಗಲಿಕೆ ಹಿನ್ನೆಲೆಯಲ್ಲಿ ಔಪಚಾರಿಕವಾಗಿ ನೆರವೇರಿತು. ಎಸ್.ಎಂ.ಕೃಷ್ಣ ಅವರ ಆತ್ಮಕ್ಕೆ ಶಾಂತಿ ಕೋರಿ, ಮೌನಾಚರಿಸುವ ಮೂಲಕ ಸಭಾ ಕಾರ್ಯಕ್ರಮ ಮೊಟಕುಗೊಳಿಸಲಾಯಿತು. ಇದೇ ವೇಳೆ ಕಾಶ್ಮೀರಿ ವಿನಿಮಯ ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಚಾಲನೆ ನೀಡಿ ಮಾತನಾಡಿ, ಕಾಶ್ಮೀರಿ ಯುವ ಸಮುದಾಯವು ಸಾಂಸ್ಕೃತಿಕ ನಗರಿ ಮೈಸೂರಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಅರಿಯಲು ವಿನಿಮಯ ಕಾರ್ಯಕ್ರಮದ ಮೂಲಕ ಮೈಸೂರಿಗೆ ಆಗಮಿಸಿರುವುದು ಶ್ಲಾಘನೀಯ. ದೇಶದ ಅಭಿವೃದ್ಧಿಯಲ್ಲಿ ಯುವ ಜನತೆಯ ಕೊಡುಗೆ ಮುಖ್ಯ ಪಾತ್ರ ವಹಿಸುತ್ತದೆ. ಸೌಹಾರ್ದ ಪರಂಪರೆಯೊಂದಿಗೆ ಸಹಬಾಳ್ವೆ ವಾತಾವರಣ ಸೃಷ್ಟಿಸಲು ಯುವ ಜನರು ಪಣ ತೊಡಬೇಕು ಎಂದರು.

ಕರ್ನಾಟಕದಂತೆ ಕಾಶ್ಮೀರವೂ ಶ್ರೀಮಂತ ಪರಂಪರೆ, ಪ್ರಕೃತಿ ಸೌಂದರ್ಯ ಹೊಂದಿದೆ. ಭಾರತದ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕೆಂದರೆ ಎಲ್ಲ ರಾಜ್ಯಗಳ ಜನರೂ ಒಂದೇ ಎಂಬ ಭಾವವನ್ನು ಮೆರೆಯಬೇಕು. ತಮ್ಮ ವೈವಿಧ್ಯತೆಯನ್ನು ಪಸರಿಸಬೇಕಿದೆ. ಈ ಹಿನ್ನೆಲೆಯಲ್ಲಿಯೇ ಕೇಂದ್ರ ಸರ್ಕಾರ ಹಾಗೂ ನೆಹರೂ ಯುವ ಕೇಂದ್ರವು ದೇಶಾದ್ಯಂತ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೈಸೂರಿನ ಇತಿಹಾಸ, ಭಾಷೆ, ಸಂಸ್ಕೃತಿ ಅರಿಯುವುದರೊಂದಿಗೆ ಇಲ್ಲಿನ ತಿನಿಸು ಸವಿಯಬೇಕು. ಇಲ್ಲಿನ ಅನುಭವ, ಹಿರಿಮೆಯನ್ನು ನಿಮ್ಮ ರಾಜ್ಯದಲ್ಲೂ ಹಂಚಿಕೊಂಡು ಬಾಂಧವ್ಯ ಗಟ್ಟಿಗೊಳಿಸುವ ಕೆಲಸವನ್ನು ಯುವಕರು ಮಾಡಬೇಕು ಎಂದರು. ನೆಹರು ಯುವ ಕೇಂದ್ರದ ರಾಜ್ಯ ನಿರ್ದೇಶಕ ಅಶೋಕ ಕುಮಾರದಾಸ್, ನಿವೃತ್ತ ಅಧಿಕಾರಿ ಎಂ.ಎನ್.ನಟರಾಜ್, ಜಿಲ್ಲಾ ಯುವಜನ ಸಮನ್ವಯಾಧಿಕಾರಿ ಅಭಿಷೇಕ್ ಎಸ್.ಚವರೆ, ಮೊಂಟು ಪತಾರ್, ಇಮ್ರಾನ್ ಅಹಮದ್, ಸತೀಶ್ ಪಡೋಡೆ, ಸತ್ಯನಾರಾಯಣಗೌಡ ಇದ್ದರು.

ಅಗಲಿದ ಚೇತನಕ್ಕೆ ಭಾವಪೂರ್ಣ ನಮನ...



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಎಸ್.ಎಂ.ಕೃಷ್ಣ ಅವರಿಗೆ ಅಂತಿಮ ನಮನ.



ಡಿಸಿಎಂ ಡಿಕೆಶಿ ಅವರಿಂದ ಎಸ್.ಎಂ.ಕೃಷ್ಣ ಅವರಿಗೆ ಭಾವಪೂರ್ಣ ನಮನ.



ಯಡಿಯೂರಪ್ಪ ಅವರಿಂದ ಎಸ್.ಎಂ.ಕೃಷ್ಣ ಅವರಿಗೆ ಅಂತಿಮ ನಮನ.



ಎಸ್.ಎಂ.ಕೃಷ್ಣ ಅವರ ಅಂತಿಮ ದರ್ಶನ ಪಡೆದ ಕೇಂದ್ರ ಸಚಿವ ಕುಮಾರಸ್ವಾಮಿ.



ಎಸ್.ಎಂ.ಕೃಷ್ಣ ಅವರ ಅಂತಿಮ ದರ್ಶನ ಪಡೆದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ.

ಹರಿದು ಬಂದ ಜನಸಾಗರ, ಕಂಬನಿ ಮಿಡಿದ ಅಭಿಮಾನಿಗಳು...


ನಾಡನ್ನು ಅಗಲಿದ ಅಭಿವೃದ್ಧಿಯ ಹರಿಕಾರ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬೆಂಗಳೂರಿನ ಸದಾಶಿವ ನಗರ ತಮ್ಮ ನಿವಾಸದಲ್ಲಿ ನಿಧನರಾದ ಹಿನ್ನೆಲೆಯಲ್ಲಿ ಹುಟ್ಟೂರು ಸೋಮನಹಳ್ಳಿಗೆ ಪಾರ್ಥೀವ ಶರೀರವನ್ನು ತರುವ ಮಾರ್ಗಮಧ್ಯದ್ದಕ್ಕೂ (ಬೆಂಗಳೂರು, ಬಿಡದಿ, ಕೆಂಗೇರಿ, ರಾಮನಗರ, ಚನ್ನಪಟ್ಟಣ ಮತ್ತು ಮದ್ದೂರು) ರಸ್ತೆ ಬದಿಯಲ್ಲಿ ಜನಸಾಗರವೇ ಜಮಾಯಿಸಿ ಅಂತಿಮ ದರ್ಶನ ಪಡೆದದ್ದು ಕಂಡುಬಂದಿತು.

ಎಸ್.ಎಂ.ಕೃಷ್ಣ ನಿಧನದಿಂದ ರಾಜ್ಯಕ್ಕೆ ನಷ್ಟ: ಕೆಟಿಎಸ್

ಮಂಡ್ಯ: ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನಿಧನ ಕೇವಲ ಮಂಡ್ಯ ಜಿಲ್ಲೆ ಮಾತ್ರವಲ್ಲದೇ ರಾಜ್ಯಕ್ಕೆ ತುಂಬಲಾರದ ನಷ್ಟ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ವಿಷಾದ ವ್ಯಕ್ತಪಡಿಸಿದ್ದಾರೆ.


ಕೆ.ಟಿ.ಶ್ರೀಕಂಠೇಗೌಡ

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೃಷ್ಣ ಸಿಎಂ ಆಗಿ, ಕೇಂದ್ರ ಮಂತ್ರಿಯಾಗಿ, ರಾಜ್ಯಪಾಲರು ಆಗಿ ಮಾಡಿದ ಸಾಧನೆ ನಿಜಕ್ಕೂ ಅನನ್ಯ. ಇಂತಹ ಮೇರು ವ್ಯಕ್ತಿತ್ವದ ರಾಜಕಾರಣಿ ಮಂಡ್ಯ ಜಿಲ್ಲೆಯವರೆಂಬುದು ನಮಗಿನ್ನೂ ವಿಶೇಷ ಎಂದು ಬಣ್ಣಿಸಿದ್ದಾರೆ.

ಸಿಎಂ ಆಗಿದ್ದ ಅವಧಿಯಲ್ಲಿ ಬೆಂಗಳೂರನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಯಶಸ್ವಿನಿ, ಬಿಸಿಯೂಟ ಹೀಗೆ ಹಲವು ಯೋಜನೆಗಳನ್ನು ಜಾರಿಗೆ ತಂದರು. ಡಾ.ರಾಜ್ ಅಪಹರಣ, ಕಾವೇರಿ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳನ್ನು ಸಮರ್ಥವಾಗಿ ಬಗೆಹರಿಸಿದ ಕೀರ್ತಿ ಕೃಷ್ಣರಿಗೆ ಸಲ್ಲುತ್ತದೆ ಎಂದಿದ್ದಾರೆ.

ಮಂಡ್ಯ ಜಿಲ್ಲೆಗೂ ಅಪಾರ ಕೊಡುಗೆ ನೀಡಿರುವ ಅವರು, ಮದ್ದೂರಿನಲ್ಲಿ ಹಲವು ಕೈಗಾರಿಕಾ ಕಾರ್ಖಾನೆಗಳನ್ನು ತರುವ ಮೂಲಕ ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ನಾಂದಿ ಹಾಡಿದವರು. ರಸ್ತೆ ಅಗಲೀಕರಣ, ಮೂಲಸೌಕರ್ಯ ವೃದ್ಧಿ ಹೀಗೆ ಅನೇಕ ಕೆಲಸಗಳನ್ನು ಮಾಡುವ ಮೂಲಕ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿರುವ ನಾಯಕ ಇನ್ನು ನೆನಪು ಮಾತ್ರ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿರುವ ಎಸ್.ಎಂ.ಕೃಷ್ಣ ಕುಟುಂಬ...


ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿರುವ ಎಸ್.ಎಂ.ಕೃಷ್ಣ ಅವರ ಧರ್ಮಪತ್ನಿ ಪ್ರೇಮಾ ಕೃಷ್ಣ, ಎಸ್.ಎಂ.ಕೃಷ್ಣ ಅವರ ಪುತ್ರಿ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಪತ್ನಿ ಮತ್ತು ಪುತ್ರಿ

ಕಾಶ್ಮೀರಿ ವಿದ್ಯಾರ್ಥಿಗಳಿಗೆ ಅಗ್ನಿ ಅವಘಡ ಪಾಠ


ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡರೆ ಹೇಗೆ ನಿಯಂತ್ರಸಬೇಕು. ಮನೆ ಬೆಂಕಿ ಹೊತ್ತಿಕೊಂಡರೆ ನಿಯಂತ್ರಿಸುವುದೇಗೆ? ಅಗ್ನಿ ಅವಘಡ ನಡೆದಾಗ ಅಗ್ನಿ ಶಾಮಕ ದಳ ಹೇಗೆ ಸ್ಪಂದಿಸುತ್ತದೆ ಎಂಬ ಪಾಠವನ್ನು ಕಾಶ್ಮೀರಿ ವಿದ್ಯಾರ್ಥಿಗಳಿಗೆ ಬೋಧಿಸಲಾಯಿತು. ವಿವಿಧ ಜಿಲ್ಲಾಯ ಯುವಜನ ಸಮನ್ವಯ ಅಧಿಕಾರಿಗಳಾದ ಅಭಿಷೇಕ್ ಎಸ್. ಚವರೆ, ಮೊಂಟು ಪತಾರ್, ಸುಷ್ಮಾಗವಾಲಿ, ಸಂಜೀವ್, ಅಧಿಕಾರಿ ಇಮ್ರಾನ್ ಅಹಮದ್. ಸತೀಶ್ ಪಡೋಡೆ ಇನ್ನಿತರರು ಇದ್ದಾರೆ

ಒಂದನೇ ಪುಟದಿಂದ

ಪಂಚಭೂತಗಳಲ್ಲಿ ಲೀನ

ತೆರೆದ ವಾಹನದ ಜೊತೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪುತ್ರಿ ಐಶ್ವರ್ಯ, ಅಳಿಯ ಅಮರ್ತ್ಯ ಹೆಗಡೆ ಆಗಮಿಸಿದರೆ, ತೆರೆದ ವಾಹನವನ್ನು ಕೃಷ್ಣ ಪತ್ನಿ ಪ್ರೇಮಾ ಸೇರಿದಂತೆ ಪುತ್ರಿಯರಾದ ಮಾಳವಿಕ ಮತ್ತು ಶಾಂಭವಿ ಹಿಂಬಾಲಿಸಿದರು. ಮಂಡ್ಯ ಜಿಲ್ಲೆಯ ಗಡಿ ನಿಡಘಟ್ಟಕ್ಕೆ ಪಾರ್ಥಿವ ಶರೀರ ಆಗಮಿಸುತ್ತಿದ್ದಂತೆಯೇ ತವರಿನ ಸುಪುತ್ರನ ಪಾರ್ಥೀವ ಶರೀರವನ್ನು ಕಂಡು ಗ್ರಾಮಸ್ಥರು ಬಾವುಕರಾದರು. ನಿಡಘಟ್ಟ ಮಾರ್ಗವಾಗಿ, ಮದ್ದೂರು ತಾಲೂಕಿನ ಕೆಸ್ತೂರು, ಸೋಮನಹಳ್ಳಿ ಸೇರಿದಂತೆ ಹಲವೆಡೆ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಗ್ರಾಮಸ್ಥರು ಕೃಷ್ಣ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು. ಬಳಿಕ ಸೋಮನಹಳ್ಳಿಯ ಎಸ್.ಎಂ.ಕೃಷ್ಣ ಅವರ ಕಾಫಿ ಡೇ ಬಳಿ ಇರುವ ಮೈದಾನಕ್ಕೆ ಮಧ್ಯಾಹ್ನ 2.15ಕ್ಕೆ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಇಡಲಾಯಿತು.

ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ವಿಧಿವಿಧಾನ: ವೇದಬ್ರಹ್ಮ ಡಾ.ಭಾನುಪ್ರಕಾಶ ಶರ್ಮ ನೇತೃತ್ವದಲ್ಲಿ 15ಕ್ಕೂ ಹೆಚ್ಚು ಪುರೋಹಿತರ ತಂಡ ಅಂತ್ಯಕ್ರಿಯೆ ವಿಧಿ ವಿಧಾನಗಳನ್ನು ಹಿಂದೂ ಒಕ್ಕಲಿಗ ಸಂಪ್ರದಾಯದಂತೆ ನೆರವೇರಿಸಿದರು. 10 ಟನ್ ಶ್ರೀಗಂಧ ತುಂಡುಗಳು, ತುಪ್ಪ ಸೇರಿದಂತೆ ಹಲವು ವಸ್ತುಗಳನ್ನು ಅಂತ್ಯಕ್ರಿಯೆಗೆ ಬಳಸಿದರೆ, ಪುರೋಹಿತ ತಂಡದ ವೇದಘೋಷ ಅಂತ್ಯಸಂಸ್ಕಾರದ ಅಂತ್ಯದ ವರೆಗೂ ಮೊಳಗಿತು.

ಅಮರ್ತ್ಯರಿಂದ ಅಗ್ನಿಸ್ಪರ್ಶ: ಅಗ್ನಿ ಸ್ಪರ್ಶ ಮಾಡಲು ಸಮಯ ಮೀರುತ್ತಿರುವುದರಿಂದ ಭಾನುಪ್ರಕಾಶ್ ಹೊರತುಪಡಿಸಿ ಉಳಿದೆಲ್ಲರೂ ಚಿತೆಯ ಕಟ್ಟೆಯಿಂದ ಕೆಳಗಿಳಿಯುವಂತೆ ಡಿಕೆಶಿ ತಾಕೀತು ಮಾಡಿ ಎಲ್ಲರನ್ನು ಇಳಿಸಿದರು.

ನಂತರ ಎಸ್.ಎಂ.ಕೃಷ್ಣ ಮೊಮ್ಮಗ ಅಮರ್ತ್ಯ ಹೆಗಡೆ ಎಡ ಬುಜದ ಮೇಲೆ ಮೇಲೆ ಕೂಳು ಮಡಿಕೆ ಹೊತ್ತು ಬಲಗೈಯಲ್ಲಿ ಅಗ್ನಿ ಕಟ್ಟಿಗೆ ಹಿಡಿದು ಪಾರ್ಥೀವ ಶರೀರದ ಸುತ್ತ ಮೂರು ಸುತ್ತು ಪ್ರದಕ್ಷಣೆ ಹಾಕಿದರು. ಮಡಿಕೆ ಯಲ್ಲಿದ್ದ ಬೂದಿಯನ್ನು ಚಿತೆಯ ಮೇಲೆ ಸುರಿಸಿ, 5.23ಕ್ಕೆ ಅಗ್ನಿ ಸ್ಪರ್ಶ ಮಾಡಿದರು.

92 ವರ್ಷದವರೆಗೂ ಸುದೀರ್ಘ ಜೀವನ ನಡೆಸಿ, 40 ವರ್ಷಗಳ ಕಾಲ ನಿರಂತರ ರಾಜಕೀಯ ಸೇವೆ ಮಾಡಿ, ಶಾಸಕ, ಮಂತ್ರಿ, ಕೇಂದ್ರ ಮಂತ್ರಿ, ಮುಖ್ಯಮಂತ್ರಿ, ರಾಜ್ಯಪಾಲ ಹೀಗೆ ಹಲವು ಹುದ್ದೆಗಳನ್ನು ನಿಭಾಯಿಸಿ, ಬೆಂಗಳೂರಿನ ಐಟಿ ಜಗತ್ತಿಗೆ ಹೊಸ ಸ್ಪರ್ಶ ನೀಡಿ, ಅಭಿವೃದ್ಧಿಯ ಹರಿಕಾರರೆನಿಸಿದ್ದ ಪದ್ಮವಿಭೂಷಣ ಎಸ್.ಎಂ.ಕೃಷ್ಣ ಪಂಚಭೂತಗಳಲ್ಲಿ ಲೀನರಾಗಿ, ತಮ್ಮ ಹೆಜ್ಜೆಗುರುತನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಿ, ಇಹಲೋಕದ ಪಯಣ ಮುಗಿಸಿದರು.

ಸಕಲ ಸರ್ಕಾರಿ ಗೌರವ

ವಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಆದಿಚುಂಚನಗಿರಿ ಮಠಾಧೀಶರಾದ ನಿರ್ಮಲಾನಂದನಾಥ ಶ್ರೀಗಳು ಸೇರಿದಂತೆ 50ಕ್ಕೂ ಹೆಚ್ಚು ಗಣ್ಯರು ಹೂಗುಚ್ಛ ಅರ್ಪಿಸಿ ಗೌರವ ಸಲ್ಲಿಸಿದರು. ಅಂತ್ಯ ಸಂಸ್ಕಾರದ ವೇಳೆ ಸೋಮನಹಳ್ಳಿ ಗ್ರಾಮಸ್ಥರು, ಕೆಫೆ ಕಾಫಿ ಡೇ ಸಿಬ್ಬಂದಿ ಕಣ್ಣೀರು ಹಾಕುತ್ತಿದ್ದ ದೃಶ್ಯ ಕಂಡು ಬಂದರೆ, ಪತ್ನಿ ಪ್ರೇಮಾ, ಪುತ್ರಿಯರಾದ ಮಾಳವಿಕ, ಶಾಂಭವಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ ದೃಶ್ಯ ಮನ ಕಲಕುವಂತಿತ್ತು. ಜೊತೆಗೆ ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮಗುರುಗಳು ಅಂತಿಮ ದರ್ಶನ ಪಡೆದು, ಮೃತದೇಹದ ಮುಕ್ತಿಗೆ ಪ್ರಾರ್ಥಿಸಿದರು.

ಬನ್ನಂಗಾಡಿ ಗ್ರಾಪಂ ಅಧ್ಯಕ್ಷಗಾದಿ ಜೆಡಿಎಸ್ ತೆಕ್ಕೆಗೆ

ಬಲರಾಮ ಶೆಟ್ಟಿ ಅವಿರೋಧ ಆಯ್ಕೆ

ಪಾಂಡವಪುರ,ಡಿ.11– ತಾಲೂಕಿನ ಬನ್ನಂಗಾಡಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬಲರಾಮಶೆಟ್ಟಿ ಅವರು ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಅಧ್ಯಕ್ಷ ಪ್ರಭಾಕರ್ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಲರಾಮಶೆಟ್ಟಿ ಅವರು ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರು ನಾಮಪತ್ರವನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯೂ ಆದ ತಾಪಂ ಇಓ ಲೋಕೇಶ್ ಮೂರ್ತಿ ಗ್ರಾಪಂ ನೂತನ ಅಧ್ಯಕ್ಷರಾಗಿ ಬಲರಾಮಶೆಟ್ಟಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಘೋಷಿಸಿದರು.

ನೂತನ ಅಧ್ಯಕ್ಷ ಬಲರಾಮಶೆಟ್ಟಿ ಅವರನ್ನು ಎಲ್ಲಾ ಸದಸ್ಯರು ಮುಖಂಡರು ಅಭಿನಂದಿಸಿದರು. ಉಪಾಧ್ಯಕ್ಷೆ ಭಾಗ್ಯಮ್ಮ, ಮಾಜಿ ಅಧ್ಯಕ್ಷ ಪ್ರಭಾಕರ್, ಯೋಗೇಶ್, ಜಯಲಕ್ಷ್ಮಮ್ಮ ಮರಿಸ್ವಾಮೀಗೌಡ, ಸದಸ್ಯರಾದ ಮಂಜಯ್ಯ, ಸವಿತ ನಾಗಣ್ಣ, ರಾಮಶೆಟ್ಟಿ, ಶೃತಿ, ಪದ್ಮಮ್ಮ, ತಾಪಂ ಮಾಜಿ ಅಧ್ಯಕ್ಷ ಹುಚ್ಚೇಗೌಡ, ತಾಪಂ ಮಾಜಿ ಸದಸ್ಯ ಬಿ.ಪಿ. ಶ್ರೀನಿವಾಸ್, ಗ್ರಾಪಂ ಮಾಜಿ ಉಪಾಧ್ಯಕ್ಷ ಬಿ.ಎಸ್.ಶ್ರೀನಿವಾಸ್, ಬಿ.ಎಂ.ವೆಂಕಟೇಶ್, ಮಾಜಿ ಸದಸ್ಯ ಪ್ರಕಾಶ್, ಮುಖಂಡರಾದ ಕರೀಗೌಡ, ಪಟೇಲ್ ನಾಗಣ್ಣ, ನಿವೃತ್ತ ಶಿಕ್ಷಕ ಶಿವೇಗೌಡ, ಬಿಂಡಹಳ್ಳಿ ನಾಗಣ್ಣ, ಲಾರಿ ನಾಗೇಶ್, ಬಿ.ಕೆ.ರಾಮೇಗೌಡ, ಲೋಕೇಶ್, ವೈನ್ ಸ್ಟೋರ್ ಪ್ರಸನ, ಅಂಡಗಿ ಅಣ್ಣಯ್ಯ, ಮೆಡಿಕಲ್ ವಿಶ್ವ ಗಿರಿಯರಳ್ಳಿ ವಾಸು, ಸುಧಾಮಣಿಬಲರಾಮಶೆಟ್ಟಿ, ಶಿವಕುಮಾರ್, ಪಿಡಿಓ ಲಕ್ಷ್ಮೇಗೌಡ ಸೇರಿದಂತೆ ಹಲವು ಹಾಜರಿದ್ದರು.


ಪಾಂಡವಪುರ ತಾಲೂಕಿನ ಬನ್ನಂಗಾಡಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬಲರಾಮಶೆಟ್ಟಿ ಅವರನ್ನು ಎಲ್ಲಾ ಸದಸ್ಯರು, ಮುಖಂಡರು ಅಭಿನಂಧಿಸಿದರು.

ಸಂತೆ ಬಾಚನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮೋಹನ್ ಅಧ್ಯಕ್ಷ


ತಾಲೂಕಿನ ಸಂತೆಬಾಚಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಮೋಹನ್ ಅವರನ್ನು ಸಂಘದ ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ,ಡಿ.11– ತಾಲೂಕಿನ ಸಂತೆ ಬಾಚಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ.ಮೋಹನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷರಾಗಿದ್ದ ಹರೀಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿ.ಮೋಹನ್ ಹೊರತು ಬೇರೆ ಯಾರೂ ಸಹ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಎಚ್.ಬಿ.ಭರತ್ ಕುಮಾರ್ ಅವಿರೋಧ ಆಯ್ಕೆ ಘೋಷಣೆ ಮಾಡಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ನರಸಿಂಹೇಗೌಡ ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷರನ್ನು ಡಿ.ಪಿ.ಕೃಷ್ಣಕುಮಾರ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಹುಬ್ಬನಹಳ್ಳಿ ಕುಮಾರಸ್ವಾಮಿ, ಡಿ.ಪಿ. ಪರಮೇಶ್, ಸಂಘದ ಉಪಾಧ್ಯಕ್ಷ ಹೆಚ್.ಎಸ್.ಸುರೇಶ್, ನಿರ್ದೇಶಕರಾದ ಹರೀಶ್, ಸಣ್ಣಪ್ಪ, ಹೆಚ್.ಎಸ್.ಉದಯಕುಮಾರ್, ಎಸ್.ಹೆಚ್.ಕೃಷ್ಣ, ಹೆಚ್.ಎನ್.ಮಹದೇವ್, ಎಸ್.ಬಿ.ಚಂದ್ರಶೇಖರ್, ಸೋಮಯ್ಯ, ಸಂಘದ ಕಾರ್ಯದರ್ಶಿ ಎಸ್.ಎನ್.ನರಸಿಂಹೇಗೌಡ, ಗುಮಸ್ತ ರಶ್ಮಿಶ್ರೀ, ಅರವಿಂದ, ಮಹೇಶ್, ಗೆಳೆಯರ ಬಳಗದ ಅಧ್ಯಕ್ಷ ಗೌಡಜಯಕುಮಾರ್, ಉಪಾಧ್ಯಕ್ಷ ನಾಗೇಶ್, ರುಕ್ಕೇಶ್, ಗೊರವಿ ಗಣೇಶ್, ಸವಿತಾ ಸಮಾಜ ತಾಲೂಕು ಅಧ್ಯಕ್ಷ ಮಂಜುನಾಥ್, ಪರಮೇಶ್, ಪಚ್ಚಿ, ಕ್ರಾಸ್ ಮೋಗಣ್ಣ ಜಗದೀಶ್, ಸುರೇಶ್, ಗ್ರಾಪಂ ಸದಸ್ಯ ದಿನೇಶ್, ಲೋಕನಹಳ್ಳಿ ಪಚ್ಚಿ ಸಂತೇಬಾಚಹಳ್ಳಿ ಎಸ್.ಹೆಚ್.ಸುರೇಶ್, ಗೋಪಿ, ಪುಟ್ಟಿ ಲೋಕೇಶ್, ನಾಯಕನಹಳ್ಳಿ ಮಂಜುನಾಥ್, ಎಸ್.ಆರ್.ಮಂಜು, ಸೇರಿದಂತೆ ಸಂಘದ ವ್ಯಾಪ್ತಿಯ ಹಲವು ಮುಖಂಡರಿದ್ದರು.

ಬಿ.ಎಸ್.ರಮೇಶಗೆ ಪಿಎಚ್.ಡಿ



ಮೈಸೂರು, ಡಿ.11– ಡಾ.ಬಿ.ಸಣ್ಣಪ್ಪ ಅವರ ಮಾರ್ಗದರ್ಶನದಲ್ಲಿ ಬಿ.ಎಸ್.ರಮೇಶ ಅವರು ರೇಷ್ಮೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಮೈಸೂರು ವಿವಿ ಕುಲಸಚಿವರ ಪ್ರಕಟಣೆ ತಿಳಿಸಿದೆ.

ಡಿ.18 ರಂದು ಸುವರ್ಣ ಸೌಧದ ಎದುರು ಪ್ರತಿಭಟನೆ

ಭಾರತೀನಗರ.ಡಿ.11– ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹಾಸ್ಟೆಲ್ ಹಾಗೂ ವಸತಿ ಶಾಲಾ ಕಾಲೇಜುಗಳ ಹೊರಗುತ್ತಿಗೆ ಸಿಬ್ಬಂದಿಗಳು ಅನಿರ್ದಿಷ್ಟಾವಧಿ ಮುಷ್ಕರವನ್ನು ಹಮ್ಮಿಕೊಂಡಿದ್ದು ಇದರ ಅಂಗವಾಗಿ ಡಿ.18 ರಂದು ಬೆಳಗಾವಿ ಸುವರ್ಣ ಸೌಧದ ಎದುರು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಹನುಮೇಗೌಡ ತಿಳಿಸಿದರು.

ಭಾರತೀನಗರದ ಕೃಷಿಕೂಲಿಕಾರರ ಸಂಘದ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹಾಸ್ಟೆಲ್ ಹೊರಗುತ್ತಿಗೆ ನೌಕರರು ಕಳೆದ ಹತ್ತು ಹದಿನೈದು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು ಅವರಿಗೆ ಬೇಕಾಗಿರುವ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಹಾಗಾಗಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಸಮಿತಿಯ ಪರವಾಗಿ ಸುವರ್ಣಸೌಧಕ್ಕೆ ಡಿ.18 ರಂದು ಮುತ್ತಿಗೆ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.


ಭಾರತೀನಗರದಲ್ಲಿ ಬೆಳಗಾವಿ ಚಲೋ ಕಾರ್ಯಕ್ರಮಕ್ಕೆ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಹನುಮೇಗೌಡ ಚಾಲನೆ ನೀಡಿದರು.

ಇದೇ ವೇಳೆ ಹೊರಗುತ್ತಿಗೆ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ಜಿಲ್ಲಾಧ್ಯಕ್ಷ ಸಂತೋಷ್, ಜಿಲ್ಲಾ ಉಪಾಧ್ಯಕ್ಷ ನರಸಿಂಹ, ಸರೋಜಮ್ಮ, ಶೋಭಾ, ಸುನಂದಮ್ಮ, ಆಶಾರಾಣಿ ಸೇರಿದಂತೆ ಹಲವರಿದ್ದರು.

ಲೋಕೇಶ್‌ಗೆ ಪಿಎಚ್.ಡಿ. ಪದವಿ



ಮೈಸೂರು, ಡಿ.11– ಡಾ.ಎಚ್.ಆದಿತ್ಯಕುಮಾರಿ ಅವರ ಮಾರ್ಗದರ್ಶನದಲ್ಲಿ ಎಂ.ಲೋಕೇಶ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಇನ್‌ಫರ್ಮೇಷನ್ ಲಿಟ್ರಸಿ ಸ್ಕಿಲ್ಸ್ ಅಮಾಂಗ್ ಸ್ಟೂಡೆಂಟ್ಸ್ ಅಂಡ್ ಫ್ಯಾಕಲ್ಟಿ ಮೆಂಬರ್ಸ್ ಆಫ್ ಕಾನ್ಸ್ಟಿಟ್ಯುಯೆಂಟ್ ಕಾಲೇಜಸ್ ಇನ್ ಯೂನಿವರ್ಸಿಟೀಸ್ ಆಫ್ ಕರ್ನಾಟಕ : ಎ ಸ್ಟಡಿ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನರಸೀಪುರದಲ್ಲಿ ಅಹಿಂದ, ಶೋಷಿತರ ಸಂಘಟನೆಗೆ ಆದ್ಯತೆ

ತಿ.ನರಸೀಪುರ, ಡಿ.11– ತಾಲೂಕಿನಲ್ಲಿ ಅಹಿಂದ ವರ್ಗಗಳ ಹಾಗೂ ಶೋಷಿತ ಹಾಗೂ ಅವಕಾಶ ವಂಚಿತ ಯುವ ಸಮೂಹವನ್ನು ಪ್ರಬಲವಾಗಿ ಸಂಘಟನೆ ಮಾಡಲಾಗುವುದು ಎಂದು ರಾಷ್ಟ್ರೀಯ ಅಹಿಂದ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕನ್ನಾಯಕನಹಳ್ಳಿ ಕುಮಾರ್ ರಾಮೇಗೌಡ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ತಿ.ನರಸೀಪುರದಲ್ಲಿ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಸುನೀಲ್‌ಬೋಸ್ ಯುವ ಬ್ರಿಗೇಡ್ ಸಂಘಟನೆಯಡಿಯಲ್ಲಿ ಅಹಿಂದ ವರ್ಗಗಳನ್ನು ಒಂದೇ ವೇದಿಕೆಯಡಿ ತರುವ ಕೆಲಸ ಮಾಡಿದ್ದು, ಅದೇ ಮಾದರಿಯಲ್ಲಿ ಮುಂದಿನ ದಿನಗಳಲ್ಲಿ ತಿ.ನರಸೀಪುರ ಹಾಗೂ ವರುಣ ವಿಧಾನಸಭಾ ಕ್ಷೇತ್ರಗಳಲ್ಲಿ ಉತ್ತಮವಾಗಿ ಸಂಘಟನೆ ಮಾಡುವುದು ಎಂದರು.

ಮುಂದಿನ ಸ್ಥಳೀಯ ಚುನಾವಣೆಗಳಲ್ಲಿ ಯುವಕರಿಗೆ ಹೆಚ್ಚಿನ ಆದ್ಯತೆ ನೀಡುವುದು ನಮ್ಮ ಉದ್ದೇಶ ಎಂದು ತಿಳಿಸಿದ ಅವರು, ನಮ್ಮ ಸಂಘಟನೆಯ ರಾಜ್ಯ ಹಾಗೂ ಜಿಲ್ಲಾ ಅಧ್ಯಕ್ಷರೊಡನೆ ಚರ್ಚೆ ಮಾಡಿ ಎಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು. ಚಾಮರಾಜನಗರ ಲೋಕಸಭಾ ಸದಸ್ಯ ಸುನೀಲ್ ಬೋಸ್ ಹಾಗೂ ವಿಧಾನ ಪರಿಷತ್ ಸದಸ್ಯ ಯತೀಂದ್ರ ಅವರ ಮಾರ್ಗದರ್ಶನದಂತೆ ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ಹೇಳಿದರು. ಈ ವೇಳೆ ಅಹಿಂದ ರಾಷ್ಟ್ರೀಯ ಒಕ್ಕೂಟದ ತಿ.ನರಸೀಪುರ ತಾಲೂಕು ಘಟಕದ ಅಧ್ಯಕ್ಷ ಸೋಸಲೆ ದೇವರಾಜು, ಉಪಾಧ್ಯಕ್ಷ ಕೈಯಂಬಳ್ಳಿ ಲೋಹಿತ್, ಸಂಘಟನಾ ಕಾರ್ಯದರ್ಶಿ ಬೆನಕನಹಳ್ಳಿ ಅರುಣ್ ಇದ್ದರು.


ಸುದ್ದಿಗಾರರೊಂದಿಗೆ ಮಾತನಾಡುತ್ತಿರುವ ಅಹಿಂದ ಮುಖಂಡರು.

ಕೃಷ್ಣರಿಗೆ ಮರಣೋತ್ತರ 'ಕರ್ನಾಟಕ ರತ್ನ ಪುರಸ್ಕಾರ' ನೀಡಲು ಒತ್ತಾಯ

ಮೈಸೂರು, ಡಿ.11(ಎಸ್‌ಪಿಎನ್)– ನಾಡಿನ ಅಭಿವೃದ್ಧಿಗೆ ಮಾಜಿ ಮುಖ್ಯ



ಮಂತ್ರಿ ಎಸ್.ಎಂ.ಕೃಷ್ಣ ಅವರ ಕೊಡುಗೆ ಅಪಾರ. ಅವರಿಗೆ ರಾಜ್ಯ ಸರ್ಕಾರ ಮರಣೋತ್ತರ 'ಕರ್ನಾಟಕ ರತ್ನ ಪುರಸ್ಕಾರ' ನೀಡಿ ಗೌರವಿಸಬೇಕೆಂದು ಮೈಸೂರಿನ ವಿಜಯನಗರದ ಒಂದನೇ ಹಂತದಲ್ಲಿರುವ ರಾಜ್ಯ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಒತ್ತಾಯಿಸಲಾಯಿತು.

ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್.ಎಂ.ಕೃಷ್ಣರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಎಸ್.ಎಂ.ಕೃಷ್ಣ ಅವರು ಸಜ್ಜನ ರಾಜಕಾರಣಿ. ಬೆಂಗಳೂರನ್ನು ಐಟಿ ಹಬ್ ಮಾಡುವಲ್ಲಿ ಅವರ ಕೊಡುಗೆ ಅಪಾರ. ಅಲ್ಲದೆ, ಕೃಷ್ಣ ಅವರ ಡ್ರೆಸ್ಸಿಂಗ್ ಸೆನ್ಸ್ ಶಿಸ್ತುಬದ್ಧವಾಗಿತ್ತು. ಮಾತುಗಾರಿಕೆಯಲ್ಲಿ ಹಿಡಿತ ಹೊಂದಿದ್ದರು. ಈ ನಾಡಿನ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ. ಒಟ್ಟಿನಲ್ಲಿ ಎಸ್.ಎಂ.ಕೃಷ್ಣ ಒಕ್ಕಲಿಗ ಸಮುದಾಯ ಮಾಣಿಕ್ಯ ಎಂದು ಅಭಿಮಾನ ವ್ಯಕ್ತಪಡಿಸಿದರು.

ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಮಾತನಾಡಿ, ಎಸ್.ಎಂ.ಕೃಷ್ಣ ಅವರಿಗೆ ರಾಜಕೀಯದಲ್ಲಿ ಯಾರ ಮೇಲೂ ದ್ವೇಷ ಇರಲಿಲ್ಲ ಮತ್ತು ಅವರು ತಮಗೆ ಸಿಕ್ಕ ಹುದ್ದೆಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ ಅವರ ರಾಜಕೀಯ ಜೀವನ ಇಂದಿನ ಯುವ ರಾಜಕಾರಣಿಗಳಿಗೆ ಒಂದು ಸಂದೇಶ ಎಂದು ಬಣ್ಣಿಸಿದರು.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ) ಮಾತನಾಡಿ, ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಕಾವೇರಿ ನೀರಿನ ಗಲಾಟೆ, ವರನಟ ಡಾ.ರಾಜ್‌ಕುಮಾರ್, ಮಾಜಿ ಸಚಿವ ನಾಗಪ್ಪ ಅಪಹರಣದ ಜೊತೆಗೆ ನಿರಂತರ ಬರಗಾಲ ಆವರಿಸಿತ್ತು. ಈ ಎಲ್ಲವನ್ನು ಸರಿದೂಗಿಸಿಕೊಂಡು ಉತ್ತಮ ಆಡಳಿತ ನೀಡಿದ ಕೀರ್ತಿ ಕೃಷ್ಣ ಅವರಿಗೆ ಸಲ್ಲುತ್ತದೆ ಎಂದರು.

ಕರುನಾಡು ಸೇನೆ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಮುಖಂಡರಾದ ಡಾ.ಎಂ.ಬಿ.ಮಂಜೇಗೌಡ, ಶಿವಲಿಂಗಯ್ಯ, ಗೋವಿಂದೇಗೌಡ, ಲತಾ ರಂಗನಾಥ್, ರವಿ ರಾಜಕೀಯ, ಶೇಖರ್, ಮಂಜುಳಾ, ಲಕ್ಷ್ಮೀ, ಹೇಮಂತ್, ಭಾಗ್ಯಮ್ಮ, ಹೊಂಬೇಗೌಡ, ಮಂಜುನಾಥ್, ಹಾಸ್ಟೆಲ್ ವಿದ್ಯಾರ್ಥಿನಿಯರು ಹಾಜರಿದ್ದರು.

ಕೃಷ್ಣರ ಹೆಸರು ನಾಮಕರಣ ಮಾಡಿ...

ಎಸ್.ಎಂ.ಕೃಷ್ಣ ಅವರ ಕೊಡುಗೆಗಳನ್ನು ಪರಿಗಣಿಸಿ ಮೈಸೂರಿನ ಯಾವುದಾದರೊಂದು ವೃತ್ತ ಅಥವಾ ಮುಖ್ಯರಸ್ತೆಗೆ ಅವರ ಹೆಸರು ನಾಮಕರಣ ಮಾಡಬೇಕು. ಆ ಮೂಲಕ ಸ್ಥಳೀಯ ಆಡಳಿತ ಗೌರವ ಸೂಚಿಸಬೇಕೆಂಬ ಒತ್ತಾಯ ಕಾರ್ಯಕ್ರಮದಲ್ಲಿ ಕೇಳಿ ಬಂದಿತು.

ಯದುವೀರ್ ದಂಪತಿ ದ್ವಿತೀಯ ಪುತ್ರನಿಗೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ತೊಟ್ಟಿಲು ಶಾಸ್ತ್ರ

ಮೈಸೂರು, ಡಿ.11(ಎಂಟಿವೈ)– ರಾಜವಂಶಸ್ಥ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಎರಡನೇ ಪುತ್ರನಿಗೆ ಬುಧವಾರ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಶಾಸ್ತ್ರೋಕ್ತವಾಗಿ ತೊಟ್ಟಿಲು ಶಾಸ್ತ್ರ ನೆರವೇರಿಸಲಾಯಿತು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ದಂಪತಿಗೆ ಅಕ್ಟೋಬರ್ 11ರಂದು ಎರಡನೇ ಮಗು ಜನಿಸಿತ್ತು. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಮೈಸೂರು ಅರಮನೆಯಿಂದ ರಾಜವಂಶಸ್ಥರು ಚಾಮುಂಡಿಬೆಟ್ಟಕ್ಕೆ ಆಗಮಿಸಿ ತೊಟ್ಟಿಲು ಶಾಸ್ತ್ರ ನೆರವೇರಿಸಿದರು.

ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಸಮ್ಮುಖದಲ್ಲಿ ನಡೆದ ತೊಟ್ಟಿಲು ಶಾಸ್ತ್ರದಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್, ಮೊದಲ ಮಗ ಆದ್ಯವೀರ ಒಡೆಯರ್ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ತೊಟ್ಟಿಲು ಶಾಸ್ತ್ರ ನೆರವೇರಿಸಿದರು. ಅರಮನೆಯಿಂದ ತಂದಿದ್ದ ಬೆಳ್ಳಿ ತೊಟ್ಟಿಲನ್ನು ದೇವಾಲಯದ ಪ್ರಾಂಗಣದಲ್ಲಿರುವ ಮರಕ್ಕೆ ಕಟ್ಟಿ ಶಾಸ್ತ್ರೋಕ್ತವಾಗಿ ತೊಟ್ಟಿಲು ಶಾಸ್ತ್ರ ನಡೆಸಿಕೊಟ್ಟರು.



ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಅವರ ಸಮ್ಮುಖದಲ್ಲಿ ಬುಧವಾರ ಯದುವೀರ್ ಒಡೆಯರ್–ತ್ರಿಷಿಕಾ ಕುಮಾರಿ ಒಡೆಯರ್ ದಂಪತಿ ಎರಡನೇ ಪುತ್ರನಿಗೆ ತೊಟ್ಟಿಲು ಶಾಸ್ತ್ರ ನೆರವೇರಿಸಲಾಯಿತು.

ಬಳಿಕ ಯದುವಂಶದ ಕುಲದೇವತೆ ಚಾಮುಂಡೇಶ್ವರಿ ದೇವಿಗೆ ರಾಜ ವಂಶಸ್ಥರು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಯದುವೀರ್ ಮತ್ತು ಪುತ್ರ ಆದ್ಯವೀರ್ ಅವರು ಸಾಂಪ್ರದಾಯಿಕ ಉಡುಗೆಯಲ್ಲಿ ಪೂಜಾಕಾರ್ಯದಲ್ಲಿ ಭಾಗಿಯಾದರು. ದೇವಾಲಯದ ಆವರಣದಲ್ಲಿ ರಾಜವಂಶಸ್ಥರಿಂದ ನಡೆಯುತ್ತಿದ್ದ ತೊಟ್ಟಿಲು ಶಾಸ್ತ್ರವನ್ನು ದೇವಾಲಯಕ್ಕೆ ಬಂದಿದ್ದ ಭಕ್ತರು, ಪ್ರವಾಸಿಗರು ಕಣ್ತುಂಬಿಕೊಂಡರು.

ರಾಜವಂಶಸ್ಥರಿಗೆ ಜನಿಸಿದ ಮಕ್ಕಳಿಗೆ ತೊಟ್ಟಿಲು ಶಾಸ್ತ್ರವನ್ನು ಕುಲದೇವತೆ ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆಸುವ ಸಂಪ್ರದಾಯವಿದ್ದು, ಏಳು ವರ್ಷದ ಹಿಂದೆ ಮೊದಲ ಮಗ ಜನಿಸಿದಾಗಲೂ ತೊಟ್ಟಿಲು ಶಾಸ್ತ್ರವನ್ನು ಬೆಟ್ಟದ ದೇವಾಲಯದಲ್ಲಿ ನೆರವೇರಿಸಿದ್ದರು. ಇದೀಗ ಎರಡನೇ ಪುತ್ರನಿಗೂ ದೇವಾಲಯದಲ್ಲಿ ತೊಟ್ಟಿಲು ಶಾಸ್ತ್ರ ನೆರವೇರಿಸಿದರು.

ಶೀಘ್ರದಲ್ಲಿಯೇ ಎರಡನೇ ಪುತ್ರನ ನಾಮಕರಣ ಶಾಸ್ತ್ರವನ್ನು ನಡೆಸಲು ರಾಜವಂಶಸ್ಥರು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ.

ಕವನ ಸಂಕಲನಗಳ ಬಿಡುಗಡೆ, ಕವಿಗೋಷ್ಠಿ ನಾಳೆ

ಮೈಸೂರು,ಡಿ.11–ಕುಮಾರಿ ವಿ.ವಿ.ಭುವನ ಅವರ 'ಆಗಸದಿ ಹಾರುವ ಹಕ್ಕಿಗಳಿರಾ' ಹಾಗೂ ಕನ್ನಡ ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರ 'ಸತ್ತು ಬದುಕುವ ಸುಖ' ಕವನ ಸಂಕಲನಗಳ ಬಿಡುಗಡೆ ಹಾಗೂ ಕವಿಗೋಷ್ಠಿಯನ್ನು ಡಿ.13ರಂದು ಬೆಳಗ್ಗೆ 10.30ಕ್ಕೆ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಜಯಲಕ್ಷ್ಮಮ್ಮಣ್ಣಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಕನ್ನಡ ಸಂಘ ಮತ್ತು ಕವಿತಾ ಪ್ರಕಾಶನ ಸಹಯೋಗದಲ್ಲಿ ಸಮಾರಂಭ ಆಯೋಜಿಸಲಾಗಿದೆ. ಕೃತಿಗಳನ್ನು ಹಿರಿಯ ಲೇಖಕ ಡಾ.ಮೊರಬದ ಮಲ್ಲಿಕಾರ್ಜುನ ಬಿಡುಗಡೆಗೊಳಿಸಿ ಮಾತನಾಡುವರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ.ವಿಜಯಮ್ಮ ಅಧ್ಯಕ್ಷತೆ ವಹಿಸುವರು.

ಕುಮಾರಿ ವಿ.ವಿ.ಭುವನ ಹಾಗೂ ಡಾ.ಬಿ.ವಿ.ವಸಂತಕುಮಾರ್, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ದೇವಮ್ಮಣ್ಣಿ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸ್ನಾತಕೋತ್ತರ ಕನ್ನಡ ವಿಭಾಗದ ಸಂಯೋಜಕಿ ಡಾ.ಸುಂದರಿ ಉಪಸ್ಥಿತರಿರುವರು. ಕವಿಗೋಷ್ಠಿಯಲ್ಲಿ ಕೆ.ಎನ್.ಲಾವಣ್ಯಪ್ರಭಾ, ಸುಚಿತ್ರಾ ಹೆಗಡೆ, ರೂಪಶ್ರೀ, ಲಾವಣ್ಯಾ, ಅನ್ನಪೂರ್ಣ, ತನುಜಾ, ಸ್ಫೂರ್ತಿ, ಮಂಜುಳಾ, ರಕ್ಷಿತಾ, ಸಹನಾ, ಮಹಾಲಕ್ಷ್ಮಿ, ಲತಾಶ್ರೀ ವಿನೋದಾ ಭಾಗವಹಿಸುವರು.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಡಿ. 11–ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಡಿ.17ರಿಂದ 21ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಮೈಸೂರಿನ ಮಾನಸಿನಗರ (ಹೋಟೆಲ್ ಹರಿಗೋವಿಂದ ಹತ್ತಿರ) ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9480476825, 9483589825 ಸಂಪರ್ಕಿಸಬಹುದು.

ಡಿ.14ರಂದು ಕನ್ನಡ ರಾಜ್ಯೋತ್ಸವ

ಮೈಸೂರು,ಡಿ.11–ಅಕ್ಷ ಭಾರತ್ ಮಿಷನ್ ವತಿಯಿಂದ ಕುವೆಂಪುನಗರದ ಆಶಾದೀಪ ವಿಕಲಚೇತನರ ತರಬೇತಿ ಕೇಂದ್ರದಲ್ಲಿ ಡಿ.14ರಂದು ಸಂಜೆ 5.30 ಗಂಟೆಗೆ ಕನ್ನಡ ರಾಜ್ಯೋತ್ಸವ ಹಾಗೂ ವಿಶ್ವ ಅಂಗವಿಕಲರ ದಿನಾಚರಣೆ ಸಮಾರಂಭ ಏರ್ಪಡಿಸಲಾಗಿದೆ. ಸಮಾರಂಭವನ್ನು ಹಾವೇರಿಯ ಅಂಧ ಸಾಹಿತಿ ರಾಮಣ್ಣ ತಟ್ಟಿ ಉದ್ಘಾಟಿಸಲಿದ್ದು, ಹಾಸನದ ಆರೋಗ್ಯ ಇಲಾಖೆಯ ಅಂಧ ನೌಕರ ಹೆಚ್.ಕೆ. ನಾಗೇಶ್ ಅಧ್ಯಕ್ಷತೆ ವಹಿಸುವರು. ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಪ್ರಧಾನ ಭಾಷಣ ಮಾಡುವರು. ಅತಿಥಿಗಳಾಗಿ ಸಾಹಿತಿ ಸೀಪುತ್ರ ಜಿ.ಮೊಟಗೆ, ಆಶಾದೀಪ ವಿಕಲಚೇತನರ ತರಬೇತಿ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಗುರುಸ್ವಾಮಿ ಪಾಲ್ಗೊಳ್ಳುವರು.



ಡಾ.ಹೆಚ್.ಹನುಮಂತಪ್ಪ ಅವರ ಕೃತಿ ಲೋಕಾರ್ಪಣೆ ಸಮಾರಂಭ

ಮೈಸೂರು,ಡಿ.11–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಡಿ.15, ಬೆಳಗ್ಗೆ 11 ಗಂಟೆಗೆ ಚರ್ಮರೋಗ ತಜ್ಞವೈದ್ಯರತ್ನ ಡಾ.ಹೆಚ್.ಹನುಮಂತಪ್ಪ ಅವರ 'ಚರ್ಮದ ಕಾಯಿಲೆಗಳು ಮತ್ತು ಸುರಕ್ಷೆ' ಕೃತಿ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.



ಡಾ.ಹನುಮಂತಪ್ಪ

ವಿಧಾನಪರಿಷತ್ ಸದಸ್ಯ ವೈದ್ಯರತ್ನ ಡಾ.ಡಿ.ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಶ್ರಾಂತ ಡಿವೈಎಸ್ಪಿ ಹಾಗೂ ಸಾಹಿತಿ ಜೆ.ಬಿ.ರಂಗಸ್ವಾಮಿ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಶ್ರಾಂತ ನಿರ್ದೇಶಕ ಡಾ.ಜಿ.ಎಂ.ವಾಮದೇವ ಕೃತಿ ಕುರಿತು ಮಾತನಾಡಲಿದ್ದಾರೆ. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕರಾದ ಡಾ. ಎಂ.ಜಿ.ಆರ್. ಅರಸ್ ಗೌರವ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕೃತಿ ಲೇಖಕ ಹಾಗೂ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ವಿಶ್ರಾಂತ ಡೀನ್ ಮತ್ತು ನಿರ್ದೇಶಕ, ಚರ್ಮರೋಗ ತಜ್ಞ ವೈದ್ಯರತ್ನ ಡಾ.ಹೆಚ್.ಹನುಮಂತಪ್ಪ ಪ್ರತಿಭಾ ಪುರಸ್ಕಾರ ವಿತರಣೆ ಮಾಡಲಿದ್ದಾರೆ.

ಪಿಎಫ್ ಬಡ್ಡಿದರ ಶೇ.7.1ಕ್ಕೆ ನಿಗದಿ

ಮೈಸೂರು, ಡಿ.12(ಎಸ್‌ಪಿಎನ್)– ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ವಂತಿಕೆದಾರರ ಸಾಮಾನ್ಯ ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಶಿಲ್ಕಿನ ಮೇಲಿನ ಬಡ್ಡಿ ದರವನ್ನು ದಿನಾಂಕ: ಅ.1 ರಿಂದ ಡಿ.31ರ ಅವಧಿಗೆ ವಾರ್ಷಿಕ ಶೆ.7.1ಕ್ಕೆ ನಿಗಧಿಪಡಿಸಲಾಗಿದೆ ಎಂದು ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು) ಅಧೀನ ಕಾರ್ಯದರ್ಶಿ ನೇತ್ರಪ್ರಭಾ ಎಂ. ಧಾಯಪುಲೆ ಆದೇಶಿಸಿದ್ದಾರೆ.

ಮಹಿಳೆಗೆ ಆನ್‌ಲೈನ್ ಮೂಲಕ 15.89 ಲಕ್ಷ ವಂಚನೆ

ಮೈಸೂರು, ಡಿ.11(ಎಂಕೆ)– ಟೆಲಿಗ್ರಾಂ ಆ್ಯಪ್ ಮೂಲಕ ಕೆಲಸ ಪಡೆದ ರಾಜೀವ್‌ನಗರದ ಮಹಿಳೆಯೊಬ್ಬರು 15.89 ಲಕ್ಷ ರೂ ಕಳೆದುಕೊಂಡಿರುವ ಘಟನೆ ನಡೆದಿದೆ. ವಂಚಕರ ಮಾತು ಕೇಳಿ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಕಳೆದುಕೊಂಡಿದ್ದಾರೆ ಎಂದು ದೂರು ದಾಖಲಾಗಿದೆ. ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಚಿತ ಸಂಸ್ಕೃತ ಸಂಭಾಷಣಾ ಶಿಬಿರ

ಮೈಸೂರು,ಡಿ.11–ಮೈಸೂರಿನ ಚಿರಂತನ ಮನೆಯಲ್ಲಿ ಸಂಸ್ಕೃತ ಭಾರತೀ, ಕರ್ನಾಟಕ ಹಾಗೂ ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಸಹಯೋಗದಲ್ಲಿ ಡಿ.16ರಿಂದ 25ರವರೆಗೆ ಸಂಜೆ 5ರಿಂದ 7ರವರೆಗೆ ಉಚಿತವಾಗಿ ಸಂಸ್ಕೃತ ಸಂಭಾಷಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9448553797, 9886056177 ಸಂಪರ್ಕಿಸಿ.

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ 30ನೇ ವಾರ್ಷಿಕೋತ್ಸವ ಅಂಗವಾಗಿ ವಿವಿಧ ಸ್ಪರ್ಧೆಗಳು

ಮೈಸೂರು,ಡಿ.11–ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 30ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಸೊಸೈಟಿಯ ಸದಸ್ಯರ ಜೊತೆ ಸಂವಾದ ಹಾಗೂ ಅವರ ಮಕ್ಕಳಿಗೆ 8ರಿಂದ 16 ವರ್ಷದ ಸದಸ್ಯರ ಮಕ್ಕಳಿಗೆ ಭಗವದ್ಗೀತಾ ಪಠಣ ಶ್ಲೋಕ (ಯಾವುದಾದರೂ ಆರು ಶ್ಲೋಕಗಳು). ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಮಹಿಳೆ ಮತ್ತು ಪುರುಷ ಸದಸ್ಯರಿಗೆ ಜನಪದ, ಭಾವಗೀತೆ, ದೇವರ ನಾಮಗೀತೆ ಸ್ಪರ್ಧೆ ಹಾಗೂ ವಿವಿಧ ಕ್ರೀಡೆ ಸ್ಪರ್ಧೆಗಳು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ವಿದ್ಯಾಸಂಸ್ಥೆ ಆವರಣದಲ್ಲಿ ಡಿ.15ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿವೆ. ಸಂಘದ ಸದಸ್ಯರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಪ್ರಭಾರ ಕಾರ್ಯದರ್ಶಿ ಎನ್.ವೀಣಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 95911 70850 ಸಂಪರ್ಕಿಸಬಹುದು.

ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ

ಮೈಸೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ "Exploring Nature's Pharmacy Potential of Meditional and Aromatic plants and their conservation" ವಿಷಯ ಕುರಿತು ಜ.7ರಿಂದ 9ರವರೆಗೆ 3 ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಲ್ಲಿ ಆಯೋಜಿಸಿದೆ. ಸಮ್ಮೇಳನದಲ್ಲಿ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸ ನೀಡಲಿದ್ದಾರೆ. ಆಸಕ್ತರು https://forms.gle/JochVVLYyNBHKtdx7 ಮೂಲಕ ಡಿ.31ರೊಳಗೆ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ.ಸಂ: 9845258894, 9880405181, 9686449019

ನರಸಿಂಹರಾಜ ಒಡೆಯರ್ 11ನೇ ವರ್ಷದ ಸ್ಮರಣೆ



ಮೈಸೂರಿನ ಬಂಡೀಕೇರಿಯಲ್ಲಿ ಕಟ್ಟೆಬಳಗದಿಂದ ರಾಜವಂಶಸ್ಥ ದಿ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಭಾವಚಿತ್ರದ ಮುಂದೆ ಮೇಣದಬತ್ತಿ ಬೆಳಗಿ 11ನೇ ವರ್ಷದ ಸ್ಮರಣೆ ಮಾಡಲಾಯಿತು. ಈ ವೇಳೆ ಮುಖಂಡರಾದ ವಸ್ತಾದ್ ಬಾಲಾಜಿ ಚೆಟ್ಟಿ, ಸಿದ್ದರಾಜು(ಪೇಟ) ಇನ್ನಿತರರು ಉಪಸ್ಥಿತರಿದ್ದರು.

ಡಿ.15ರಂದು ವೇಣುವಾದನ

ಮೈಸೂರು,ಡಿ.11–ಮೈಸೂರಿನ ಪ್ರಕಾಶ್ ಪರ್ಫಾರ್ಮಿಂಗ್ ಟ್ರಸ್ಟ್ ವತಿಯಿಂದ ಡಿ.15ರಂದು ಬೆಳಗ್ಗೆ 11 ಗಂಟೆಗೆ ಶ್ರೀರಾಂಪುರದ 2ನೇ ಹಂತದ ನಾಯ್ಡು ಸ್ಟೋರ್ಸ್ ಹಿಂಭಾಗದ 33, ಸೂರ್ಯ ಲೇಔಟ್‌ನಲ್ಲಿ ವಿದ್ವಾನ್ ಎ.ವಿ.ಪ್ರಕಾಶ್‌ರವರ ಸ್ಮರಣಾರ್ಥ ಎ.ಪಿ.ಕೃಷ್ಣಪ್ರಸಾದ್ ಶಿಷ್ಯರಿಂದ ವೇಣುವಾದನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

2025ರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಹೊರತರಲಾದ 2025ರ ಕ್ಯಾಲೆಂಡರ್ ಅನ್ನು ಅಧ್ಯಕ್ಷೆ ಪಿ.ರಾಜೇಶ್ವರಿ ಬಿಡುಗಡೆ ಮಾಡಿದರು. ಉಪಾಧ್ಯಕ್ಷೆ ಪಿ.ಸವಿತಾ, ನಿರ್ದೇಶಕರಾದ ಎಸ್.ಬಿ.ಎಂ.ಮಂಜು, ರಾಜಕೀಯ ರವಿಕುಮಾರ್, ಜೆ.ಯೋಗೇಶ್, ಹೆಚ್.ಹರೀಶ್‌ಕುಮಾರ್, ಕೆ.ಉಮಾಶಂಕರ್, ಎಸ್ ಅರವಿಂದ, ಎ.ಮಂಚಪ್ಪ, ಎಸ್.ಟಿ. ವಿಭಾಗದ ನಿರ್ದೇಶಕ, ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಸಿ.ರೇವಣ್ಣ, ಎಸ್.ಆರ್.ರವಿಕುಮಾರ್, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಮಹಿಳಾ ಖೋ ಖೋ ತಂಡದ ಆಯ್ಕೆ ಪ್ರಕ್ರಿಯೆ

ಮೈಸೂರು,ಡಿ.11–ಡಿ.20ರಿಂದ 22ರವರೆಗೆ ತುಮಕೂರು ಜಿಲ್ಲಾ ಅಮೆಚೂರು ಖೋ ಖೋ ಸಂಸ್ಥೆ ವತಿಯಿಂದ ನಡೆಯಲಿರುವ ಅಂತರ ಜಿಲ್ಲಾ ಮಹಿಳೆಯರ ಖೋ ಖೋ ಪಂದ್ಯಾವಳಿಗೆ ಮೈಸೂರು ಜಿಲ್ಲಾ ಅಮೆಚೂರು ಖೋ ಖೋ ಸಂಸ್ಥೆ ವತಿಯಿಂದ ಜಿಲ್ಲಾ ಮಹಿಳಾ ಖೋ ಖೋ ತಂಡದ ಆಯ್ಕೆ ಪ್ರಕ್ರಿಯೆಯನ್ನು ಡಿ.15ರಂದು ಬೆಳಗ್ಗೆ 10 ಗಂಟೆಗೆ ಹರಿವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆಸಲಾಗುತ್ತಿದೆ. ಆಸಕ್ತಿವುಳ್ಳ ಕ್ರೀಡಾಪಟುಗಳು ಮೈಸೂರು ಜಿಲ್ಲೆಯವರೇ ಆಗಿದ್ದು ಮತ್ತು ಹಾಜರಾಗುವಾಗ ಒರಿಜಿನಲ್ ಆಧಾರ್ ಕಾರ್ಡ್ ತರಬೇಕಿದೆ. ವಿವರಗಳಿಗೆ ಮೊ. 8123087678, 8095444156, 9844145183 ಸಂಪರ್ಕಿಸುವುದು.



ಡಾ.ತುಳಸೀರಾಮಚಂದ್ರರಿಗೆ ನೂಪುರ ಶ್ರೀ ಪ್ರಶಸ್ತಿ ಪ್ರದಾನ

ಮೈಸೂರು,ಡಿ.11(ಎಸ್‌ಪಿಎನ್)–ಹಿರಿಯ ಕಲಾವಿದೆ ಡಾ.ತುಳಸೀ ರಾಮಚಂದ್ರ ಅವರಿಗೆ ಈ ಸಾಲಿನ 'ನೂಪುರ ಶ್ರೀ' ಪಶಸ್ತಿಯನ್ನು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಪ್ರಕಟಣಾ ವಿಭಾಗದ ಪ್ರೊ.ಮೊರಬದ ಮಲ್ಲಿಕಾರ್ಜುನ ಪ್ರಧಾನ ಮಾಡಿದರು.

ಮೈಸೂರು ಕುವೆಂಪುನಗರ ಗಾನಭಾರತಿ ರಮಾಗೋವಿಂದ ಕಲಾವೇದಿಕೆಯಲ್ಲಿ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಸಹಯೋಗದೊಂದಿಗೆ ಶ್ರೀಮತಿ ಕೆ.ವನಜಾಕ್ಷಮ್ಮ ಸಂಸ್ಮರಣಾರ್ಥ 29ನೇ ಆರಾಧನಾ–2024ರ ಸಮಾರಂಭದಲ್ಲಿ ಹಿರಿಯ ಕಲಾವಿದೆ ಡಾ.ತುಳಸೀ ರಾಮಚಂದ್ರ ಅವರಿಗೆ 'ನೂಪುರ' ಶ್ರೀ ಪ್ರಶಸ್ತಿ ವಿತರಿಸಿ ಮಾತನಾಡಿದರು.

ಮಹಿಳೆಯರು ತಮ್ಮ ತಾಯ್ತನವನ್ನು ಮಕ್ಕಳಿಗೆ ಸಂಪೂರ್ಣ ಧಾರೆಯೆರೆದು ಪೋಷಿಸಿದಂತೆ ತಂದೆಯೂ ತಮ್ಮಲ್ಲಿ ತಾಯ್ತನದ ಗುಣಗಳನ್ನು ಬೆಳೆಸಿಕೊಂಡು ಮಕ್ಕಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಅಲ್ಲದೆ, ಮಕ್ಕಳ ಸಾಧನೆಗೆ ಮನೆಯಲ್ಲಿ ಪೂರಕವಾದ ವಾತಾವರಣ ನಿರ್ಮಿಸಬೇಕು ಎಂದು ಸಲಹೆ ನೀಡಿದರು.





ಶ್ರೀಮತಿ ಕೆ.ವನಜಾಕ್ಷಮ್ಮ ಸಂಸ್ಮರಣಾರ್ಥ 29ನೇ ಆರಾಧನಾ–2024ರ ಸಮಾರಂಭದಲ್ಲಿ ಹಿರಿಯ ಕಲಾವಿದೆ ಡಾ.ತುಳಸೀ ರಾಮಚಂದ್ರ ಅವರಿಗೆ 'ನೂಪುರ' ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬಲಚಿತ್ರದಲ್ಲಿ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್‌ನ ವಿದ್ಯಾರ್ಥಿನಿಯರಿಂದ ಸಮೂಹ ನೃತ್ಯ

ನೂಪುರ ಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ತುಳಸೀ ರಾಮಚಂದ್ರ, ಕೆ.ವನಜಾಕ್ಷಮ್ಮ ಅವರು ಭರತನಾಟ್ಯದಲ್ಲಿ ಉತ್ತಮ ಸಾಧನೆ ಮಾಡಿದ್ದರು. ಅವರೂ ಸಹ ನನ್ನ ನೃತ್ಯ ಕಲಿಕೆಗೆ ಮಾರ್ಗದರ್ಶನ ಮಾಡಿದ್ದಾರೆ. ಅಲ್ಲದೆ, ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿ ರಾವ್ ಅವರು, ಹಲವು ವರ್ಷಗಳಿಂದ ಬಲ್ಲವರಾಗಿದ್ದು, ಸಂಗೀತ, ನೃತ್ಯ, ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಅಲ್ಲಿದೆ ಅನೇಕ ಸಂಘ–ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಾಯಿ ವನಜಾಕ್ಷಮ್ಮ ಸ್ಮರಣಾರ್ಥ ನೂಪುರ ಶ್ರೀ ಪ್ರಶಸ್ತಿ ನೀಡಿ ಗೌರವಿಸಿರುವುದು ಸಂತೋಷ ಸಂಗತಿ ಎಂದರು.

ಈ ವೇಳೆ ಖ್ಯಾತ ವೈಯಲಿನ್ ವಾದಕ ಡಾ.ಮಂಜುನಾಥ್, ವಿದ್ವಾನ್ ವಿಶ್ವದೀಪ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಂತರ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್‌ನ ವಿದ್ಯಾರ್ಥಿನಿಯರಿಂದ ಸಮೂಹ ನೃತ್ಯ ಎಲ್ಲರ ಗಮನ ಸೆಳೆಯಿತು. ನಟುವಾಂಗ ಮತ್ತು ಹಾಡುಗಾರಿಕೆಯಲ್ಲಿ ಪ್ರೊ.ಕೆ.ರಾಮಮೂರ್ತಿರಾವ್, ಎಂ.ಆರ್.ಹನುಮಂತರಾಜು ಮೃದಂಗ, ಎಚ್.ಎಸ್.ತಾಂಡವ ಮೂರ್ತಿ ವೈಲಿನ್ ನುಡಿಸಿ ಮೆಚ್ಚುಗೆಗಳಿಸಿದರು.

ದೇಶ - ವಿದೇಶ


ಹಿಂದೂಗಳ ಮೇಲಿನ ದಾಳಿ ಒಪ್ಪಿಕೊಂಡ ಬಾಂಗ್ಲಾ ಸರ್ಕಾರ; 88 ಪ್ರಕರಣ ದಾಖಲು, 70 ಮಂದಿ ಬಂಧನ

ಢಾಕಾ: ಆಗಸ್ಟ್‌ನಲ್ಲಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ನಿರ್ಗಮನದ ನಂತರ ಬಾಂಗ್ಲಾದೇಶವು ಅಲ್ಪಸಂಖ್ಯಾತರನ್ನು, ಮುಖ್ಯವಾಗಿ ಹಿಂದೂಗಳನ್ನು ಗುರಿಯಾಗಿಸಿಕೊಂಡು 88 ಕೋಮು ಹಿಂಸಾಚಾರದ ಪ್ರಕರಣಗಳನ್ನು ಅಲ್ಲಿನ ಹಂಗಾಮಿ ಸರ್ಕಾರ ದೃಢಪಡಿಸಿದೆ.

ಹಂಗಾಮಿ ಸರ್ಕಾರದ ಮುಖ್ಯಸ್ಥ ಮುಹಮ್ಮದ್ ಯೂನಸ್ ಅವರ ಪತ್ರಿಕಾ ಕಾರ್ಯದರ್ಶಿ ಶಫೀಕುಲ್ ಆಲಂ ಅಂಕಿ–ಅಂಶಗಳನ್ನು ಬಹಿರಂಗಪಡಿಸಿದ್ದು, ದಾಳಿಗೆ ಸಂಬಂಧಿಸಿದಂತೆ 70 ವ್ಯಕ್ತಿಗಳನ್ನು ಬಂಧಿಸಲಾಗಿದೆ ಎಂದು ಹೇಳಿರುವುದನ್ನು ಸುದ್ದಿ ಸಂಸ್ಥೆ ವರದಿ ಮಾಡಿದೆ. ಆಗಸ್ಟ್ 5 ಮತ್ತು ಅಕ್ಟೋಬರ್ 22ರ ನಡುವೆ 88 ಪ್ರಕರಣಗಳು ದಾಖಲಾಗಿವೆ ಎಂದು ಆಲಂ ಸುದ್ದಿಗಾರರಿಗೆ ತಿಳಿಸಿದ್ದಾರೆ. ಈಶಾನ್ಯದಲ್ಲಿರುವ ಸುನಮ್‌ಗಂಜ್ ಮತ್ತು ಮಧ್ಯ ಬಾಂಗ್ಲಾದೇಶದ ಗಾಜಿಪುರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಘಟನೆಗಳು ಸಂಭವಿಸಿವೆ ಎಂದು ವರದಿಯಾಗಿದೆ. ಸುನಮ್‌ಗಂಜ್, ಗಾಜಿಪುರ ಮತ್ತು ಇತರ ಪ್ರದೇಶಗಳಲ್ಲಿ ಹಿಂಸಾಚಾರದ ಹೊಸ ಘಟನೆಗಳು ವರದಿಯಾಗಿರುವುದರಿಂದ ಪ್ರಕರಣಗಳು ಮತ್ತು ಬಂಧನಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಆಲಂ ಹೇಳಿದ್ದಾರೆ.

ಡಿ.14ರೊಳಗೆ ಮಹಾರಾಷ್ಟ್ರ ಸಂಪುಟ ವಿಸ್ತರಣೆ; ಫಡ್ನವಿಸ್‌ರಿಂದ ಮೋದಿ ಭೇಟಿ

ಮುಂಬೈ: ದೇವೇಂದ್ರ ಫಡ್ನವೀಸ್ ನೇತೃತ್ವದ ಮಹಾರಾಷ್ಟ್ರ ಸರ್ಕಾರದ ಸಂಪುಟ ವಿಸ್ತರಣೆ ಡಿ.14ರೊಳಗೆ ನಡೆಯಲಿದೆ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.




ಫಡ್ನವಿಸ್ ಅವರು ಬುಧವಾರ ದೆಹಲಿಗೆ ತೆರಳಿದ್ದು, ಇದು ಸೌಜನ್ಯದ ಭೇಟಿಯಾಗಿದೆ. ಫಡ್ನವಿಸ್ ಅವರು ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಉಪಾಧ್ಯಕ್ಷ ಜಗದೀಪ್ ಧನಖರ್ ಅವರನ್ನು ಭೇಟಿಯಾಗಿದ್ದಾರೆ ಎಂದು ಸಿಎಂ ಕಚೇರಿ ತಿಳಿಸಿದೆ.

ಶಿವಸೇನಾ ನಾಯಕ ಮತ್ತು ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ರಾಷ್ಟ್ರ ರಾಜಧಾನಿಗೆ ಪ್ರಯಾಣಿಸಿಲ್ಲ ಎಂದು ಅವರ ಕಚೇರಿ ತಿಳಿಸಿದೆ. ಪಿಟಿಐ ಜೊತೆ ಮಾತನಾಡಿದ ಬಿಜೆಪಿ ನಾಯಕರೊಬ್ಬರು, ಶಿವಸೇನೆಗೆ ಗೃಹ ಖಾತೆ ಸಿಗುವುದಿಲ್ಲ ಮತ್ತು ಕಂದಾಯ ಖಾತೆಯನ್ನು ಹಂಚಿಕೆ ಮಾಡುವ ಸಾಧ್ಯತೆಯೂ ಇಲ್ಲ ಎಂದು ಹೇಳಿದ್ದಾರೆ.

ಮೂರು ಪಕ್ಷಗಳು(ಮಹಾಯುತಿ ಮಿತ್ರಪಕ್ಷಗಳಾದ ಬಿಜೆಪಿ, ಶಿವಸೇನೆ ಮತ್ತು ಎನ್‌ಸಿಪಿ) ಸರ್ಕಾರದಲ್ಲಿ ಭಾಗಿಯಾಗಿರುವುದರಿಂದ ಮಾತುಕತೆ ವಿಳಂಬವಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.


ಸಿರಿಯಾ ಮಧ್ಯಂತರ ಸರ್ಕಾರದ ಚುಕ್ಕಾಣಿ ಹಿಡಿದ ಮುಹಮ್ಮದ್ ಅಲ್ ಬಶೀರ್

ಸಿರಿಯಾ: ಸಿರಿಯಾ ಅಧ್ಯಕ್ಷ ಬಶರ್ ಅಲ್ ಅಸ್ಸಾದ್‌ರನ್ನು ಅಧಿಕಾರದಿಂದ ಪದಚ್ಯುತಗೊಳಿಸಿ, ಸಿರಿಯಾದ ನಿಯಂತ್ರಣವನ್ನು ಕೈಗೆತ್ತಿಕೊಂಡ ಬಂಡುಕೋರರು ಮಾರ್ಚ್ 1ರ ತನಕ ದೇಶವನ್ನು ಮುನ್ನಡೆಸಲು ಒಂದು ಮಧ್ಯಂತರ ಸರ್ಕಾರ ಮತ್ತು ಅದರ ಮುಖ್ಯಸ್ಥರನ್ನು ನೇಮಿಸಿದ್ದಾರೆ. ಮುಹಮ್ಮದ್ ಅಲ್ ಬಶೀರ್ ಈ ಸ್ಥಾನಕ್ಕೆ ನೇಮಕಗೊಂಡಿದ್ದಾರೆ. ಸಿರಿಯಾದ ಸರ್ಕಾರಿ ದೂರದರ್ಶನದ ಟೆಲಿಗ್ರಾಂ ಖಾತೆಯಲ್ಲಿ ಮೊಹಮ್ಮದ್ ಅಲ್ ಬಶೀರ್ ಅವರ ಹೇಳಿಕೆ ಪ್ರಕಟವಾಗಿದ್ದು, ಅವರ ನೇಮಕಾತಿಯನ್ನು ಖಚಿತಪಡಿಸಿದೆ. ಜನರಲ್ ಕಮಾಂಡ್ ನಮಗೆ ಮಾರ್ಚ್ 1ರ ತನಕ ದೇಶದ ಪರಿವರ್ತನಾ ಸರ್ಕಾರದ ನೇತೃತ್ವ ವಹಿಸುವ ಜವಾಬ್ದಾರಿ ನೀಡಿದೆ ಎಂದು ಬಶೀರ್ ಹೇಳಿದ್ದಾರೆ. ಸರ್ಕಾರಿ ಮಾಧ್ಯಮ ಬಶೀರ್ ಅವರನ್ನು ನೂತನ ಸಿರಿಯನ್ ಪ್ರಧಾನಿ ಎಂದೇ ಪರಿಚಯಿಸಿದೆ. ಈ ತಾತ್ಕಾಲಿಕ ಸರ್ಕಾರ ಈ ಬದಲಾವಣೆಯ ಅವಧಿಯಲ್ಲಿ ದೇಶವನ್ನು ನಿರ್ವಹಿಸುವಲ್ಲಿ ನೆರವಾಗಲಿದೆ. ಸಿರಿಯಾದ ವಿರೋಧ ಪಕ್ಷಗಳಲ್ಲಿ ಪ್ರಮುಖ ವ್ಯಕ್ತಿಯಾಗಿರುವ ಮುಹಮ್ಮದ್ ಅಲ್ ಬಶೀರ್ ಈಗ ಅಧಿಕೃತವಾಗಿ ಸಿರಿಯಾದ ಪರಿವರ್ತನಾ ಸರ್ಕಾರದ ಚುಕ್ಕಾಣಿ ಹಿಡಿಯಲು ಆಯ್ಕೆಯಾಗಿದ್ದಾರೆ.



ಕಲಬೆರಕೆ ನಂದಿನಿ ಹಾಲಿನ ಪೌಡರ್ ಮಾರಾಟ, ವ್ಯಕ್ತಿಯ ಬಂಧನ


ಮುಶೀರಾಬಾದ್: ಹೈದರಾಬಾದ್‌ನ ಮುಶೀರಾಬಾದ್‌ನ ಒಂದು ಗೋದಾಮಿನ ಮೇಲೆ ದಾಳಿ ನಡೆಸಿದ ಪೊಲೀಸರು ಕಲಬೆರಕೆ ಅಥವಾ ಅವಧಿ ಮೀರಿದ ನಂದಿನಿ ಹಾಲಿನ ಪೌಡರ್ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಬಂಧಿಸಿದ್ದಾರೆ.



ಮುಶೀರಾಬಾದ್ ಪೊಲೀಸರೊಂದಿಗೆ ಕೇಂದ್ರ ವಲಯದ ಕಾರ್ಯಪಡೆ ತಂಡ ಈ ದಾಳಿ ನಡೆಸಿದ್ದು, 330 ಕೆಜಿ ಹಾಲಿನ ಪುಡಿಯ ಬ್ಯಾಗ್‌ಗಳು ಮತ್ತು 450 ಕೆಜಿ ಹಾಲಿನ ಪುಡಿಯ ಪ್ಯಾಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತನನ್ನು ಚಿತ್ತಬೋಯಿನ ದಾಮೋದರ್ ಯಾದವ್ ಎಂದು ಗುರುತಿಸಲಾಗಿದೆ. ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಕ್ಷೀರ ಭಾಗ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ ನಂದಿನಿ ಹಾಲಿನ ಪುಡಿ ಪೂರೈಸಲಾಗುತ್ತಿದೆ. ಇದನ್ನು ಮಾರಾಟ ಮಾಡುವಂತಿಲ್ಲ. ಆದರೆ ಯೋಗ್ಯವಲ್ಲದ ಅವಧಿ ಮೀರಿದ ನಂದಿನಿ ಹಾಲಿನ ಪೌಡರ್‌ನ್ನು ಅಕ್ರಮವಾಗಿ ಸಾಗಿಸಿ, ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ. ದಾಮೋದರ್ ಬಳಕೆಗೆ ಯೋಗ್ಯವಲ್ಲದ ಪೌಡರ್‌ನ್ನು ಹೆಚ್ಚಿನ ಬೆಲೆಗೆ ಅಗತ್ಯವಿರುವ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ. ಆತನನ್ನು ಈ ಹಿಂದೆ ಒಂದೆರಡು ಬಾರಿ ಬಂಧಿಸಲಾಗಿತ್ತು.

1974ರ ಒಪ್ಪಂದದ ಉಲ್ಲಂಘನೆ: ಇಸ್ರೇಲ್‌ಗೆ ವಿಶ್ವಸಂಸ್ಥೆ ಎಚ್ಚರಿಕೆ

ಜಿನೀವಾ: ಸಿರಿಯಾ ಮೇಲಿನ ಇಸ್ರೇಲ್ ವಾಯುದಾಳಿಯನ್ನು ತೀವ್ರವಾಗಿ ಖಂಡಿಸಿರುವ ವಿಶ್ವಸಂಸ್ಥೆ ಇದು 1974ರ ಒಪ್ಪಂದದ ಗಂಭೀರ ಉಲ್ಲಂಘನೆ ಎಂದು ಎಚ್ಚರಿಕೆ ನೀಡಿದೆ. ಇಸ್ರೇಲ್ ಸೇನೆ ಸಿರಿಯಾದ ಸೇನಾ ನೆಲೆಗಳನ್ನು ಹೊಡೆದುರುಳಿಸಿದ್ದು, ಈ ಕುರಿತು ವಿಶ್ವಸಂಸ್ಥೆಯ ಸಿರಿಯಾ ವಿಶೇಷ ರಾಯಭಾರಿ ಗೈರ್ ಪೆಡರ್ಸನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕೂಡಲೇ ಇಸ್ರೇಲ್ ತನ್ನ ಸಿರಿಯನ್ ಭೂಪ್ರದೇಶದಲ್ಲಿ ಆಕ್ರಮಣವನ್ನು ನಿಲ್ಲಿಸುವ ಅಗತ್ಯವಿದೆ ಎಂದು ಎಚ್ಚರಿಸಿದ್ದಾರೆ. ಜಿನೀವಾದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ನಾರ್ವೆ ಮೂಲದ ಗೈರ್ ಪೆಡರ್ಸನ್, ಇಸ್ರೇಲ್ ಸೇನೆಯ ಕ್ರಮಗಳು ಇಸ್ರೇಲ್ ಮತ್ತು ಸಿರಿಯಾ ನಡುವಿನ 1974ರ ಒಪ್ಪಂದದ ಉಲ್ಲಂಘನೆಯಾಗಿದೆ. ನಾನು ಇಸ್ರೇಲಿಗಳೊಂದಿಗೆ ಸಂಪರ್ಕದಲ್ಲಿಲ್ಲ. ಆದರೆ ಸಹಜವಾಗಿ, ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆ, ಗೋಲನ್ ಹೈಟ್ಸ್‌ನಲ್ಲಿರುವ ಶಾಂತಿಪಾಲಕರು ಇಸ್ರೇಲಿಗಳೊಂದಿಗೆ ದೈನಂದಿನ ಸಂಪರ್ಕದಲ್ಲಿದ್ದಾರೆ. ನ್ಯೂಯಾರ್ಕ್‌ನ ಸಂದೇಶವು ಒಂದೇ ಆಗಿರುತ್ತದೆ. ನಾವು ನೋಡುತ್ತಿರುವುದು 1974ರಿಂದ ಒಪ್ಪಂದದ ಉಲ್ಲಂಘನೆಯಾಗಿದೆ. ಆದ್ದರಿಂದ ನಾವು ನಿಸ್ಸಂಶಯವಾಗಿ, ನ್ಯೂಯಾರ್ಕ್‌ನಲ್ಲಿರುವ ನಮ್ಮ ಸಹೋದ್ಯೋಗಿಗಳೊಂದಿಗೆ, ಮುಂಬರುವ ದಿನಗಳಲ್ಲಿ ಸಂಪರ್ಕ ಸಾಧಿಸುತ್ತಾರೆ ಎಂದಿದ್ದಾರೆ.



ಇಂದು ಅರ್ಧದಿನ ಕೊಡಗು ಬಂದ್

• ವಿವಿಧ ಸಂಘ-ಸಂಸ್ಥೆಗಳ ಬೆಂಬಲ • ಕೊಡಗು ಸರ್ವಜನಾಂಗಗಳ ಒಕ್ಕೂಟ ಮಾಹಿತಿ

ಮಡಿಕೇರಿ, ಡಿ.11–ವೀರ ಸೇನಾನಿಗಳಾದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶ ಹರಿಬಿಟ್ಟ ಆರೋಪಿಯನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಒತ್ತಾಯಿಸಿ ಡಿ.12ರಂದು ಸಾಂಕೇತಿಕವಾಗಿ ಅರ್ಧದಿನ 'ಕೊಡಗು ಬಂದ್'ಗೆ ಕೊಡಗು ಸರ್ವಜನಾಂಗಗಳ ಒಕ್ಕೂಟ ಕರೆ ನೀಡಿದೆ.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೊಡಗು ಸರ್ವಜನಾಂಗಗಳ ಒಕ್ಕೂಟ ಸಂಚಾಲಕ ಹಾಗೂ ಪೊನ್ನಂಪೇಟೆ ಕೊಡವ ಸಮಾಜದ ಮಾಜಿ ಅಧ್ಯಕ್ಷ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ, ಜಿಲ್ಲೆಯ 21 ಜನಾಂಗಗಳ ಮುಖಂಡರ ಸಭೆ ನಡೆಸಿ ಫೀ.ಮಾ.ಕಾರ್ಯಪ್ಪ, ಜನರಲ್ ತಿಮ್ಮಯ್ಯ ಅವರ ಬಗ್ಗೆ ಅವಹೇಳನ ಮಾಡಿರುವ ಕ್ರಮವನ್ನು ಒಕ್ಕೊರಲಿನಿಂದ ಖಂಡಿಸಲಾಗಿದೆ. ಇಂತಹ ಸಮಾಜಘಾತಕ ಕೃತ್ಯಗಳಿಗೆ ಕಡಿವಾಣ ಹಾಕುವ ಸಲುವಾಗಿ ಮತ್ತು ಕೃತ್ಯ ಎಸಗಿದ ವಿದ್ಯಾಧರ್‌ನನ್ನು ಜಿಲ್ಲೆಯಿಂದ 6 ತಿಂಗಳು ಗಡಿಪಾರು ಮಾಡುವಂತೆ ಒತ್ತಾಯಿಸಿ ಗುರುವಾರ ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಸಾಂಕೇತಿಕವಾಗಿ ಕೊಡಗು ಬಂದ್‌ಗೆ ನಿರ್ಧರಿಸಲಾಗಿದೆ ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಕೊಡಗು ಸರ್ವಜನಾಂಗಗಳ ಒಕ್ಕೂಟ ಸಂಚಾಲಕ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ ಮಾತನಾಡಿದರು.

ಬಂದ್‌ಗೆ ಹತ್ತಾರು ಸಂಘ–ಸಂಸ್ಥೆಗಳು ಬೆಂಬಲ ಸೂಚಿಸಿವೆ. ಸರ್ಕಾರ ಕೂಡ ಆ ದಿನ ಜಿಲ್ಲೆಯ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಬೇಕೆಂದು ಒತ್ತಾಯಿಸಿದರು.

ಹಿಂದೆ ಇಂತಹ ಘಟನೆಗಳು ನಡೆದ ತಕ್ಷಣ ಕಠಿಣ ಕ್ರಮ ಕೈಗೊಂಡಿದ್ದರೆ, ಇಂತಹ ಕೃತ್ಯಗಳು ಮರುಕಳಿಸುತ್ತಿರಲಿಲ್ಲ ಎಂದರು.

ಜಿಲ್ಲೆಯಲ್ಲಿ ಕಳೆದ 8–9 ವರ್ಷಗಳಿಂದ ಜಾತಿ, ಜನಾಂಗಗಳ ನಡುವೆ ಸಂಘರ್ಷ ಮೂಡಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಇಂತಹ ಸಮಾಜಘಾತುಕ ಶಕ್ತಿಗಳ ವಿರುದ್ಧ ಜಿಲ್ಲೆಯ ಎಲ್ಲಾ ಜನಾಂಗಗಳು ಒಂದಾಗಿ ನಿಲ್ಲುವ ಸಂದೇಶ ನೀಡುವ ಸಲುವಾಗಿ ಕೊಡಗು ಸರ್ವಜನಾಂಗಗಳ ಒಕ್ಕೂಟವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದರು.

ಚೇಂಬರ್ ಆಫ್ ಕಾಮರ್ಸ್ ಜಿಲ್ಲಾಧ್ಯಕ್ಷ ನಾಗೇಂದ್ರ ಪ್ರಸಾದ್ ಮಾತನಾಡಿ, ಕೊಡಗು ಬಂದ್‌ಗೆ ಬೆಂಬಲ ಸೂಚಿಸಲಾಗುವುದು. ಎಲ್ಲಾ ವರ್ತಕರು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡುವ ಮೂಲಕ ವೀರಸೇನಾನಿಗಳ ಬಗ್ಗೆ ಅವಹೇಳನ ಖಂಡಿಸುವುದಾಗಿ ತಿಳಿಸಿದರು.

ಕೊಡಗಿನ ಜನರಿಗೆ ಅವಮಾನ: ಆಟೋ ಮಾಲೀಕರ ಮತ್ತು ಚಾಲಕರ ಸಂಘದ ಜಿಲ್ಲಾಧ್ಯಕ್ಷ ಮೇದಪ್ಪ ಮಾತನಾಡಿ, ಸ್ವಯಂ ಪ್ರೇರಿತವಾಗಿ ಕೊಡಗು ಬಂದ್‌ಗೆ ಬೆಂಬಲ ನೀಡುವುದಾಗಿ ಹೇಳಿದರು.

ಕೊಡಗು ದೇಶಕ್ಕೆ ಮಾದರಿ: ಜಿಲ್ಲಾ ಹೋಟೆಲ್ ಮತ್ತು ರೆಸಾರ್ಟ್ ಅಸೋಷಿಯೇಶನ್ ಉಪಾಧ್ಯಕ್ಷ ಜಹೀರ್ ಮಾತನಾಡಿ, ಪಂಜಾಬ್ ಹೊರತುಪಡಿಸಿದರೆ ಪುಟ್ಟ ಜಿಲ್ಲೆ ಕೊಡಗು ಸಹಸ್ರಾರು ಸಂಖ್ಯೆಯ ಸೈನಿಕರನ್ನು ದೇಶ ಸೇವೆಗೆ ಕೊಡುಗೆಯಾಗಿ ನೀಡಿದೆ. ಆ ಮೂಲಕ ಇಡೀ ದೇಶಕ್ಕೆ ಕೊಡಗು ಮಾದರಿಯಾಗಿದೆ ಎಂದರು.

ಬಂಟರ ಸಂಘದ ಜಿಲ್ಲಾಧ್ಯಕ್ಷ ಜಗದೀಶ್ ರೈ ಮಾತನಾಡಿ, ಕೆ.ಎಂ.ಕಾರ್ಯಪ್ಪ, ಕೆ.ಎಸ್.ತಿಮ್ಮಯ್ಯ ಅವರನ್ನು ಇಡೀ ದೇಶವೇ ಕೊಂಡಾಡುತ್ತದೆ. ಅವರಿಗೆ ಅಪಮಾನ ಮಾಡಿರುವುದು ತೀವ್ರ ಖಂಡನೀಯ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಸರ್ವಜನಾಂಗಗಳ ಒಕ್ಕೂಟ ಸದಸ್ಯ ಮಲ್ಲಮಾಡ ಪ್ರಭು ಪೂಣಚ್ಚ ಉಪಸ್ಥಿತರಿದ್ದರು.

ಬ್ಯಾಂಕಿನ 8 ಲಕ್ಷ ರೂ. ದುರುಪಯೋಗ: ಸಹ ವ್ಯವಸ್ಥಾಪಕ ಬಂಧನ

ಸಿದ್ದಾಪುರ, ಡಿ.11–ಯೂನಿಯನ್ ಬ್ಯಾಂಕ್‌ನ ವಾಲ್ನೂರು ಶಾಖೆಯಲ್ಲಿ ಹಣ ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಸಹವ್ಯವಸ್ಥಾಪಕ ಆಶೀಶ್ ಗ್ಯಾಂಗ್ವಾರ್‌ನನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯೂನಿಯನ್ ಬ್ಯಾಂಕ್‌ನ ವಾಲ್ನೂರು ಶಾಖೆ ವ್ಯವಸ್ಥಾಪಕ ಸುಭಾಷ್ ತರಬೇತಿಗೆಂದು ಬೆಂಗಳೂರಿಗೆ ತೆರಳಿದ್ದರು. ಈ ಸಂದರ್ಭ ಎಟಿಎಂ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಸಹವ್ಯವಸ್ಥಾಪಕ ಆಶೀಶ್ ಗ್ಯಾಂಗ್ವಾರ್, ತನ್ನ ಬಳಿ ಇದ್ದ ಎಟಿಎಂ ಕೀ ಉಪಯೋಗಿಸಿಕೊಂಡು 8,46,200 ರೂ. ಅನ್ನು ದುರುಪಯೋಗಪಡಿಸಿಕೊಂಡಿದ್ದರು.

ತರಬೇತಿ ಮುಗಿಸಿಕೊಂಡ ಬಂದ ವ್ಯವಸ್ಥಾಪಕ ಸುಭಾಷ್ ಪರಿಶೀಲಿಸಿದಾಗ ಎಟಿಎಂ ಹಣದಲ್ಲಿ ವ್ಯತ್ಯಾಸ ಕಂಡುಬಂದಿದೆ. ನಂತರ ಸಿಸಿ ಟಿವಿ ಪರಿಶೀಲಿಸಿದಾಗ ದೃಶ್ಯಗಳು ಡಿಲೀಟ್ ಆಗಿರುವುದು ಪತ್ತೆಯಾಗಿದೆ. ಬಳಿಕ ಸಿಬ್ಬಂದಿಯನ್ನು ವಿಚಾರಿಸಿದಾಗ ಸಹವ್ಯವಸ್ಥಾಪಕ ಆಶೀಶ್ ಗ್ಯಾಂಗ್ವಾರ್ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾನೆ. ಬಳಿಕ ಈತನ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ದೂರಿನನ್ವಯ ಉತ್ತರಪ್ರದೇಶ ಮೂಲದ ಆರೋಪಿ ಆಶೀಶ್ ಗ್ಯಾಂಗ್ವಾರ್‌ನನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ಆಶೀಶ್ ಗ್ಯಾಂಗ್ವಾರ್

ಮೊಬೈಲ್ ವಿಚಾರವಾಗಿ ಜಗಳವಾಡಿ ಮನೆ ಬಿಟ್ಟು ತೆರಳಿದ್ದ

ಯುವತಿ ಶವ ಕಾವೇರಿ ನದಿಯಲ್ಲಿ ಪತ್ತೆ

ಮಡಿಕೇರಿ: ಮೊಬೈಲ್ ವಿಚಾರಕ್ಕೆ ಸಹೋದರನೊಂದಿಗೆ ಜಗಳವಾಡಿ ಮನೆ ಬಿಟ್ಟು ತೆರಳಿದ್ದ ಯುವತಿಯ ಶವ ಎರಡು ದಿನಗಳ ನಂತರ ಕಾವೇರಿ ನದಿಯಲ್ಲಿ ಪತ್ತೆಯಾಗಿದೆ.

ಕುಶಾಲನಗರದ ಆದಿಶಂಕರಾಚಾರ್ಯ ಬಡಾವಣೆ ನಿವಾಸಿ ರಣಜಿತ್ ಸಿಂಗ್ ಅವರ ದ್ವಿತೀಯ ಪುತ್ರಿ ಭಾವನಾ (19) ಮೃತಪಟ್ಟ ಯುವತಿ. ಈಕೆ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಎಸ್ಸೆಸ್ಸೆಲ್ಸಿ ಮುಗಿಸಿ ಮನೆಯಲ್ಲಿದ್ದ ಈಕೆ ಬಿಡುವಿನ ವೇಳೆ ರಥಬೀದಿಯಲ್ಲಿರುವ ತಂದೆಯ ಫ್ಯಾನ್ಸಿಸ್ಟೋರ್‌ಗೆ ತೆರಳಿ ತಂದೆಗೆ ನೆರವಾಗುತ್ತಿದ್ದಳು. ಆದರೆ, ಡಿ.8ರಂದು ಮೊಬೈಲ್ ವಿಚಾರವಾಗಿ ಭಾವನಾ ಹಾಗೂ ಆಕೆಯ ತಮ್ಮ ಮಹಿಪಾಲ್ ನಡುವೆ ಅಂಗಡಿಯಲ್ಲಿ ಜಗಳವಾಗಿದೆ. ನಾಳೆ ಬರುವುದಾಗಿ ತಿಳಿಸಿ, ಅಂಗಡಿಯಿಂದ ತೆರಳಿದ್ದ ಈಕೆ ಮನೆಗೆ ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಭಾವನಾ ಕಾಣೆಯಾಗಿರುವುದಾಗಿ ತಂದೆ ರಣಜಿತ್ ಸಿಂಗ್ ಕುಶಾಲನಗರ ಪಟ್ಟಣ ಠಾಣೆಗೆ ದೂರು ನೀಡಿದ್ದರು.

ಪೊಲೀಸರು ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಅಯ್ಯಪ್ಪಸ್ವಾಮಿ ದೇವಾಲಯ ಕಡೆ ಈಕೆ ತೆರಳಿರುವುದು ಕಂಡುಬಂದಿದೆ. ಬುಧವಾರ ಅಗ್ನಿಶಾಮಕ ದಳ ಸಿಬ್ಬಂದಿಯೊಂದಿಗೆ ಕಾವೇರಿ ನದಿಯಲ್ಲಿ ಪರಿಶೀಲಿಸಿದಾಗ ಅಯ್ಯಪ್ಪಸ್ವಾಮಿ ದೇವಾಲಯ ಮುಂದಿನ ದಂಡಿನಪೇಟೆ ಭಾಗದಲ್ಲಿ ಶವ ದೊರೆತಿದೆ. ಭಾವನಾ ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಕುಶಾಲನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಭಾವನಾ

ಕಾಡಾನೆ ದಾಳಿ: ಕಾರ್ಮಿಕನಿಗೆ ಗಂಭೀರ ಗಾಯ

*ಮತ್ತೋರ್ವ ಕಾರ್ಮಿಕ ಪಾರು*ಗಾಯಗೊಂಡ ಮಂಜು ಆಸ್ಪತ್ರೆಗೆ ದಾಖಲು

ಸಿದ್ದಾಪುರ, ಡಿ.11–ಕಾಫಿ ತೋಟದ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕನ ಮೇಲೆ ಕಾಡಾನೆ ದಾಳಿ ನಡೆಸಿ, ಗಂಭೀರ ಗಾಯಗೊಳಿಸಿರುವ ಘಟನೆ ಪಾಲಿಬೆಟ್ಟ ಮೂಕಾ ಕಾಫಿ ತೋಟದಲ್ಲಿ ಬುಧವಾರ ನಡೆದಿದೆ.

ಕಾಡಾನೆ ದಾಳಿಯಿಂದ ಗಾಯಗೊಂಡ ಪಾಲಿಬೆಟ್ಟದ ಕಾರ್ಮಿಕ ಮಂಜು (42) ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈತ ಸ್ನೇಹಿತನೊಂದಿಗೆ ಕಾಫಿ ತೋಟದ ಕೆಲಸಕ್ಕೆ ತೆರಳಿದ್ದರು. ಈ ವೇಳೆ ಕಾಫಿ ತೋಟದೊಳಗಿದ್ದ ಆನೆ ಹಿಂಬದಿಯಿಂದ ಏಕಾಏಕಿ ದಾಳಿ ಮಾಡಿ, ದಂತದಿಂದ ಚುಚ್ಚಿ ಗಾಯಗೊಳಿಸಿ ಕಾಫಿ ತೋಟದೊಳಗೆ ಸುಳಿದೆ. ಜೊತೆಯಲಿದ್ದ ಮತ್ತೋರ್ವ ಕಾರ್ಮಿಕ ಆನೆ ದಾಳಿಯಿಂದ ಪಾರಾಗಿದ್ದಾನೆ.

ತಕ್ಷಣ ಉಳಿದ ಕಾರ್ಮಿಕರು ಗಾಯಗೊಂಡ ಮಂಜುನನ್ನು ಅಮ್ಮತ್ತಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ದಾಳಿ ನಂತರ ಕಾಫಿ ತೋಟದಿಂದ ಮುಖ್ಯ ರಸ್ತೆಗೆ ಬಂದ ಕಾಡಾನೆ ಬೈಕ್ ಸವಾರನ ಮೇಲೆ ದಾಳಿಗೆ ಯತ್ನಿಸಿದೆ. ಆದರೆ, ಸವಾರ ಪಾರಾಗಿದ್ದಾನೆ. ಕೆಲ ದಿನಗಳಿಂದ ಕಾಡಾನೆಯೊಂದು ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬೀಡುಬಿಟ್ಟು, ಕೃಷಿ ಫಸಲು ನಾಶಗೊಳಿಸಿ, ಕಾರ್ಮಿಕರು ಹಾಗೂ ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿದೆ.



ಕಾರ್ಮಿಕ ಮಂಜುಗೆ ಕಾಡಾನೆ ದಂತದಿಂದ ಚುಚ್ಚಿ ಗಾಯಗೊಳಿಸಿರುವುದು.

ಗಾಯಾಳು ಮಂಜುವಿನ ಆರೋಗ್ಯ ವಿಚಾರಿಸಿದ ಎಸಿಎಫ್ ಗೋಪಾಲ್, ಆರ್‌ಎಫ್‌ಓ ಗಂಗಾಧರ್, ಚಿಕಿತ್ಸಾ ಸಂಪೂರ್ಣ ವೆಚ್ಚವನ್ನು ಇಲಾಖೆಯಿಂದ ಬರಿಸಲಾಗುವುದು ಎಂದು ತಿಳಿಸಿದ್ದಾರೆ. ಕಾಡಾನೆ ಹಾಡಹಗಲೇ ರಾಜಾರೋಷವಾಗಿ ಕಾಣಿಸಿಕೊಂಡು ವಾಹನ ಸವಾರರು ಸೇರಿದಂತೆ ಕಾರ್ಮಿಕರ ಮೇಲು ದಾಳಿಗೆ ಯತ್ನಿಸುತ್ತಿದೆ. ಕೂಡಲೇ ಕಾಡಾನೆಯನ್ನು ಸೆರೆ ಹಿಡಿಯಬೇಕೆಂದು ಕಾರ್ಮಿಕ ಮುಖಂಡ ಮಹದೇವ್ ಅರಣ್ಯ ಒತ್ತಾಯಿಸಿದ್ದಾರೆ.

ಮದುವೆ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ

ಮೂವರು ಕಳ್ಳರ ಬಂಧನ

ಕುಶಾಲನಗರ: ಇಲ್ಲಿನ ರೈತ ಸಮುದಾಯ ಭವನದಲ್ಲಿ ಮದುವೆ ಶಾಸ್ತ್ರ ನಡೆಯುತ್ತಿದ್ದ ಸಂದರ್ಭ ವಧುವಿನ ಕೊಠಡಿಯಿಂದ ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ ಮೂವರು ಕಳ್ಳರನ್ನು ಕುಶಾಲನಗರ ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ತೊರೆನೂರು ಗ್ರಾಮದ ಚರಣ್ ಕುಮಾರ್(19), ಗೀಣಿಮರೂರು ಗ್ರಾಮದ ಎಸ್.ಎಲ್.ನಿತೀನ್(22) ಹಾಗೂ ತೊರೆನೂರು ಗ್ರಾಮದ ಅರಶಿನಕುಪ್ಪೆ ನಿವಾಸಿ ಮಿಥುನ್ (24) ಬಂಧಿತರು. ಕಳವು ಮಾಡಿದ್ದ 28 ಗ್ರಾಂ ಚಿನ್ನಾಭರಣ, 5 ಸಾವಿರ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ರೈತ ಸಮುದಾಯ ಭವನದಲ್ಲಿ ನ.8ರಂದು ನಳಿನಿ ಅವರ ಮಗಳ ವಿವಾಹ ನಡೆಯುತ್ತಿತ್ತು. ಈ ವೇಳೆ ವಧುವಿನ ಕೊಠಡಿಯಲ್ಲಿದ್ದ ಚಿನ್ನಾಭರಣವನ್ನು ಈ ಮೂವರು ಕಳವು ಮಾಡಿದ್ದರು.

ಈ ಕುರಿತು ವಧುವಿನ ತಾಯಿ ಕುಶಾಲನಗರ ಪಟ್ಟಣ ಠಾಣೆಗೆ ದೂರು ನೀಡಿದ್ದರು. ನಂತರ ಸ್ಥಳ ಪರಿಶೀಲಿಸಿದ ಪೊಲೀಸರು ಲಭ್ಯವಾದ ತಾಂತ್ರಿಕ ಸಾಕ್ಷ್ಯಗಳು ಹಾಗೂ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಮೂವರನ್ನು ಬಂಧಿಸಿದ್ದಾರೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ ಕುಶಾಲನಗರ ಠಾಣೆ ವೃತ್ತನಿರೀಕ್ಷಕ ಬಿ.ಜಿ.ಪ್ರಕಾಶ್, ಠಾಣಾಧಿಕಾರಿ ಹೆಚ್.ಟಿ.ಗೀತಾ, ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.



ಚರಣ್‌ಕುಮಾರ್ ಎಸ್.ಎಲ್.ನಿತೀನ್ ಮಿಥುನ್

ಡಿ.17ಕ್ಕೆ ಸಾಂಸ್ಕೃತಿಕ ಮೇಳ ಮುಂದೂಡಿಕೆ

ವಿರಾಜಪೇಟೆ: ಪಟ್ಟಣದ ಸಂತ ಅನ್ನಮ್ಮ ವಿದ್ಯಾಸಂಸ್ಥೆಯಲ್ಲಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಡಿ.12ರಂದು ಆಯೋಜಿಸಿದ್ದ ಸಾಂಸ್ಕೃತಿಕ ಮೇಳವನ್ನು ಕಾರಣಾಂತರಗಳಿಂದ ಡಿ.17ಕ್ಕೆ ಮುಂದೂಡಲಾಗಿದೆ. ಗುರುವಾರ ಸಾಂಸ್ಕೃತಿಕ ಮೇಳ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿತ್ತು. ಆದರೆ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ 3 ದಿನ ಶೋಕಾಚರಣೆ ಹೊರಡಿಸಿರುವುದು ಹಾಗೂ ಕೊಡಗು ಸರ್ವಜನಾಂಗದ ಒಕ್ಕೂಟ ಕೊಡಗು ಬಂದ್‌ಗೆ ಕರೆ ನೀಡಿದೆ. ಈ ಹಿನ್ನೆಲೆಯಲ್ಲಿ ಡಿ.17ಕ್ಕೆ ಸಾಂಸ್ಕೃತಿಕ ಮೇಳ ಮುಂದೂಡಲಾಗಿದೆ. ಈಗಾಗಲೇ ಮೇಳದಲ್ಲಿ ಭಾಗವಹಿಸಲು ಜಿಲ್ಲೆಯ ವಿವಿಧ 20 ವಿದ್ಯಾಸಂಸ್ಥೆಗಳು ಹೆಸರು ನೋಂದಾಯಿಸಿಕೊಂಡಿವೆ. ಮಂಗಳವಾರ ಟ್ರೋಫಿ ಅನಾವರಣ ಕಾರ್ಯಕ್ರಮ ನಡೆದಿದ್ದು, ಮೇಳದಲ್ಲಿ ಸಮಗ್ರ ಪ್ರಶಸ್ತಿ ಪಡೆಯುವ ಶಾಲಾ ತಂಡಕ್ಕೆ ಆಕರ್ಷಕ ಟ್ರೋಫಿ, 25,555 ರೂ. ನಗದು ಹಾಗೂ ವಿವಿಧ ಸ್ಪರ್ಧೆ ವಿಜೇತ ತಂಡಗಳಿಗೆ ಟ್ರೋಫಿ ನೀಡಲಾಗುವುದು. ಮಾಹಿತಿಗೆ ಮೊ.ಸಂ:9844174874ನ್ನು ಸಂಪರ್ಕಿಸಬಹುದು.

ಪ್ರಪಾತಕ್ಕೆ ಉರುಳಿದ ಕಾರು: ಚಾಲಕ ಪಾರು

ಮಡಿಕೇರಿ: ಚಾಲಕನ ನಿಯಂತ್ರಣ ತಪ್ಪಿ ಕಾರು 40 ಅಡಿ ಪ್ರಪಾತಕ್ಕೆ ಉರುಳಿ ಬಿದ್ದು, ಚಾಲಕ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ಘಟನೆ ನಾಪೋಕ್ಲು–ಭಾಗಮಂಡಲ ಮುಖ್ಯರಸ್ತೆಯ ಬಲ್ಲಮಾವಟಿಯಲ್ಲಿ ನಡೆದಿದೆ.

ನಾಪೋಕ್ಲು ಕಡೆಯಿಂದ ಬಲ್ಲಮಾವಟಿ ಕಡೆಗೆ ಎಡಿಕೇರಿ ಗ್ರಾಮದ ನಿವಾಸಿ ಗಣಪತಿ ಅವರು ಕಾರಿನಲ್ಲಿ ಬರುತ್ತಿದ್ದರು. ಈ ವೇಳೆ ಬಲ್ಲಮಾವಟಿ ಡಬಲ್ ಸೇತುವೆ ಬಳಿಯ ತಿರುವಿನಲ್ಲಿ ನಿಯಂತ್ರಣ ತಪ್ಪಿ ರಸ್ತೆಬದಿಯ 40 ಅಡಿ ಪ್ರಪಾತಕ್ಕೆ ಉರುಳಿ ಬಿದ್ದಿದೆ.

ಅಪಘಾತದಿಂದ ಕಾರು ಸಂಪೂರ್ಣವಾಗಿ ಜಖಂಗೊಂಡಿದ್ದು, ಗಾಯಗೊಂಡಿದ್ದ ಚಾಲಕ ಗಣಪತಿ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ನಾಪೋಕ್ಲು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಪ್ರಪಾತಕ್ಕೆ ಉರುಳಿದ್ದ ಕಾರು ಜಖಂಗೊಂಡಿರುವುದು.

ಮಾಜಿ ಶಾಸಕ ಜಯಣ್ಣ ನಿಧನಕ್ಕೆ ಜಿಟಿಡಿ ಸಂತಾಪ

ಮೈಸೂರು, ಡಿ.11–ಕೊಳ್ಳೇಗಾಲದ ಮಾಜಿ ಶಾಸಕರು ಹಾಗೂ ಪ್ರಸ್ತುತ ಉಗ್ರಾಣ ನಿಗಮದ ಅಧ್ಯಕ್ಷ ಎಸ್ ಜಯಣ್ಣ ಅವರ ನಿಧನಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತೀವ್ರ ಸಂತಾಪ ಸೂಚಿಸಿದ್ದಾರೆ.



ಜಯಣ್ಣ ಅವರ ನಿಧನದ ಸುದ್ದಿ ಕೇಳಿ ಆಘಾತವಾಯಿತು. ಜಯಣ್ಣರವರು ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದು, ನನಗೆ ಆತ್ಮೀಯ ಸ್ನೇಹಿತರಾಗಿದ್ದರು. ಅವರು 1994 ಮತ್ತು 2013ರಲ್ಲಿ ಎರಡು ಬಾರಿ ಶಾಸಕರಾಗಿದ್ದರು. 1994ರಲ್ಲಿ ಜಯಣ್ಣ ಶಾಸಕರಾಗಿದ್ದಾಗ ನಾನು ಮೈಸೂರು ಜಿಲ್ಲಾ ಪಂಚಾಯಿತಿ (ಆಗ ಚಾಮರಾಜನಗರ ಮೈಸೂರು ಜಿಲ್ಲೆಗೇ ಸೇರಿತ್ತು) ಅಧ್ಯಕ್ಷನಾಗಿ ಕೊಳ್ಳೇಗಾಲ ಮತ್ತು ಯಳಂದೂರು ಭಾಗದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಜೊತೆಯಾಗಿ ಕೈಗೊಂಡಿದ್ದೆವು. ಜಯಣ್ಣ ಅವರು ಜನರ ಕಷ್ಟಗಳಿಗೆ ಸದಾ ಮಿಡಿಯುತ್ತಿದ್ದರು. ಅವರ ಸಾವು ವೈಯಕ್ತಿಕವಾಗಿ ಆಘಾತ ತಂದಿದೆ. ಭಗವಂತ ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಹಾಗೂ ಅಭಿಮಾನಿಗಳಿಗೆ ನೀಡಲಿ ಎಂದು ಜಿಟಿಡಿ ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.

ಜಯಣ್ಣ ವ್ಯಕ್ತಿತ್ವಕ್ಕೆ ಉನ್ನತ ಹುದ್ದೆ ದೊರಕಲಿಲ್ಲ

ಅವರೊಬ್ಬ ಅಜಾತ ಶತ್ರು: ಸಿಎಂ ಸಿದ್ದರಾಮಯ್ಯ

ಕೊಳ್ಳೇಗಾಲ, ಡಿ.11–ಮಾಜಿ ಶಾಸಕ ಎಸ್.ಜಯಣ್ಣಗೆ ಉನ್ನತ ಹುದ್ದೆಗೇರುವ ಅರ್ಹತೆ ಇದ್ದರೂ ಅವರ ವ್ಯಕ್ತಿತ್ವಕ್ಕೆ ಸೂಕ್ತ ಸ್ಥಾನ ಸಿಗಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಟ್ಟಣದಲ್ಲಿ ಎಸ್.ಜಯಣ್ಣ ಅವರ ಪಾರ್ಥಿವ ಶರೀರಕ್ಕೆ ನಮನ ಸಲ್ಲಿಸಿ ಮಾತನಾಡಿದ ಅವರು, ನನ್ನ ಹಾಗೂ ಜಯಣ್ಣ ಅವರ ದೀರ್ಘ ಗೆಳೆತನದ ಸಂಬಂಧ, ನಾವು ವಿದ್ಯಾರ್ಥಿ ದೆಸೆಯಿಂದಲೇ ಆತ್ಮೀಯರಾಗಿದ್ದವು. ನನ್ನ ರಾಜಕೀಯ ಯಾವುದೇ ತೀರ್ಮಾನಕ್ಕೆ ಜಯಣ್ಣ ಬದ್ಧರಾಗುತ್ತಿದ್ದರು. ಅವರು ರಾಜಕೀಯದಲ್ಲಿ ಅಪರೂಪದ ವ್ಯಕ್ತಿಯಾಗಿದ್ದರು. ಮಾತು ಕಡಿಮೆ, ಸೌಮ್ಯ ಸ್ವಭಾವ, ನಂಬಿಕಸ್ಥ ಗೆಳೆಯ. ಜಯಣ್ಣ ಎರಡು ಬಾರಿ ಶಾಸಕರಾಗಿದ್ದರೂ ಅವರ ಅರ್ಹತೆಗೆ ಸೂಕ್ತ ಸ್ಥಾನ ಸಿಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜಯಣ್ಣ ಒಬ್ಬ ಅಜಾತ ಶತ್ರು, ರಾಜಕೀಯದಲ್ಲಿ ಎಂದಿಗೂ ನನ್ನನ್ನೇ ಹಿಂಬಾಲಿಸಿದ್ದರು. ಎಷ್ಟೇ ಪ್ರಚೋದನೆ ಬಂದರೂ ಸಿದ್ಧಾಂತ ಬಿಟ್ಟುಕೊಡುತ್ತಿರಲಿಲ್ಲ. ಯಾವುದೇ ಆಸೆ–ಆಮಿಷಗಳಿಗೆ ಒಳಗಾದವರಲ್ಲ. ಅವರೊಬ್ಬ ಅಜಾತಶತ್ರು, ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದರು. ಅಭಿವೃದ್ಧಿಪರ ಚಿಂತಕರಾಗಿದ್ದರು. ಜಯಣ್ಣ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ಮತ್ತು ಬೆಂಬಲಿಗರಿಗೆ ಅವರ ಅಗಲಿಕೆ ನೋವು ಭರಿಸುವ ಶಕ್ತಿ ದೊರಕಲಿ ಎಂದರು.

ಜಯಣ್ಣ ಅಂತಿಮ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ

ಮಾಜಿ ಶಾಸಕರಿಗೆ ಮುಖ್ಯಮಂತ್ರಿ, ಸಚಿವರ ನಮನ



ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಜಿ ಶಾಸಕ ಎಸ್.ಜಯಣ್ಣ ಅವರ ಅಂತಿಮ ದರ್ಶನ ಪಡೆದರು. ಸಚಿವರಾದ ಕೆ.ವೆಂಕಟೇಶ್, ಡಾ.ಎಚ್.ಸಿ.ಮಹದೇವಪ್ಪ, ಶಾಸಕ ಎ.ಆರ್.ಕೃಷ್ಣಮೂರ್ತಿ ಇದ್ದರು.

ಚಾಮರಾಜನಗರ, ಡಿ.11–ಬುಧವಾರ ಕೊಳ್ಳೇಗಾಲಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಜಿ ಶಾಸಕ ಹಾಗೂ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ ಅವರ ಅಂತಿಮ ದರ್ಶನ ಪಡೆದು ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿದರು.

ಕೊಳ್ಳೇಗಾಲ ಪಟ್ಟಣದ ಎಂಜಿಎಸ್‌ವಿ ಕಾಲೇಜು ಮೈದಾನದ ಹೆಲಿಪ್ಯಾಡ್‌ಗೆ ಬಂದಿಳಿದ ಮುಖ್ಯಮಂತ್ರಿ, ಅಲ್ಲಿಂದ ಕಾರಿನಲ್ಲಿ ಮಹದೇಶ್ವರ ಕಾಲೇಜು ಬಡಾವಣೆಯಲ್ಲಿರುವ ಎಸ್.ಜಯಣ್ಣ ಅವರ ಅನುಗ್ರಹ ನಿಲಯಕ್ಕೆ ತೆರಳಿ. ಜಯಣ್ಣ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿರಿಸಿ ಅಂತಿಮ ದರ್ಶನ ಪಡೆದರು. ಇದೇ ಸಂದರ್ಭದಲ್ಲಿ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಚಿವರಾದ ಕೆ.ವೆಂಕಟೇಶ್, ಡಾ.ಎಚ್.ಸಿ.ಮಹದೇವಪ್ಪ ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ದರ್ಶನ್ ಧ್ರುವನಾರಾಯಣ, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಇನ್ನಿತರ ಗಣ್ಯರು ಜಯಣ್ಣ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ತಹಸೀಲ್ದಾರ್ ಬಸವರಾಜು ಮತ್ತಿತರರು ಇದ್ದರು.

ಹುಟ್ಟೂರು ಮಾಂಬಳ್ಳಿಯಲ್ಲಿ ಅಂತ್ಯಕ್ರಿಯೆ

ಬುಧವಾರ ಸಂಜೆ ಮಾಜಿ ಶಾಸಕ ಎಸ್.ಜಯಣ್ಣ ಅವರ ಹುಟ್ಟೂರಾದ ಮಾಂಬಳ್ಳಿಯಲ್ಲಿ ಬೌದ್ಧ ಧರ್ಮದ ಸಾಂಪ್ರಾದಾಯದಂತೆ ಬೌದ್ಧ ಧರ್ಮದ ಮನೋರಕ್ಕಿತ ಬಂತೆಜಿ ನೇತೃತ್ವದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಇದೇ ವೇಳೆ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ ಸರ್ಕಾರಿ ಗೌರವ ಸಲ್ಲಿಸಿದರು.

ಜಯಣ್ಣಗೆ ಅನುಗ್ರಹ ಸಿಗಲಿಲ್ಲ

ಇಂದು ಅವರ ಹೊಸ ಮನೆ ಗೃಹಪ್ರವೇಶವಿತ್ತು

ಕೊಳ್ಳೇಗಾಲ: ಮಾಜಿ ಶಾಸಕ ಎಸ್.ಜಯಣ್ಣ ಅವರು ಪಟ್ಟಣದಲ್ಲಿ ಅನುಗ್ರಹ ಹೆಸರಿನಲ್ಲಿ ನೂತನವಾಗಿ ನಿರ್ಮಿಸಿದ್ದ ತಮ್ಮ ಮನೆಯ ಗೃಹಪ್ರವೇಶಕ್ಕೆ ಸಿದ್ಧತೆ ಮಾಡಿಕೊಂಡಿದ್ದರು.




ಡಿ.12ರಂದು ಅದ್ದೂರಿಯಾಗಿ ಗೃಹಪ್ರವೇಶ ಸಮಾರಂಭ ಇತ್ತು. ಡಿ.8ರಂದು ಕೊಳ್ಳೇಗಾಲಕ್ಕೆ ಆಗಮಿಸಿದ್ದ ಸಿದ್ದರಾಮಯ್ಯ ಅವರು ಎಸ್.ಜಯಣ್ಣ ಅವರ ಅನುಗ್ರಹ ಹೊಸಮನೆಯನ್ನು ಉದ್ಘಾಟಿಸಿದ್ದರು. ಆದರೆ, ಗೃಹಪ್ರವೇಶಕ್ಕೆ 2 ದಿನ ಬಾಕಿ ಇರುವಾಗ ಡಿ.10ರ ಬೆಳಗ್ಗೆ ಜಯಣ್ಣ ಅವರು ಹೃದಯಾಘಾತದಿಂದ ನಿಧನರಾದರು.

ಸ್ವಂತಃ ಮನೆಯಲ್ಲಿ ನೆಲೆಯೂರಲಿಲ್ಲ: ಜಯಣ್ಣ ಅವರು 1993 ರಿಂದಲೂ ಸ್ವಂತಃ ಗೂಡು ನಿರ್ಮಿಸಿಕೊಂಡಿರಲಿಲ್ಲ. ಹಿಂದೆ ಖಾಸಗಿ ವಸತಿಗೃಹ, ಬಾಡಿಗೆ ಮತ್ತು ಹಿತೈಷಿಗಳ ಮನೆ, ಪ್ರವಾಸಿ ಮಂದಿರದಲ್ಲೇ ಕಾಲ ಕಳೆದಿದ್ದ ಜಯಣ್ಣ ಅವರು ಕೊನೆಗೆ ಪಟ್ಟಣದಲ್ಲಿ ಅನುಗ್ರಹ ಹೆಸರಿನಲ್ಲಿ ಸ್ವಂತಃ ಮನೆ ನಿರ್ಮಿಸಿದ್ದರು. ಆದರೆ, ಸ್ವಂತಃ ಮನೆಗೆ ಪ್ರವೇಶಿಸಲು ದೇವರ ಅನುಗ್ರಹವಾಗಲಿಲ್ಲ. ಹಠಾತ್ ನಿಧನರಾದರು.

ಅವರಿಲ್ಲದ ಕೊರಗು ಕಾಡುತ್ತಿದೆ: ಜಯಣ್ಣ ಅವರು ಅಪರೂಪದ ರಾಜಕಾರಣಿ. ಅತೀವ ಜ್ಞಾನವಿದ್ದ ಅವರು ಅಭಿವೃದ್ಧಿ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದರು. ಎಲ್ಲರನ್ನೂ ಪ್ರಿತಿಯಿಂದ ಬ್ರದರ್ ಎಂದೆ ಕರೆಯುತ್ತಿದ್ದರು. ಇಂದು ಅವರಿಲ್ಲ ಎಂಬ ನೋವು ನಮ್ಮೆಲ್ಲರನ್ನು ಕಾಡುತ್ತಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್ ಬೇಸರ ವ್ಯಕ್ತಪಡಿಸಿದರು.

ವಾಸುದೇವಮೂರ್ತಿ ನಿಧನ



ಬೇಗೂರು, ಡಿ.11–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಪತ್ರಿಕಾ ಛಾಯಾಗ್ರಾಹಕ ಕಿರಣ್ ಬೇಗೂರು ಅವರ ತಂದೆ ವಾಸುದೇವಮೂರ್ತಿ (84) ಅನಾರೋಗ್ಯದಿಂದ ಬುಧವಾರ ನಿಧನರಾದರು

ಮೃತರು ಪತ್ನಿ, ಕಿರಣ್ ಬೇಗೂರು ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ನಂಜನಗೂಡಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯ ಕಂಡ ಅಪರೂಪದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ

ಚಾಮರಾಜನಗರ, ಡಿ.11–ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ತಾಲೂಕು ಒಕ್ಕಲಿಗರ ಸಂಘದ ವತಿಯಿಂದ ಬುಧವಾರ ನಗರದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಕೊಳದ ಬೀದಿಯಲ್ಲಿರುವ ಒಕ್ಕಲಿಗರ ಸಮುದಾಯ ಭವನದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಂಘದ ಅಧ್ಯಕ್ಷ ಸುದರ್ಶನಗೌಡ ಎಸ್.ಎಂ.ಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ನಂತರ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ಅವರು ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿಯಾಗಿದ್ದರು. ಬೆಂಗಳೂರನ್ನು ಸಿಂಗಾಪುರ ಮಾಡುವ ಕನಸಿನೊಂದಿಗೆ ಸಿಲಿಕಾನ್ ಸಿಟಿಗೆ ಶ್ರಮಿಸಿದ್ದರು. ವಿಧಾನಸೌಧ ಪಕ್ಕದಲ್ಲಿ ವಿಕಾಸ ಸೌಧ ನಿರ್ಮಿಸಿದರು. ಜೊತೆಗೆ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಸ್ಮರಿಸಿದರು.

ಸಭೆಯಲ್ಲಿ ಸಂಘದ ಗೌರವಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ, ಉಪಾಧ್ಯಕ್ಷ ಚಿನ್ನುಮುತ್ತು, ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಸಹಕಾರ್ಯದರ್ಶಿ ಸಿ.ಬಿ.ನಾಗೇಂದ್ರ, ನಿರ್ದೇಶಕರಾದ ಮಹೇಶ್‌ಗೌಡ, ಮಣಿ ಮಾಸ್ಟರ್, ಮರಿಸ್ವಾಮಿ, ಪುರುಷೋತ್ತಮ್, ಅರುಣ್ ಕುಮಾರ್ ಇತರರು ಹಾಜರಿದ್ದರು.



ಚಾಮರಾಜನಗರದ ಒಕ್ಕಲಿಗರ ಸಮುದಾಯ ಭವನದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾಂಗ್ರೆಸ್ ಕಚೇರಿಯಲ್ಲಿ ಜಯಣ್ಣಗೆ ಶ್ರದ್ಧಾಂಜಲಿ



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚಾಮರಾಜನಗರ, ಡಿ.11– ಕೊಳ್ಳೇಗಾಲ ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇದೇ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಎಸ್.ಜಯಣ್ಣ ಅವರು 2 ಬಾರಿ ಕೊಳ್ಳೇಗಾಲ ಕ್ಷೇತ್ರದಿಂದ ಶಾಸಕರಾಗಿ ಅನೇಕ ಅಭಿವೃದ್ಧಿ ಕಾರ್ಯ ನೆರವೇರಿಸಿದ್ದಾರೆ. ಅವರು ಸಜ್ಜನ ರಾಜಕಾರಣಿಯಾಗಿದ್ದರು. ಪಕ್ಷ ಸಂಘಟನೆ ಕುರಿತು ಅನೇಕ ಮಾರ್ಗದರ್ಶನ ನೀಡುತ್ತಿದ್ದರು. ಅವರ ನಿಧನದಿಂದ ಪಕ್ಷ ಹಾಗೂ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ನಂಜೇದೇವನಪುರ ಗ್ರಾಪಂ ಅಧ್ಯಕ್ಷ ಶೇಖರಪ್ಪ, ನಗರಸಭೆ ಮಾಜಿ ಸದಸ್ಯ ಪುಟ್ಟಸ್ವಾಮಿ, ನಾಗರಾಜು, ನಾಗವಳ್ಳಿ ನಾಗಯ್ಯ, ಕರಿನಂಜನಪುರ ಸ್ವಾಮಿ, ಬಸವರಾಜು, ಎ.ಹೆಚ್.ನಸ್ರುಲ್ಲಾಖಾನ್, ಮೋಹನ್ ನಗು, ವಕೀಲ ನಾಗಾರ್ಜುನ್, ಪರ್ವಿಜ್, ಪಿಎಸಿಸಿ ನಿರ್ದೇಶಕ ಗುರುಸ್ವಾಮಿ, ಅಫ್ಸರ್ ಅಹಮದ್, ನಾಗಬಸವಣ್ಣ, ಸಿದ್ದರಾಜು ಮುತ್ತುರಾಜು, ಹಾಜರಿದ್ದರು.

ನಾಳೆ ಆಂಜನೇಯಸ್ವಾಮಿಗೆ ವಿಶೇಷ ಪೂಜೆ

ಚಾಮರಾಜನಗರ: ಹನುಮ ಜಯಂತಿ ಪ್ರಯುಕ್ತ ನಗರದ ಮಾರಿಗುಡಿ ಬಳಿಯ ಅಭಯ ಕಾರ್ಯಸಿದ್ಧಿ ಆಂಜನೇಯ ಸ್ವಾಮಿಗೆ ಶುಕ್ರವಾರ (ಡಿ.13) ಬೆಳಗ್ಗೆ 7.30ಕ್ಕೆ ವಿಶೇಷ ಪೂಜೆ, ಅಭಿಷೇಕ ಹಾಗೂ ಅಲಂಕಾರ ಏರ್ಪಡಿಸಲಾಗಿದೆ.

ಬೆಳಗ್ಗೆ 10 ಗಂಟೆಗೆ ಮಹಾಮಂಗಳಾರತಿ ನಡೆಯಲಿದೆ. ನಂತರ ಪ್ರಸಾದ ವಿನಿಯೋಗಿಸಲಾಗುವುದು ಎಂದು ದೇವಸ್ಥಾನ ಅರ್ಚಕ ರಾಮಕೃಷ್ಣ ಭಾರದ್ವಾಜ್ ತಿಳಿಸಿದ್ದಾರೆ.

ಮಹಿಳೆಯರಿಂದ ಭಗವದ್ಗೀತೆ ಶ್ಲೋಕ ಪಠಣ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರ ಭಗವದ್ಗೀತೆ ಶ್ಲೋಕಗಳನ್ನು ಪಠಣ ನಡೆಸಿದರು.

ಮೈಸೂರು, ಡಿ.11(ಎಸ್‌ಪಿಎನ್)– ಗೀತಾ ಜಯಂತಿ ಪ್ರಯುಕ್ತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರ ಭಗವದ್ಗೀತೆ ಶ್ಲೋಕಗಳನ್ನು ಪಠಣ ನಡೆಸಿದರು.

ಮೈಸೂರು –ಊಟಿ ರಸ್ತೆಯ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ರಾಜ್ಯದ ಬೇರೆಬೇರೆ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಕ್ಕೂ ಅಧಿಕ ಮಹಿಳೆಯರು ಗೀತಾ ಜಯಂತಿಯಲ್ಲಿ ಭಗವದ್ಗೀತೆ ಪಠಣಿಸಿ ಭಗವಂತನ ಕೃಪೆಗೆ ಪಾತ್ರರಾದರು.

ಕೃಷ್ಣ ನಿಧನಕ್ಕೆ ಕೈಗಾರಿಕೋದ್ಯಮಿಗಳ ಸಂತಾಪ



ಮೈಸೂರು,ಡಿ.11(ಎಸ್‌ಪಿಎನ್)– ಮಾಜಿ ಸಿಎಂ ಎಸ್.ಎಂ.ಕೃಷ್ಣರ ನಿಧನಕ್ಕೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ವಸಾಹತು ಸಂಘದ ಪದಾಧಿಕಾರಿಗಳು ಕಂಬನಿ ಮಿಡಿದ್ದಾರೆ.

ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರು, ಬೆಂಗಳೂರನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಬೆಂಗಳೂರನ್ನು ಸಿಲಿಕಾನ್ ಸಿಟಿ, ಐಟಿ ಹಬ್ ಸೇರಿದಂತೆ ಇತರೆ ವಿಶೇಷಣಗಳಿಂದ ಕರೆಯುವಂತಾಗಲು ಅವರ ದೂರದೃಷ್ಟಿಯ ಆಡಳಿತಕ್ಕೆ ಕೈಗನ್ನಡಿ ಎಂದು ಸಂಘದ ಅಧ್ಯಕ್ಷ ಕೆ.ಜಿ.ಪ್ರಕಾಸ್ ಅಭಿಪ್ರಾಯಪಟ್ಟಿದ್ದಾರೆ.

ಈ ವೇಳೆ ಎಂ.ಸಿ.ಸಿ.ಐ ಅಧ್ಯಕ್ಷ ಕೆ.ಬಿ. ಲಿಂಗರಾಜು ಹಾಗೂ ಮಾಜಿ ಅಧ್ಯಕ್ಷರಾದ ಜಯಂತ್ ಮತ್ತು ಗೌಸ್ ಹಾಗೂ ಸದಸ್ಯರು ಸೇರಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ನಡೆಸಲಾಯಿತು.

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಗುರುವಾರ 12 ಡಿಸೆಂಬರ್ 2024

ತಿ.ನರಸೀಪುರದಲ್ಲಿ ಕಸಾಪದಿಂದ ಕನ್ನಡ ರಥಕ್ಕೆ ಸ್ವಾಗತ

ಎಸ್‌ಎಂಕೆ ನಿಧನರಾದ ಹಿನ್ನೆಲೆ ರಾಜ್ಯದಲ್ಲಿ ಶೋಕಾಚರಣೆ ಇರುವುದರಿಂದ ಸರಳ ಸ್ವಾಗತ



ಮಂಡ್ಯ ಜಿಲ್ಲೆಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ತಿ.ನರಸೀಪುರ ಪಟ್ಟಣಕ್ಕೆ ಆಗಮಿಸಿದ ಕನ್ನಡ ರಥವನ್ನು ವಿದ್ಯೋದಯ ಕಾಲೇಜು ವೃತ್ತದಲ್ಲಿ ಕಂದಾಯ ಇಲಾಖೆ ಹಾಗೂ ಕಸಾಪ ತಾಲೂಕು ಘಟಕದಿಂದ ಬರಮಾಡಿಕೊಳ್ಳಲಾಯಿತು.

ತಿ.ನರಸೀಪುರ, ಡಿ.11– ಮಂಡ್ಯ ಜಿಲ್ಲೆಯಲ್ಲಿ ಡಿ.20 ರಿಂದ 22 ರವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಪಟ್ಟಣಕ್ಕೆ ಆಗಮಿಸಿದ ಕನ್ನಡ ರಥಕ್ಕೆ ವಿದ್ಯೋದಯ ಕಾಲೇಜು ವೃತ್ತದಲ್ಲಿ ಕಂದಾಯ ಇಲಾಖೆ ಹಾಗೂ ಕಸಾಪ ತಾಲೂಕು ಘಟಕದಿಂದ ಸರಳವಾಗಿ ಸ್ವಾಗತ ಕೋರಲಾಯಿತು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತಕ್ಕೆ ಆಗಮಿಸಿದ ಕನ್ನಡ ರಥವನ್ನು ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ನೇತೃತ್ವದಲ್ಲಿ ಬರಮಾಡಿಕೊಂಡ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಕಸಾಪ ಸದಸ್ಯರು ಕನ್ನಡಾಂಬೆಯ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಕಸಾಪ ಕಾರ್ಯದರ್ಶಿ ಎಂ.ವಿ.ಶಿವಶಂಕರ ಮೂರ್ತಿ ಪಟ್ಟಣಕ್ಕೆ ಆಗಮಿಸಿದ ಕನ್ನಡ ರಥವನ್ನು ಅದ್ದೂರಿಯಾಗಿ ಬರಮಾಡಿಕೊಂಡು ವಿಜೃಂಭಣೆಯಿಂದ ಮೆರವಣಿಗೆ ಮಾಡಬೇಕೆಂಬ ಉದ್ದೇಶ ಹೊಂದಿದ್ದೆವು. ಆದರೆ ರಾಜ್ಯದಲ್ಲಿ ಶೋಕಾಚರಣೆ ಇರುವುದರಿಂದ ಕಾರ್ಯಕ್ರಮವನ್ನು ಸರಳಗೊಳಿಸಿ ಕೇವಲ ಚಾಲನೆ ಮಾತ್ರ ನೀಡಲಾಗುತ್ತಿದೆ. ಹಾಗಾಗಿ ಮಂಡ್ಯದಲ್ಲಿ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನ ಜಾತ್ರೆ ಇಡೀ ಕನ್ನಡಿಗರ ಹಬ್ಬವಾಗಿದ್ದು, ತಿ.ನರಸೀಪುರ ತಾಲೂಕಿನಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ತೆರಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ತಿ.ನರಸೀಪುರ ತಾಲೂಕು ಕನ್ನಡ ಚಳುವಳಿಯ ಕ್ಷೇತ್ರ, ಕನ್ನಡ ಭಾಷೆಯ ಹೋರಾಟಗಳ ಕೇಂದ್ರ, ಕನ್ನಡ ಭಾಷೆ, ನೆಲ, ಜಲಕ್ಕಾಗಿ ವಾಟಾಳ್ ನಾಗರಾಜು ಮಾಡಿದ ಹೋರಾಟ ಅವಿಸ್ಮರಣೀಯ. ಹಾಗಾಗಿ ಪಕ್ಕದ ಮಂಡ್ಯದಲ್ಲಿ ಕನ್ನಡದ ಹಬ್ಬ ನಡೆಯುತ್ತಿದೆ. ಕನ್ನಡ ಭಾಷೆ ಹೆಚ್ಚು ಪ್ರಮಾಣದಲ್ಲಿ ಪ್ರೀತಿಸುವ, ಭಾಷೆಯನ್ನೇ ಉಸಿರಾಗಿಸಿಕೊಂಡಿರುವ ತಾಲೂಕಿನ ಎಲ್ಲಾ ಕನ್ನಡಾಭಿಮಾನಿಗಳು ಸಮ್ಮೇಳನಕ್ಕೆ ಹೋಗಿ ಕನ್ನಡ ಭಾಷೆಯ ಸಾಹಿತ್ಯವನ್ನು ಕಣ್ತುಂಬಿಕೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಚಂದ್ರಶೇಖರ್, ರೈತ ಮುಖಂಡ ಕಿರಗಸೂರು ಶಂಕರ್, ಪ್ರಸಾದ್ ನಾಯಕ್, ಕುರುಬೂರು ಶಿವು, ಬಜ್ಜಿ ನಿಂಗಪ್ಪ, ಡಾ. ಪ್ರದೀಪ್, ರಾಜ್ಯ ಹಿಂದುಳಿದ ವರ್ಗಗಳ ಕೆಪಿಸಿಸಿ ಕಾರ್ಯದರ್ಶಿ ಎಂ.ರಮೇಶ್, ಮನ್ಸೂರ್ ಆಲಿ, ವಕೀಲ ಜ್ಞಾನೇಂದ್ರ ಮೂರ್ತಿ, ಚೌಹಳ್ಳಿ ಮಲ್ಲೇಶ್, ಶ್ರೀರಾಂಪುರ ಮೂರ್ತಿ ಸೇರಿದಂತೆ ಮತ್ತಿತರಿದ್ದರು.

ಕೋಟೆಯಲ್ಲಿ ಪ್ಲಾಸ್ಟಿಕ್ ಮುಕ್ತ ಅರಿವು ಕಾರ್ಯಕ್ರಮ



ಕೋಟೆಯಲ್ಲಿ ಸಾರ್ವಜನಿಕರಿಗೆ ಬಟ್ಟೆ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಹೆಚ್.ಡಿ.ಕೋಟೆ, ಡಿ.11– ಪ್ಲಾಸ್ಟಿಕ್‌ನಿಂದಾಗುವ ಅನಾಹುತ ತಪ್ಪಿಸುವ ನಿಟ್ಟಿನಲ್ಲಿ ಪ್ಲಾಸ್ಟಿಕ್ ಮುಕ್ತ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಸುರೇಶ್ ತಿಳಿಸಿದ್ದಾರೆ.

ಪಟ್ಟಣದ ಪುರಸಭೆ ಕಚೇರಿ ಆವರಣದಲ್ಲಿ ರೋಟರಿ ಕ್ಲಬ್ ಹಾಗೂ ಮಡಿಲು ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಪ್ಲಾಸ್ಟಿಕ್ ಮುಕ್ತ ಅರಿವು ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ತ್ಯಜಿಸಿ ಬಟ್ಟೆ ಬ್ಯಾಗ್‌ಗಳನ್ನು ಬಳಸುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಿ ಮಾತನಾಡಿದ ಅವರು, ಬಟ್ಟೆ ಬ್ಯಾಗುಗಳನ್ನು ಬಳಸುವ ಮೂಲಕ ಪ್ಲಾಸ್ಟಿಕ್‌ನಿಂದಾಗುವ ಅನಾಹುತ ತಪ್ಪಿಸಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ರೋಟರಿ ಕ್ಲಬ್ ಅಧ್ಯಕ್ಷ ನಿರಂಜನ್ ಮಾತನಾಡಿದರು. ಇದೇ ವೇಳೆ ಸಾರ್ವಜನಿಕರಿಗೆ ಉಚಿತವಾಗಿ ಬಟ್ಟೆ ಬ್ಯಾಗುಗಳನ್ನು ವಿತರಿಸಲಾಯಿತು. ಈ ವೇಳೆ ಮಡಿಲು ಸಂಸ್ಥೆಯ ಸುನಂದ, ರೋಟರಿ ಕ್ಲಬ್ ಕಾರ್ಯದರ್ಶಿ ಶಿವಣ್ಣ, ಸದಸ್ಯರಾದ ಸತೀಶ್, ಸುರಭಿ, ಜಿ.ರವಿ, ಬಿ.ಸಿ.ಬಾಗೇಶ್, ಎನ್.ಎಸ್.ಕೃಷ್ಣ, ಅಲಯನ್ಸ್‌ನ ಮಾಜಿ ಅಧ್ಯಕ್ಷ ಹರಿದಾಸ್, ಗ್ರಾಪಂ ಮಾಜಿ ಉಪಾಧ್ಯಕ್ಷ ಕೆ.ಲೋಕೇಶ್, ಪುರಸಭಾ ಮ್ಯಾನೇಜರ್ ಕೆ.ಎಂ.ರೇಷ್ಮೆ, ಕಿರಿಯ ಆರೋಗ್ಯ ನಿರೀಕ್ಷಕ ಸಿ.ಎಸ್.ಹರೀಶ್, ಸಿಬ್ಬಂದಿಗಳಾದ ರಮೇಶ್, ಇಂದ್ರಮ್ಮ, ನವೀದ, ಶ್ರೀಕಂಠ, ಶ್ರೀಧರ, ಯದುನಂದನ್, ಚೌಡ ಇನ್ನಿತರರಿದ್ದರು.

ಮಡಿವಾಳ ಸಂಘಕ್ಕೆ ಶಿವಣ್ಣ ಗೌರವಾಧ್ಯಕ್ಷರಾಗಿ ಆಯ್ಕೆ



ತಾಲೂಕು ಮಡಿವಾಳರ ಸಂಘದ ನೂತನ ಗೌರವಾಧ್ಯಕ್ಷರಾಗಿ ಎಸ್. ಶಿವಣ್ಣ, ಉಪಾಧ್ಯಕ್ಷರಾಗಿ ರವಿಕುಮಾರ್, ಮಹೇಶ್ ಅವರನ್ನು ಆಯ್ಕೆ ಮಾಡಲಾಯಿತು.

ನಂಜನಗೂಡು, ಡಿ.11– ತಾಲೂಕು ಮಡಿವಾಳರ ಸಂಘದ ನೂತನ ಗೌರವಾಧ್ಯಕ್ಷರಾಗಿ ಚಾಮಲಾಪುರ ಬೀದಿಯ ಎಸ್. ಶಿವಣ್ಣ, ಉಪಾಧ್ಯಕ್ಷರಾಗಿ ಹದಿನವಾಳು ರವಿಕುಮಾರ್ ಮತ್ತು ಹೊರಳವಾಡಿ ಮಹೇಶ್‌ರವರನ್ನು ಸರ್ವಾನುಮತದಿಂದ ಆಯ್ಕೆಗೊಳಿಸಲಾಯಿತು.

ತಾಲೂಕು ಸಂಘದ ಅಧ್ಯಕ್ಷ ಪ್ರಸನ್ನ ಕುಮಾರ್ ಮಾತನಾಡಿ, ನಗರದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿರುವ ಮಡಿವಾಳ ಸಂಘದ ಕಚೇರಿಯಲ್ಲಿ ಭಾನುವಾರ ಗೌರವಾಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಚುನಾವಣೆಯಲ್ಲಿ ಎಸ್.ಶಿವಣ್ಣ, ರವಿಕುಮಾರ್ ಮತ್ತು ಮಹೇಶ್ ಅವರನ್ನು ತಾಲೂಕು ಸಂಘ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆಗೊಳಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕಾರ್ಯದರ್ಶಿ ಕೆ.ಎಂ.ಬಸವರಾಜ್, ಸಹ ಕಾರ್ಯದರ್ಶಿ ನಾಗರಾಜ್, ಖಜಾಂಚಿ ಸೋಮು, ಮಹದೇವಸ್ವಾಮಿ, ನಿರ್ದೇಶಕರುಗಳಾದ ಶಿವು, ಸುರೇಶ್, ಸುರೇಂದ್ರ, ನಂಜುಂಡಶೆಟ್ಟಿ, ಪ್ರಭು, ಪ್ರಶಾಂತ್, ಬೈರಾ, ಸಂಜು, ಗಣೇಶ್, ರಾಜೇಶ್, ಪ್ರಕಾಶ್, ರೇವಣ್ಣ, ಸುರೇಶ್, ವೆಂಕಟೇಶ್, ಬಸವರಾಜಣ್ಣ ಉಪಸ್ಥಿತರಿದ್ದರು.

ನಾಗರಿಕ ವೇದಿಕೆಯಿಂದ ಎಸ್‌ಎಂಕೆಗೆ ಸಂತಾಪ



ನಾಗರಿಕ ವೇದಿಕೆಯಿಂದ ಮಾಜಿ ಸಿಎಂ ಎಸ್‌ಎಂಕೆಗೆ ಸಂತಾಪ ಸೂಚಿಸಲಾಯಿತು.

ಬೆಟ್ಟದಪುರ, ಡಿ.11– ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನಿಧನದ ಅಂಗವಾಗಿ ಬೆಟ್ಟದಪುರದಲ್ಲಿ ನಾಗರಿಕ ವೇದಿಕೆ ವತಿಯಿಂದ ಸಂತಾಪ ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಹಲವಾರು ಗಣ್ಯರು ಎಸ್.ಎಂ.ಕೃಷ್ಣ ಅವರ ಗುಣಗಾನ ಮಾಡಿ ಕರ್ನಾಟಕ ರಾಜ್ಯದ ಐಟಿ–ಬಿಟಿ ಕ್ಷೇತ್ರದ ಪಿತಾಮಹ. ಅವರು ಕರ್ನಾಟಕದಲ್ಲಿ ಕಂಪ್ಯೂಟರ್ ಯುಗವನ್ನು ಸ್ಥಾಪಿಸದಿದ್ದರೆ ಇಂದು ಸಹ ಮಕ್ಕಳಿಗೆ ಕಂಪ್ಯೂಟರ್ ಕಲಿಸುವ ಅವಕಾಶ ಸಿಗುತ್ತಿರಲಿಲ್ಲ ಎಂದರು. ಅವರ ದೂರದೃಷ್ಟಿಯಿಂದಾಗಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಹಾಗೂ ಕಚೇರಿಗಳಿಗೆ ಕಂಪ್ಯೂಟರ್ ಒದಗಿಸಿದ ಏಕೈಕ ಮೊದಲ ಮುಖ್ಯಮಂತ್ರಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಅರುಣ್ ರಾಜ ಅರಸ್, ಮೈಲಾರಿ ಗೌಡ, ರಮೇಶ್, ಹರೀಶ್, ಬಸವರಾಜಚಾರ್, ರಾಜು, ರಮೇಶ್ ಸೇರಿದಂತೆ ಇತರರು ಹಾಜರಿದ್ದರು.

ವಿವಾದಗಳಿಂದ ದೂರವಿದ್ದ ರಾಜಕಾರಣಿ ಎಸ್.ಎಂ. ಕೃಷ್ಣ

ಕೆ.ಆರ್.ನಗರ ಒಕ್ಕಲಿಗರ ಸಂಘದಿಂದ ಭಾವಪೂರ್ಣ ಶ್ರದ್ಧಾಂಜಲಿ



ಮಿರ್ಲೆ ಅಣ್ಣೇಗೌಡ

ಕೆ.ಆರ್.ನಗರ, ಡಿ.11– ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಸುಸಂಸ್ಕೃತರಾಗಿದ್ದು, ಕರ್ನಾಟಕ ರಾಜ್ಯ ಕಂಡ ಅಪರೂಪದ ರಾಜಕಾರಣಿ. ವಿವಾದಗಳಿಂದ ದೂರ ಇದ್ದ ರಾಜಕಾರಣಿ. ಇಂತಹ ರಾಜಕಾರಣಿಯನ್ನು ಕಳೆದುಕೊಂಡಿದ್ದು ಒಕ್ಕಲಿಗ ಜನಾಂಗಕ್ಕೆ ನೋವು ತಂದಿದೆ ಎಂದು ಕೆ.ಆರ್.ನಗರ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ಸಂತಾಪ ಸೂಚಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ದೇಶಕ್ಕೆ ಅದರಲ್ಲೂ ಕರ್ನಾಟಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನಿರಂತರವಾಗಿ ಸೇವೆ ಮಾಡುವ ಮೂಲಕ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಜನಪರ ಕಾರ್ಯಕ್ರಮಗಳಿಗೆ ಅವರು ಒತ್ತು ನೀಡಿದ್ದರು. ಕರ್ನಾಟಕದ ರಾಜಧಾನಿ, ನಾಡಪ್ರಭು ಕೆಂಪೇಗೌಡರ ಬೆಂಗಳೂರಿನ ಬೆಳವಣಿಗೆಗೆ ಒಂದು ಹೊಸ ಚೈತನ್ಯ ತುಂಬಿದವರಲ್ಲಿ ಎಸ್.ಎಂ.ಕೃಷ್ಣ ಅವರು ಮೊದಲಿಗರು ಎಂದರು.

ಬೆಂಗಳೂರಿನ ಅಭಿವೃದ್ಧಿಗೆ ಹೊಸ ರೂಪ ನೀಡುವಲ್ಲಿ ಸಾಕಷ್ಟು ಕೊಡುಗೆ ನೀಡಿದ್ದರು. ಐಟಿ–ಬಿಟಿ ಕ್ಷೇತ್ರವನ್ನು ಬೆಂಗಳೂರಿಗೆ ಪರಿಚಯಿಸುವ ಮೂಲಕ ಬೆಂಗಳೂರಿಗೆ ಐಟಿ–ಬಿಟಿ ನಗರ ಎಂಬ ಹೊಸ ಹೆಸರು ನೀಡಿದರು. ದೂರದೃಷ್ಟಿಯ ನಾಯಕರಾಗಿದ್ದ ಅವರು, ಮುಖ್ಯಮಂತ್ರಿ, ರಾಜ್ಯಪಾಲ, ಕೇಂದ್ರ ಸಚಿವರಾಗಿ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದರು. ಅವರ ಅಗಲಿಕೆಯಿಂದ ನೊಂದಿರುವ ಕುಟುಂಬ ವರ್ಗದವರಲ್ಲಿ ನಾನೂ ಒಬ್ಬನಾಗಿದ್ದೇನೆ ಎಂದರು.

ಕೆ.ಆರ್.ನಗರ ತಾಲೂಕಿನ ಒಕ್ಕಲಿಗರ ಸಂಘದಿಂದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಹೆಸರಿನಲ್ಲಿ ನಿರ್ಮಿಸಿರುವ ಹೆಚ್.ಡಿ.ದೇವೇಗೌಡ ಸಮುದಾಯ ಭವನ ಉದ್ಘಾಟನೆಗೆ ಮುನಿಸು ಮರೆತು ಹೆಚ್.ಡಿ.ದೇವೇಗೌಡರ ಜೊತೆ ಆಗಮಿಸಿ ತಮ್ಮ ವಿಚಾರಧಾರೆಯನ್ನು ಸಮಾಜದ ಯುವಕರಿಗೆ ತಿಳಿಸಿದ್ದರು ಎಂದರು.

ಮುಖ್ಯಮಂತ್ರಿ ಆಗಿದ್ದ ವೇಳೆ ಮಿರ್ಲೆ ಮತ್ತು ಸಾಲಿಗ್ರಾಮ ಗ್ರಾಮಗಳಿಗೆ ಬಹುಕೋಟಿ ವೆಚ್ಚದಲ್ಲಿ ಕಾವೇರಿಯನ್ನು ನದಿಯಿಂದ ಶಾಶ್ವತ ಕುಡಿಯುವ ನೀರಿನ ಯೋಜನೆ ಕೊಟ್ಟು ಉದ್ಘಾಟಿಸಿದ ಮಹಾನಾಯಕ ಎಸ್.ಎಂ.ಕೃಷ್ಣ ಅವರು ಯಾವುದೇ ವಿವಾದ ಇರಲಿ ಹಾಗೂ ಯಾರನ್ನೇ ಟೀಕಿಸುವಾಗ ಕೀಳು ಪದದಿಂದ ಮಾತನಾಡಿದ್ದೇ ನಾನು ಕಂಡಿಲ್ಲ. ಅಪ್ಪಟ ಕನ್ನಡಿಗನಾದರೂ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಸುಲಲಿತವಾಗಿ ಮಾತನಾಡುತ್ತಿದ್ದರು. ಇಂತಹ ಅಪರೂಪದ ರಾಜಕಾರಣಿ ಕಳೆದುಕೊಂಡ ಒಕ್ಕಲಿಗ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದಿದ್ದಾರೆ.

ಅಪರಿಚಿತ ಶವ ಪತ್ತೆ



ಹುಣಸೂರು, ಡಿ.12– ತಾಲೂಕಿನ ಬಸವನಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ತರಿಕಲ್ ನಾಲೆಯಲ್ಲಿ ಸುಮಾರು 70 ರಿಂದ 75 ವಯಸ್ಸಿನ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದ್ದು, ವಾರಸುದಾರರು ಬಿಳಿಕೆರೆ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ (ಮೊ.ನಂ.9480805057) ರನ್ನು ಸಂಪರ್ಕಿಸಲು ಕೋರಲಾಗಿದೆ.

ಸಾಲಿಗ್ರಾಮದಲ್ಲಿ ಎಸ್.ಎಂ.ಕೃಷ್ಣರಿಗೆ ಶ್ರದ್ಧಾಂಜಲಿ



ಸಾಲಿಗ್ರಾಮದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಭಿಮಾನಿಗಳಿಂದ ಶ್ರದ್ಧಾಂಜಲಿ ಸಭೆ ನಡೆಯಿತು.

ಸಾಲಿಗ್ರಾಮ, ಡಿ.11– ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಕೊಡುಗೆ ಸಾಲಿಗ್ರಾಮಕ್ಕೆ ಸಾಕಷ್ಟು ಇದೆ. ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದ ಅವರು ಒಕ್ಕಲಿಗ ಸಮಾಜದ ಪ್ರಭಾವಿ ಮುಖಂಡರಾಗಿದ್ದರು ಎಂದು ಜೆಡಿಎಸ್ ಮುಖಂಡ ಸಾರಾ ಸತೀಶ್ ತಿಳಿಸಿದರು.

ಸಾಲಿಗ್ರಾಮ ಪಟ್ಟಣದಲ್ಲಿ ಆಯೋಜಿಸಿದ್ದ ಎಸ್.ಎಂ.ಕೃಷ್ಣ ಅವರ ಶ್ರದ್ಧಾಂಜಲಿ ಸಭೆ ಉದ್ದೇಶಿಸಿ ಮಾತನಾಡಿದರು. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಸಾಲಿಗ್ರಾಮಕ್ಕೆ ಆಗಮಿಸಿ ಸಾಲಿಗ್ರಾಮದ ಪೊಲೀಸ್ ಠಾಣೆ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಅವರ ಅವಧಿಯಲ್ಲಿ ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾದರೂ ಭಾರಿ ದಿಟ್ಟತನದಿಂದ ಮುಖ್ಯ ಮಂತ್ರಿ ಹುದ್ದೆಯನ್ನು ನಿಭಾಯಿಸಿ ಜನರ ಸಂಕಷ್ಟಕ್ಕೆ ನೆರವಾದರು. ರಾಜ್ಯಪಾಲರಾಗಿ ವಿದೇಶಾಂಗ ಸಚಿವರಾಗಿ ಉತ್ತಮ ಕೆಲಸ ಮಾಡಿದ ಕೀರ್ತಿಯು ಅವರಿಗೆ ಸಲ್ಲುತ್ತದೆ ಎಂದರು.

ಕಾಂಗ್ರೆಸ್ ಮುಖಂಡ ಸಂತೋಷ್ ಮಾತನಾಡಿ, ಎಸ್.ಎಂ. ಕೃಷ್ಣ ಅವರ ಅಗಲಿಕೆಯಿಂದ ಅಭಿಮಾನಿಗಳಿಗೆ ಸಾಕಷ್ಟು ನೋವು ಉಂಟಾಗಿದೆ. ಸಾಲಿಗ್ರಾಮದ ನವಾಜಿ ಬಾರೆಯಲ್ಲಿ ಇರುವ ನೀರಿನ ಟ್ಯಾಂಕ್ ಕೂಡ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಮಂಜೂರಾಗಿದ್ದು, ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಬಲಿಷ್ಠವಾಗಿ ಸಂಘಟನೆಗೊಂಡಿತು ಎಂದರು.

ಸಂದರ್ಭದಲ್ಲಿ ಪ್ರಥಮ ದರ್ಜೆ ಕಾಲೇಜು ಸಿಡಿಸಿ ಸದಸ್ಯ ಸಂತೋಷ್, ಗ್ರಾಮ ಪಂಚಾಯಿತಿ ಸದಸ್ಯ ಗಂಗಾಧರ್, ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ನಿರ್ದೇಶಕ ಗಿರೀಶ್, ರಾಂಪುರ ಪ್ರಭಾಕರ್, ಸೇಟಿಗೌಡ, ಬಳ್ಳೂರುಮಧು, ವಾಸಿಂ ಪಾಷ ಸೇರಿದಂತೆ ಹಲವರು ಇದ್ದರು.

ವಿಶೇಷ ಪೂಜೆ ಮೂಲಕ ಲೋಕಾರ್ಪಣೆ



ಮೂಗೂರಿನ ಶ್ರೀ ದೇಶೇಶ್ವರ ಸ್ವಾಮಿ ದೇವಾಲಯದಲ್ಲಿನ ಅಷ್ಟ ಭೈರವ ಮೂರ್ತಿ ಸಮೇತ ಶ್ರೀ ಕತ್ತಲೆ ಮನೆ ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯವನ್ನು ಮೂಗೂರು ಗ್ರಾಮದ ನಿವಾಸಿ ಸುಮ ಜಗದೀಶ್ ಕುಟುಂಬ ವರ್ಗ ನವೀಕರಿಸಿ, ಬುಧವಾರ ಗ್ರಾಮಸ್ಥರ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಲೋಕಾರ್ಪಣೆ ಮಾಡಿತು. ನಂತರ ದೇವಾಲಯದ ಆವರಣದಲ್ಲಿ ಪ್ರಸಾದ ವಿನಿಯೋಗ ನಡೆಯಿತು. ಈ ಸಂದರ್ಭದಲ್ಲಿ ಅರ್ಚಕರಾದ ಎಂ.ಎಸ್.ರವಿ, ರಮೇಶ್, ಮುಖಂಡರಾದ ಸ್ವಾಮಿ, ಚೇತನ್, ಶಿವಕೃಪ ಸೇವಾ ಸಮಿತಿಯ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಎಸ್.ಎಂ.ಕೃಷ್ಣ ಸಂತಾಪ

ತಿ.ನರಸೀಪುರ, ಡಿ.11– ಹಿರಿಯ ರಾಜಕಾರಣಿ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನಿಧನದಿಂದ ರಾಜ್ಯ ಓರ್ವ ಧೀಮಂತ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ. ಹಾಗೂ ಕೊಳ್ಳೇಗಾಲ ಮಾಜಿ ಶಾಸಕ, ಉಗ್ರಾಣ ನಿಗಮದ ಅಧ್ಯಕ್ಷ ಜಯಣ್ಣ ಅವರ ನಿಧನದಿಂದ ಕೂಡ ಅಪಾರ ನಷ್ಟವಾಗಿದೆ ಎಂದು ಪುರಸಭಾ ಅಧ್ಯಕ್ಷ ಬಿ.ವಸಂತ, ಶ್ರೀಕಂಠ, ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್, ಸದಸ್ಯ ಬಾದಾಮಿ ಮಂಜು ಸಂತಾಪ ಸೂಚಿಸಿದ್ದಾರೆ.

ಡಿ.18ರಿಂದ ಮದ್ಯ ವರ್ಜನ ಶಿಬಿರ

ನಂಜನಗೂಡು, ಡಿ.11– ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಡಿ.18 ರಿಂದ ಡಿ.25 ರವರೆಗೆ ಮದ್ಯ ವರ್ಜನ ಶಿಬಿರವನ್ನು ಆಯೋಜಿಸಲಾಗಿದೆ. ಕುಡಿತದಿಂದ ತೊಂದರೆಗೆ ಒಳಗಾದವರು ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆಯಬಹುದು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಎ.ಎನ್.ಶಿವಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು. ತಾಲೂಕಿನಲ್ಲಿ ಇದುವರೆಗೆ ನಡೆಸಿರುವ ಶಿಬಿರಗಳಲ್ಲಿ 400ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದು, 150ಕ್ಕೂ ಹೆಚ್ಚು ಮಂದಿ ಕುಡಿತ ಬಿಟ್ಟಿದ್ದಾರೆ. ರಾಜ್ಯಾದ್ಯಂತ ಸಂಸ್ಥೆ 1900ಕ್ಕೂ ಹೆಚ್ಚು ಶಿಬಿರಗಳನ್ನು ನಡೆಸಲಾಗಿದೆ. 1.5 ಲಕ್ಷ ಮಂದಿ ಪ್ರಯೋಜನ ಪಡೆದಿದ್ದಾರೆ. ಶಿಬಿರ ನಡೆಸಲು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಂಗಳ ಮಂಟಪವನ್ನು ಉಚಿತವಾಗಿ ನೀಡಿ, ಆಶೀರ್ವದಿಸಿದ್ದಾರೆ. ಶಾಸಕ ದರ್ಶನ್ ಧ್ರುವನಾರಾಯಣ, ತಹಶೀಲ್ದಾರ್, ತಾಲೂಕು ಆರೋಗ್ಯಾಧಿಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಕ್ಕಳ ಮನೆಯ ಸೋಮಶೇಖರ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಲತಾ ಮುದ್ದುಮೋಹನ್, ಪ್ರತಿಮಾ, ಧರ್ಮರಾಜ್, ಮಂಜೇಶ್, ಮಣಿಕಂಠ, ಕಿರಣ್ ಉಪಸ್ಥಿತರಿದ್ದರು.

ನಾನು ಹುಣಸೂರಿನ ಮನೆ ಮಗ, ಸೇವಕ, ಯಜಮಾನನೂ ನಾನೇ

ಎಂಎಲ್‌ಸಿ ವಿಶ್ವನಾಥ್ ಆರೋಪಕ್ಕೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಾಗ್ದಾಳಿ



ನಗರದ ಪತ್ರಕರ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಪಕ್ಷದ ಮುಖಂಡರು ಹಾಜರಿದ್ದರು.

ಹುಣಸೂರು, ಡಿ.11– ನಾನು ಹುಣಸೂರಿನ ಮನೆ ಮಗ, ನಾನು ಸೇವಕನೂ ಹೌದು, ಯಜಮಾನನೂ ಹೌದು ಎಂದು ತಮ್ಮ ಬಗ್ಗೆ ಆರೋಪ ಮಾಡಿರುವ ವಿಧಾನ ಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ವಿರುದ್ಧ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ವಾಗ್ದಾಳಿ ನಡೆಸಿದರು.

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ತಾಲೂಕಿನ ಜನತೆಗೆ ಮೋಸ ಮಾಡಿ ಸರ್ಕಾರಿ ಆಸ್ತಿಗಳನ್ನು ಕಬಳಿಸುತ್ತಿರುವ ಹೆಚ್.ಪಿ. ಮಂಜುನಾಥ್ ತಾಲೂಕಿಗೆ ಸೇವಕನೇ ಹೊರತು ಮಾಲೀಕನಲ್ಲ ಎಂದು ಎಂಎಲ್‌ಸಿ ವಿಶ್ವನಾಥ್ ಮಾಡಿರುವ ಗಂಭೀರ ಆರೋಪಕ್ಕೆ ಪ್ರತಿಕ್ರಿಯಿಸಿ ವಿಶ್ವನಾಥ್ ಆರೋಪಗಳನ್ನು ತಳ್ಳಿ ಹಾಕಿದ ಅವರು, ನಾನು ನನ್ನ ರಾಜಕಾರಣ ಜೀವನದಲ್ಲಿ ಸೇವಕನಾಗಿ ಕೆಲಸ ಮಾಡಿದ್ದೀನಿ. ಇದು ನಿಮಗೆ ನೆನಪಿರಲಿ, ನಾನು ಹುಣಸೂರಿನ ಮನೆ ಮಗನಾದ್ದರಿಂದ ಯಜಮಾನನಾಗಿಯೂ ಇದ್ದೇನೆ ಹೊರತು ಮಾಲೀಕನಾಗಿ ಯಾವತ್ತು ನಡೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ನಾನು ಪ್ರಾಮಾಣಿಕವಾದ ಭದ್ರಕೋಟೆಯಲ್ಲಿ ಕುಳಿತಿದ್ದೇನೆ. ನೀವು ಸುಳ್ಳು ಆರೋಪಗಳ ಚಾಳಿಯನ್ನು ಮುಂದುವರೆಸಿದರೆ ನಿಮ್ಮ ಕೇವಲ ಏಳು ತಿಂಗಳ ಶಾಸಕ ಅಧಿಕಾರಾವಧಿಯ ಭ್ರಷ್ಟಾಚಾರ ಹಾಗೂ ನಿಮ್ಮ ಮಗನ ಅನಾಹುತಗಳ ಬಗ್ಗೆ ಬೀದಿಗಿಳಿದು ಮಾತನಾಡಬೇಕಾಗುತ್ತದೆ. ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವ ಕೆಲಸ ಬಿಡಿ. ಇನ್ನೊಬ್ಬರನ್ನು ಟೀಕಿಸುವ ನೀವು ನಿಮ್ಮ ಪುತ್ರ ಹುಣಸೂರಿನಲ್ಲಿ ಮಾಡಿರುವ ಅನಾಹುತಗಳನ್ನು ಒಮ್ಮೆ ನೆನಪಿಸಿಕೊಂಡು ಸುಮ್ಮನಿದ್ದರೆ ಸರಿ. ಇಲ್ಲದಿದ್ದರೆ, ನೀವು ಮಾಡಿರುವ ಅಕ್ರಮಗಳ ಪಟ್ಟಿಯೇ ನನ್ನ ಬಳಿ ಇದೆ ಬೇಕಾದರೆ ಸಾರ್ವಜನಿಕ ವೇದಿಕೆಗೆ ಬನ್ನಿ ಎಂದು ಸವಾಲು ಹಾಕಿದರು.

ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ: ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ಬದುಕು ಕಟ್ಟಿಕೊಂಡು ಮನೆ ಮಕ್ಕಳಂತೆ ಇರುವ ನಮ್ಮ ಕುಟುಂಬದ ಮೇಲೆ ಆರೋಪಿಸುವ ಬದಲು ಒಂದು ಬಾರಿ ಸಾರ್ವಜನಿಕರ ಬಳಿ ಹೋಗಿ ನಿಮ್ಮ ಮೇಲೆ ಅವರಿಗಿರುವ ಅಭಿಪ್ರಾಯವನ್ನು ತಿಳಿದುಕೊಳ್ಳಿ, ಈ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ ಹೆಚ್.ಪಿ.ಮಂಜುನಾಥ್ ಏನು ಮಾಡಿದ್ದಾರೆ ಎಂದು ಮತದಾರರಲ್ಲಿ ಕೇಳಿ ತಿಳಿದುಕೊಂಡು ಮಾತನಾಡಿ, ನಿಮ್ಮ ಹತ್ತಿರ ಪ್ರಾಮಾಣಿಕತೆ ಕಲಿಯಲು ಏನೂ ಇಲ್ಲ, ನೀವು ಏನು ಎಂದು ರಾಜ್ಯದ ಜನತೆಗೆ, ಮೂರು ಪಕ್ಷದ ರಾಜಕಾರಣಿಗಳಿಗೆ ತಿಳಿದಿದೆ ಎಂದು ವಾಗ್ದಾಳಿ ನಡೆಸಿದರು.

ನೀವು ಒಬ್ಬ ಮರಕುಟಿಕ: ನಿಮಗೆ ವಯಸ್ಸಾದಂತೆ ನಿಮ್ಮ ವರ್ತನೆ ಮರಕುಟಿಕನಂತೆ ಕಾಣಿಸುತ್ತಾ ಇದೆ. ದೇವರಾಜ ಅರಸು, ಸಿದ್ದರಾಮಯ್ಯ, ದೇವೇಗೌಡರು, ಬಿ.ಎಸ್.ಯಡಿಯೂರಪ್ಪರವರ ತನಕ ಅಧಿಕಾರ ಕೊಟ್ಟಂತವರಿಗೇನೇ ಮೋಸ ಮಾಡಿದ ನೀವು ಎಷ್ಟು ಪ್ರಾಮಾಣಿಕರು. ನಿಮ್ಮ ನಂಬಿ ಅಧಿಕಾರ ಕೊಟ್ಟ ದೇವೇಗೌಡರು ಹಾಗೂ ನಮ್ಮ ತಾಲೂಕಿನ ಒಕ್ಕಲಿಗ ಸಮಾಜಕ್ಕೆ ಏನು ಮಾಡಿದ್ದೀರಿ ಎಂದು ನೀವೇ ಪ್ರಶ್ನಿಸಿಕೊಳ್ಳಿ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯ ಸ್ವಾಮಿಗೌಡ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜು, ಬಿಳಿಕೆರೆ ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ರಾಘು ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ನಾಳೆ ನಂಜನಗೂಡಲ್ಲಿ ಕಪಿಲಾ ಆರತಿ



ಸುದ್ದಿಗೋಷ್ಠಿಯಲ್ಲಿ ಯುವ ಬ್ರಿಗೇಡ್ ಸಂಘಟಕ ಸುನೀಲ್ ಕುಮಾರ್ ಮಾತನಾಡಿದರು.

ನಂಜನಗೂಡು, ಡಿ.11– ಇಲ್ಲಿನ ಯುವಬ್ರಿಗೇಡ್ ವತಿಯಿಂದ ಡಿ.13 ರ ಶುಕ್ರವಾರ ಕಪಿಲಾ ನದಿಯ ಸ್ನಾನಘಟ್ಟದಲ್ಲಿ ಕಪಿಲಾ ಆರತಿ,ಲಕ್ಷ ದೀಪೋತ್ಸವ ಹಾಗೂ ಲೇಸರ್ ಶೋ ನಡೆಸಲಾಗುವುದು ಎಂದು ಯುವ ಬ್ರಿಗೇಡ್ ಸಂಘಟಕ ಸುನೀಲ್ ಕುಮಾರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ಯುವ ಬ್ರಿಗೇಡ್‌ನ ಯುವಕರು ಕಪಿಲಾ ನದಿಯನ್ನು ಸ್ವಚ್ಛ ಮಾಡುವ ಕಾರ್ಯ ನಡೆಸುತ್ತಿದ್ದು, ನದಿಗೆ ತ್ಯಾಜ್ಯಗಳನ್ನು ಬಿಡದಂತೆ ಜನರಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ನಿರತವಾಗಿದೆ ಎಂದರು.

ಉತ್ತರದ ಕಾಶಿಯಂತೆ ದಕ್ಷಿಣ ಕಾಶಿ ನಂಜನಗೂಡಿನ ಕಪಿಲಾ ನದಿಗೆ ಡಿ.13ರಂದು ಸಂಜೆ 7 ಗಂಟೆಗೆ ಕಪಿಲಾ ಆರತಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಅಂದು ಬೆಳಿಗ್ಗೆ ಕೃಷ್ಣ ಜೋಯಿಸ್ ನೇತೃತ್ವದಲ್ಲಿ ಹೋಮ–ಹವನಗಳ ನಂತರ ಹದಿನಾರು ಕಾಲು ಮಂಟಪದಲ್ಲಿ ಶಿವಲಿಂಗಕ್ಕೆ ಸಾರ್ವಜನಿಕರಿಂದ ಅಭಿಷೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಸಂಜೆ ನಡೆಯುವ ಕಪಿಲಾ ಆರತಿ ಕಾರ್ಯಕ್ರಮದಲ್ಲಿ ಹರಿಹರ ಪೀಠದ ವಚನಾನಂದ ಮಹಾಸ್ವಾಮೀಜಿ, ಮಲೆ ಮಹದೇಶ್ವರಬೆಟ್ಟ ಸಾಲೂರು ಮಠದ ಡಾ.ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ವಿರಕ್ತ ಮಠದ ಇಮ್ಮಡಿ ಉದ್ಧಾನ ಸ್ವಾಮೀಜಿ ಭಾಗವಹಿಸಲಿದ್ದಾರೆ. ಲೇಸರ್ ಶೋ ಹಾಗೂ ರಸಸಂಜೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು. ಪತ್ರಿಕಾ ಗೋಷ್ಠಿಯಲ್ಲಿ ಯುವ ಬ್ರಿಗೇಡ್‌ನ ಮಹದೇವ, ರವಿ, ಚಂದನ್ ಉಪಸ್ಥಿತರಿದ್ದರು.

ಬೈಕಿಗೆ ಟ್ರಾಕ್ಟರ್ ಡಿಕ್ಕಿ: ತಂದೆ ಸಾವು, ಮಗನಿಗೆ ತೀವ್ರ ಗಾಯ



ಲೋಕೇಶ್

ಹುಣಸೂರು, ಡಿ.11– ಬೈಕಿಗೆ ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕಿನಲ್ಲಿ ತೆರಳುತ್ತಿದ್ದ ತಂದೆ ಸ್ಥಳದಲ್ಲೇ ಮೃತಪಟ್ಟರೆ, ಪುತ್ರ ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹಿಂಡಗೂಡ್ಲು ಗ್ರಾಮದಲ್ಲಿ ಇಂದು ಸಂಜೆ ಸಂಭವಿಸಿದೆ.

ಹಿಂಡಗೂಡ್ಲು ಗ್ರಾಮದ ವರದೇಗೌಡರ ಮಗ ಲೋಕೇಶ್ (47) ಅಪಘಾತದಲ್ಲಿ ಮೃತಪಟ್ಟರೆ, ಇವರ ಮಗ ನಿತೀಶ್ ಗೌಡ(10) ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಲೋಕೇಶ್ ಬೈಕ್‌ನಲ್ಲಿ ಮಗನೊಂದಿಗೆ ಗ್ರಾಮದ ಕಡೆಗೆ ಬರುವಾಗ ಶುಂಠಿ ತುಂಬಿಕೊಂಡು ಹನಗೋಡಿಗೆ ಹೋಗುತ್ತಿದ್ದ ಟ್ರಾಕ್ಟರ್ ಇವರ ಬೈಕ್‌ಗೆ ಡಿಕ್ಕಿ ಹೊಡೆದು ದುರಂತ ಸಂಭವಿಸಿದೆ. ಅಪಘಾತದ ನಂತರ ಚಾಲಕ ಟ್ರಾಕ್ಟರ್ ಬಿಟ್ಟು ಪರಾರಿಯಾಗಿದ್ದಾನೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಟ್ರಾಕ್ಟರ್ ಮತ್ತು ಬೈಕ್ ವಶಪಡಿಸಿಕೊಂಡು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.



ಮೈಸೂರು ಮಾರುಕಟ್ಟೆಗೆ ಲಗ್ಗೆಯಿಟ್ಟ ನಾಗ್ಪುರ ಕಿತ್ತಳೆ

ಕೆಜಿಗೆ ಚಿಲ್ಲರೆ ಮಾರುಕಟ್ಟೆಯಲ್ಲಿ 50ರಿಂದ 60 ರೂ. ಇದ್ದರೆ, ಸಗಟು ಮಾರುಕಟ್ಟೆಯಲ್ಲಿ 45 ರೂ.

ಮೈಸೂರು,ಡಿ.11(ಪಿಎಂ)– ಮಹಾರಾಷ್ಟ್ರದ ನಾಗ್ಪುರ ವ್ಯಾಪ್ತಿಯ ವಿವಿಧ ಪ್ರದೇಶದಲ್ಲಿ ಬೆಳೆದಿರುವ ಕಿತ್ತಳೆ ಹಣ್ಣುಗಳು ಮೈಸೂರಿನ ಮಾರುಕಟ್ಟೆಗೆ ಲಗ್ಗೆಯಿಟ್ಟಿದ್ದು, ಚಿಲ್ಲರೆ ಮಾರಾಟದಲ್ಲಿ ಕೆಜಿಗೆ 50ರಿಂದ 60 ರೂ.ವರೆಗೆ ಹಣ್ಣುಗಳ ಮಾರಾಟ ನಡೆಯುತ್ತಿದೆ.

ಮೈಸೂರಿನ ಬಂಬೂ ಬಜಾರ್‌ನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಎಪಿಎಂಸಿ ಸಬ್ ಯಾರ್ಡ್‌ಗೆ (ಹಣ್ಣಿನ ಮಾರುಕಟ್ಟೆ) ನಾಗ್ಪುರದ ಕಿತ್ತಳೆ ಹಣ್ಣುಗಳು ಪೂರೈಕೆಯಾಗುತ್ತಿವೆ. ಸಗಟು ದರದಲ್ಲಿ ಇಲ್ಲಿನ ವ್ಯಾಪಾರಿಗಳಿಂದ ದೇವರಾಜ ಮಾರುಕಟ್ಟೆ ವ್ಯಾಪಾರಿಗಳು ಸೇರಿದಂತೆ ನಗರದ ವಿವಿಧ ಭಾಗಗಳ ವ್ಯಾಪಾರಿಗಳು ಖರೀದಿಸಿ, ಚಿಲ್ಲರೆ ದರದಲ್ಲಿ ಕೆಜಿಗೆ 50ರಿಂದ 60 ರೂ.ವರೆಗೆ ಮಾರಾಟ ಮಾಡುತ್ತಿದ್ದಾರೆ.

ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತಿರುವ ಕಾರಣ ಕಿತ್ತಳೆ ಹಣ್ಣಿನ ಬೆಲೆಯಲ್ಲಿ ಇಳಿಕೆಯಾಗಿದ್ದು, ಕಳೆದ ವರ್ಷ ಇದೇ ವೇಳೆಗೆ ಗರಿಷ್ಠ 70 ರೂ.ವರೆಗೆ ಕೆಜಿ ಕಿತ್ತಳೆ ಚಿಲ್ಲರೆ ದರದಲ್ಲಿ ಮಾರಾಟವಾಗುತ್ತಿತ್ತು. ಆದರೆ ಈ ಬಾರಿ ಗರಿಷ್ಠ 60 ರೂ.ವರೆಗೆ ಕಿತ್ತಳೆ ಚಿಲ್ಲರೆ ದರದಲ್ಲಿ ಬೆಲೆ ಕಾಯ್ದುಕೊಂಡಿದೆ. ಹಿಂದಿನಿಂದಲೂ ಕಿತ್ತಳೆ ಹಣ್ಣಿನ ಕೃಷಿಗೆ ಮಹಾರಾಷ್ಟ್ರದ ನಾಗ್ಪುರ ವ್ಯಾಪ್ತಿಯು ಹೆಸರುವಾಸಿಯಾಗಿದೆ. ಇಲ್ಲಿ ಕಳೆದ ವರ್ಷದಂತೆ ಈ ಬಾರಿಯೂ ಭರ್ಜರಿ ಫಸಲು ಬಂದಿದ್ದು, ಹೀಗಾಗಿ ಬೆಲೆ ಇಳಿಕೆಯಾಗಿರುವ ಕಾರಣ ಹಣ್ಣುಗಳ ಖರೀದಿ ಪ್ರಮಾಣ ಹೆಚ್ಚಾಗಿದೆ.

ಈ ಹಿಂದೆ ಕೊಡಗು ಜಿಲ್ಲೆಯಿಂದಲೂ ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಿತ್ತಳೆ ಪೂರೈಕೆಯಾಗುತ್ತಿತ್ತು. ಆದರೆ ಕೆಲ ವರ್ಷಗಳಿಂದ ಕೊಡಗಿನಲ್ಲಿ ಕಿತ್ತಳೆ ಫಸಲಿನಲ್ಲಿ ಇಳಿಕೆಯಾಗಿದೆ. ಹೀಗಾಗಿ ಕೊಡಗು ಕಿತ್ತಳೆಯ ಪೂರೈಕೆಯೂ ಇಳಿಕೆಯಾಗಿದೆ. ರೋಗಬಾಧೆ, ಹವಾಮಾನ ವೈಪರೀತ್ಯ ಸೇರಿದಂತೆ ವಿವಿಧ ಕಾರಣಗಳಿಗೆ ಕೊಡಗು ಜಿಲ್ಲೆಯಲ್ಲಿ ಕಿತ್ತಳೆ ಬೆಳೆಯುವುದು ಕಡಿಮೆಯಾಗಿದೆ. ತನ್ನದೇ ವಿಶೇಷ ರುಚಿಗೆ ಹೆಸರಾಗಿದ್ದ ಕೊಡಗು ಕಿತ್ತಳೆ ಜಾಗವೀಗ ನಾಗ್ಪುರ ಕಿತ್ತಳೆಯ ಪಾಲಾಗಿದೆ.

ಮೈಸೂರಿನ ಎಪಿಎಂಸಿ ಸಬ್ ಯಾರ್ಡ್‌ನ ಹಣ್ಣಿನ ವ್ಯಾಪಾರಿ ಇಲಿಯಾಜ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಿತ್ತಳೆ ಹಣ್ಣಿನ ದರವು ಭಾನುವಾರ ಮತ್ತು ಶನಿವಾರ ಸ್ವಲ್ಪ ಹೆಚ್ಚಿತ್ತು. ಸೋಮವಾರದಿಂದ ಇಳಿಕೆಯಾಗಿದ್ದು, ಕೆಜಿಗೆ ಸಗಟು ದರದಲ್ಲಿ 45 ರೂ. ಇದೆ. ಚಿಲ್ಲರೆ ವ್ಯಾಪಾರಿಗಳು ಇದೇ ಮಾರುಕಟ್ಟೆಯಿಂದ ಕಿತ್ತಳೆ ಸೇರಿದಂತೆ ಹಣ್ಣುಗಳನ್ನು ಖರೀದಿಸುತ್ತಾರೆ. ನಾಗ್ಪುರದಿಂದ ನಮ್ಮ ಮಾರುಕಟ್ಟೆಗೆ ಕಿತ್ತಲೆ ಹಣ್ಣುಗಳು ನಿತ್ಯ ಪೂರೈಕೆಯಾಗುತ್ತಿವೆ ಎಂದು ತಿಳಿಸಿದರು.

ನಾಗ್ಪುರ ಕಿತ್ತಳೆಯ ಫಸಲು ಉತ್ತಮವಾಗಿ ಬಂದಿದ್ದು, ಕೆಲ ದಿನಗಳಲ್ಲಿ ಈ ಫಸಲಿನ ಪೂರೈಕೆ ಮುಕ್ತಾಯವಾಗಲಿದ್ದು, ಮತ್ತೊಂದು ಫಸಲಿನ ಪೂರೈಕೆ ಆರಂಭವಾಗಲಿದೆ. ಮೈಸೂರಿನ ಎಪಿಎಂಸಿ ಸಬ್ ಯಾರ್ಡ್‌ಗೆ ಬರುವುದೆಲ್ಲಾ ಬಹುತೇಕ ನಾಗ್ಪುರದ ಕಿತ್ತಳೆಯೇ ಆಗಿವೆ. ಪ್ರತಿವರ್ಷ ನಾಗ್ಪುರದಿಂದಲೇ ಹೆಚ್ಚು ಬರುತ್ತಿದ್ದು, ಕೊಡಗು ಜಿಲ್ಲೆಯಿಂದ ಪೂರೈಕೆಯಾಗುವುದು ತೀರ ಕಡಿಮೆ. ಅಕ್ಟೋಬರ್–ನವೆಂಬರ್‌ನಲ್ಲಿ ಪೂರೈಕೆ ಇನ್ನೂ ಹೆಚ್ಚಿತ್ತು. ಹಾಗಾಗಿ ಆಗ ಬೆಲೆಯಲ್ಲಿ ಇನ್ನೂ ಕಡಿಮೆಯೇ ಇತ್ತು. ಸಗಟು ದರದಲ್ಲಿ ಕೆಜಿಗೆ 30 ರೂ. ಇತ್ತು ಎಂದು ವಿವರಿಸಿದರು.

ಈಗ ಅಕ್ಟೋಬರ್–ನವೆಂಬರ್‌ಗಿಂತ ಪೂರೈಕೆ ಇಳಿಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಸ್ವಲ್ಪ ಬೆಲೆ ಹೆಚ್ಚಾಗಿದೆ. ಕೆಜಿಗೆ 40ರಿಂದ 45 ರೂ.ವರೆಗೆ ಸಗಟು ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಇಲ್ಲಿಂದ ಸಗಟು ದರದಲ್ಲಿ ಖರೀದಿ ಮಾಡುವವರು ಚಿಲ್ಲರೆ ದರದಲ್ಲಿ ಕೆಜಿಗೆ 60 ರೂ.ವರೆಗೆ ಮಾರಾಟ ಮಾಡುತ್ತಿದ್ದಾರೆ. ಪೂರೈಕೆ ಕಡಿಮೆಯಾಗುತ್ತಿದ್ದಂತೆ ಬೆಲೆ ಹೆಚ್ಚಳವಾಗಲಿದ್ದು, ಮುಂದಿನ ದಿನಗಳಲ್ಲಿ ಸಗಟು ದರವೇ 60 ರೂ. ಆಗುವ ಸಾಧ್ಯತೆ ಇದೆ. ನಾವು ಕ್ರೇಟ್ ಲೆಕ್ಕದಲ್ಲಿ ಖರೀದಿ ಮಾಡುತ್ತೇವೆ. ಕ್ರೇಟ್ (20 ಕೆಜಿ) ಕಿತ್ತಳೆಗೆ 800 ರೂ. ಇದೆ ಎಂದು ಹೇಳಿದರು.

ದೇವರಾಜ ಮಾರುಕಟ್ಟೆ ಹಣ್ಣಿನ ವ್ಯಾಪಾರಿ ಮುಫೀಜ್ ಖಾನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಿತ್ತಳೆ ಹಣ್ಣು ಕೆಜಿಗೆ 50 ರೂ. ಇದೆ. ಎಪಿಎಂಸಿ ಸಬ್ ಯಾರ್ಡ್‌ಗೆ ನಾಗ್ಪುರದಿಂದ ಕಿತ್ತಳೆ ಹಣ್ಣು ಪೂರೈಕೆಯಾಗುತ್ತಿದ್ದು, ಅಲ್ಲಿಂದ ಸಗಟು ದರದಲ್ಲಿ ಖರೀದಿಸಿ ನಾವು ಚಿಲ್ಲರೆ ದರದಲ್ಲಿ ಮಾರಾಟ ಮಾಡುತ್ತೇವೆ. ಕೊಡಗು ಜಿಲ್ಲೆಯಿಂದಲೂ ಕಿತ್ತಳೆ ಪೂರೈಕೆಯಾಗುತ್ತದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ನಾಗ್ಪುರ ಕಿತ್ತಳೆಯೇ ಪೂರೈಕೆಯಾಗುತ್ತಿದೆ ಎಂದು ತಿಳಿಸಿದರು.



ಮೈಸೂರಿನ ಸರಸ್ವತಿಪುರಂನ ಹಣ್ಣಿನ ಮಳಿಗೆಯೊಂದರಲ್ಲಿ ಖರೀದಿಗಾಗಿ ಕಿತ್ತಳೆ ಆಯ್ದುಕೊಳ್ಳುತ್ತಿರುವ ಗ್ರಾಹಕರೊಬ್ಬರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ನಾ ನಿನ್ನ ಬಿಡಲಾರೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಬಘೀರ (ಕ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.9.45ಕ್ಕೆ, ಮ.1.45ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ಪುಷ್ಪಾ 2 (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಮೋನಾ 2 (3ಡಿ)(ಇಂ): ಬೆ.11ಕ್ಕೆ, ಮ.3.45ಕ್ಕೆ, ಸಂ.6ಕ್ಕೆ, ಸೋಲೋ ಲೀವಿಂಗ್ ರಿವಾಕ್ (ಜ): ಮ.1.10ಕ್ಕೆ, ಪುಷ್ಪಾ 2 (ತೆ): ರಾ.8.10ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.25ಕ್ಕೆ, ಭೈರತಿ ರಣಗಲ್ (ಕ): ಮ.1.05ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.15ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.10ಕ್ಕೆ, ಮ.2.10ಕ್ಕೆ, ಸಂ.6.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಜ್ಯ ಸರ್ಕಾರದಿಂದ ವಯನಾಡಿನಲ್ಲಿ 100 ಮನೆ ನಿರ್ಮಾಣ

ಕೇರಳಕ್ಕೆ ಉಪಕಾರಿ, ಕರ್ನಾಟಕಕ್ಕೆ ಮಾರಿ: ಸಿಎಂ ವಿರುದ್ಧ ಅಶೋಕ್ ಆಕ್ರೋಶ

ಬೆಂಗಳೂರು, ಡಿ. 11– ವಯನಾಡು ಪುನರ್ವಸತಿ ಯೋಜನೆಯ ಭಾಗವಾಗಿ 100 ಮನೆಗಳನ್ನು ಕಟ್ಟಿಸಿಕೊಡುವುದಾಗಿ ಕರ್ನಾಟಕ ಸರ್ಕಾರ ತಿಳಿಸಿತ್ತು. ಆದರೆ ಕೇರಳ ಸರ್ಕಾರದಿಂದ ಇದುವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ ಸಿಎಂ ಸಿದ್ದರಾಮಯ್ಯ ಇದೀಗ ಮತ್ತೊಮ್ಮೆ ಕೇರಳ ಸಿಎಂ ಪಿಣರಾಯಿ ವಿಜಯನ್‌ಗೆ ಪತ್ರ ಬರೆದಿದ್ದಾರೆ. ಸದ್ಯ ಈ ವಿಚಾರವಾಗಿ ವಿರೋಧ ವ್ಯಕ್ತವಾಗಿದ್ದು, 'ಕೇರಳಕ್ಕೆ ಉಪಕಾರಿ, ಕರ್ನಾಟಕಕ್ಕೆ ಮಾರಿ' ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಆರ್. ಅಶೋಕ್

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಕೇರಳಕ್ಕೆ ಉಪಕಾರಿ, ಕರ್ನಾಟಕಕ್ಕೆ ಮಾರಿ' ಭ್ರಷ್ಟಾಚಾರದ ಕಳಂಕ ಮೆತ್ತಿಕೊಂಡು, ಭಂಡತನದಿಂದ ಖುರ್ಚಿ ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಸಿಎಂ ಸಿದ್ದರಾಮಯ್ಯನವರ ಸರ್ಕಾರ, ಹೈಕಮಾಂಡ್ ನಾಯಕರನ್ನು ಮೆಚ್ಚಿಸಲು ಕನ್ನಡಿಗರ ತೆರಿಗೆ ಹಣವನ್ನು ಪೋಲು ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ. ಅಕಾಲಿಕ ಮಳೆಯಿಂದ ಬೆಳೆ ಹಾನಿಗೊಳಗಾಗಿ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ಕೊಡಲು ಹಣವಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಕಳಪೆ ಔಷಧಿಯಿಂದ ಸಾವನ್ನಪ್ಪಿರುವ ಬಾಣಂತಿ ಮಹಿಳೆಯರ ಕುಟುಂಬಗಳಿಗೆ ಪರಿಹಾರ ಕೊಟ್ಟಿಲ್ಲ. ಬೆಂಗಳೂರಿನ ಉದ್ದಗಲಕ್ಕೂ ಬಾಯ್ತೆರೆದಿರುವ ರಸ್ತೆಗುಂಡಿ ಮುಚ್ಚಲು ಹಣವಿಲ್ಲ. ಆದರೆ ಹೈಕಮಾಂಡ್ ನಾಯಕರನ್ನು ಓಲೈಸಲು ಕೇರಳದಲ್ಲಿ ಮನೆ ನಿರ್ಮಿಸಿಕೊಡಲು ಹೊರಟಿದೆ ಈ ಕಾಂಗ್ರೆಸ್ ಸರ್ಕಾರ ಎಂದಿದ್ದಾರೆ.

ಸಿಎಂ ಸಿದ್ದರಾಮಯ್ಯ ಬರೆದ ಪತ್ರದಲ್ಲೇನಿದೆ: ಭೂಕುಸಿತದ ಘಟನೆಯ ನಂತರ ನಾನು ವಯನಾಡಿಗೆ ಭೇಟಿ ನೀಡಿದಾಗ, ಸಂತ್ರಸ್ತ ಕುಟುಂಬಗಳಿಗೆ 100 ಮನೆಗಳನ್ನು ಕಟ್ಟಿಸಿಕೊಡುವುದಾಗಿ ನಮ್ಮ ಸರ್ಕಾರದ ಬದ್ಧತೆಯನ್ನು ನಾನು ಘೋಷಿಸಿದ್ದೇನೆ ಎಂದು ದಯವಿಟ್ಟು ನೆನಪಿಸಿಕೊಳ್ಳಿ. ಈ ಉಪಕ್ರಮವು ತಮ್ಮ ಮನೆಗಳು, ಜೀವನೋಪಾಯಗಳು ಮತ್ತು ಆತ್ಮೀಯರನ್ನು ಕಳೆದುಕೊಂಡವರಿಗೆ ಸುರಕ್ಷಿತ ಹಾಗೂ ಸ್ಥಿರವಾದ ವಾತಾವರಣವನ್ನು ಒದಗಿಸುವ ಉದ್ದೇಶವಾಗಿದೆ.

ಈ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಾದ ಮಾರ್ಗಸೂಚಿಗಳು ಅಥವಾ ನಿರ್ದೇಶನಗಳ ಬಗ್ಗೆ ಕೇರಳ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈ ಉಪಕ್ರಮವನ್ನು ಸುಲಭಗೊಳಿಸಲು, ಸಂತ್ರಸ್ತ ಕುಟುಂಬಗಳಿಗೆ ಪರಿಹಾರವನ್ನು ಒದಗಿಸುವಲ್ಲಿ ತ್ವರಿತ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು, ಮನೆಗಳನ್ನು ನಿರ್ಮಿಸಲು ಅಗತ್ಯವಿರುವ ಭೂಮಿಯನ್ನು ಖರೀದಿಸಲು ನಮ್ಮ ಸರ್ಕಾರ ಸಿದ್ಧವಾಗಿದೆ ಎಂದು ತಿಳಿಸಲು ಬಯಸುವುದಾಗಿ ಸಿದ್ದರಾಮಯ್ಯ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಆಲೂರು ಜಂಕ್ಷನ್‌ನಲ್ಲಿ ರೈಲು ನಿಲುಗಡೆ ರದ್ದು; ಜನರ ಆಕ್ರೋಶ

ಹಾಸನ, ಡಿ.11– ಹಾಸನ ಜಂಕ್ಷನ್‌ನಿಂದ 12 ಕಿ.ಮೀ ದೂರದಲ್ಲಿರುವ ಆಲೂರು ಜಂಕ್ಷನ್‌ನಲ್ಲಿ ಆದಾಯ ನಷ್ಟದ ಕಾರಣ ನೀಡಿ ರೈಲುಗಳ ನಿಲುಗಡೆ ರದ್ದುಗೊಳಿಸಿರುವ ನೈರುತ್ಯ ರೈಲ್ವೆ ನಿರ್ಧಾರದ ವಿರುದ್ಧ ವಿವಿಧ ಸಂಘಟನೆಗಳ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿ.4 ರಿಂದ ಎಲ್ಲಾ ರೈಲುಗಳ ನಿಲುಗಡೆ ರದ್ದುಗೊಳಿಸಿದ ನೈರುತ್ಯ ರೈಲ್ವೆ ಅಧಿಕಾರಿಗಳ ಹಠಾತ್ ನಿರ್ಧಾರದಿಂದ ಸ್ಥಳೀಯರು ಮತ್ತು ವ್ಯಾಪಾರ ವರ್ಗ ಆತಂಕಗೊಂಡಿದೆ. ಅಧಿಕಾರಿಗಳು ತಮ್ಮ ನಿರ್ಧಾರವನ್ನು ಮರು ಪರಿಶೀಲಿಸದಿದ್ದಲ್ಲಿ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದು ರಾಧಮ್ಮ ಸೇವಾ ಟ್ರಸ್ಟ್ ಅಧ್ಯಕ್ಷ ಹೇಮಂತ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ರೈಲ್ವೆ ಇಲಾಖೆ ಒಂದು ತಿಂಗಳಿಗೆ 50,000 ಆದಾಯವನ್ನು ನಿರೀಕ್ಷಿಸಿತ್ತು. ಆದರೆ, ಸಂಗ್ರಹವು ತುಂಬಾ ಕಳಪೆಯಾಗಿದೆ. 10,000 ಕೂಡ ದಾಟುತ್ತಿರಲಿಲ್ಲ ಎಂದು ಮೂಲಗಳು ತಿಳಿಸಿವೆ. ದಶಕದ ಹಿಂದೆ ನಿರ್ಮಿಸಿದ ಆಲೂರು ಜಂಕ್ಷನ್ ಬಗ್ಗೆ ರೈಲ್ವೆ ಅಧಿಕಾರಿಗಳು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ ಎನ್ನುತ್ತಾರೆ ಸ್ಥಳೀಯರು.

ಆಲೂರು ಮತ್ತು ಅಕ್ಕಪಕ್ಕದ ಗ್ರಾಮಗಳ ಜನರು ರೈಲು ಸೇವೆ ಪಡೆಯಲು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹಾಸನಕ್ಕೆ ತೆರಳಬೇಕು. ಅದೇ ರೀತಿ ಹಾಸನ ಜಂಕ್ಷನ್‌ನಲ್ಲಿ ಇಳಿದು ತಮ್ಮ ಊರುಗಳಿಗೆ ತೆರಳಲು ವಾಹನಗಳನ್ನೇ ಅವಲಂಬಿಸಬೇಕಾಗಿದೆ. ರಾತ್ರಿ ವೇಳೆ ಆಲೂರಿಗೆ ವಾಹನಗಳು ಸಿಗದ ಕಾರಣ ರಾತ್ರಿ ರೈಲುಗಳಲ್ಲಿ ಹಾಸನ ಜಂಕ್ಷನ್‌ಗೆ ಬಂದ ಪ್ರಯಾಣಿಕರು ಹಾಸನ ಜಂಕ್ಷನ್‌ನಲ್ಲಿ ರಾತ್ರಿ ಕಳೆಯಬೇಕಾದ ಅನಿವಾರ್ಯತೆ ಎದುರಾಗಿದೆ. ರೈಲ್ವೆ ಇಲಾಖೆಯು ಆಲೂರು ಜಂಕ್ಷನ್‌ನ ನೌಕರರಿಗೆ ಸಂಬಳ ಮತ್ತು ಸೌಲಭ್ಯಗಳಿಗಾಗಿ ಲಕ್ಷಗಳನ್ನು ಖರ್ಚು ಮಾಡುತ್ತಿದೆ ಎಂದು ಹೇಮಂತ್ ಕುಮಾರ್ ಹೇಳಿದರು.

ಈ ಸಂಬಂಧ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಸೋಮಣ್ಣ ಅವರೊಂದಿಗೆ ಮಾತುಕತೆ ನಡೆಸುವುದಾಗಿ ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಹೇಳಿದರು.

ಸಂಶೋಧನೆಯಿಂದ ಮಾತ್ರ ರಸಾಯನಶಾಸ್ತ್ರದ ರಹಸ್ಯ ತಿಳಿಯಲು ಸಾಧ್ಯ



'ಯೂಸುಫ್ ಹಮೀದ್ ಕೆಮಿಸ್ಟ್ರಿ ಕ್ಯಾಂಪ್'ನ ಸಮಾರೋಪದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಡೀನ್ ಡಾ.ವಿಶಾಲ್ ಕುಮಾರ್ ಗುಪ್ತಾ ಮಾತನಾಡಿದರು.

ಮೈಸೂರು, ಡಿ.11(ಎಂಕೆ)– ರಸಾಯನಶಾಸ್ತ್ರ(ಕೆಮಿಸ್ಟ್ರಿ)ವೆಂಬುದೇ ಒಂದು ರಹಸ್ಯ. ನಿರಂತರ ಹಾಗೂ ಪ್ರಾಮಾಣಿಕ ಸಂಶೋಧನೆಯಿಂದ ಮಾತ್ರವೇ ರಸಾಯನಶಾಸ್ತ್ರದಲ್ಲಿನ ರಹಸ್ಯ ತಿಳಿಯಲು ಸಾಧ್ಯ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಡೀನ್ ಡಾ.ವಿಶಾಲ್ ಕುಮಾರ್ ಗುಪ್ತಾ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ವತಿಯಿಂದ ಹಮ್ಮಿಕೊಂಡಿದ್ದ ಮೂರು ದಿನಗಳ 'ಯೂಸುಫ್ ಹಮೀದ್ ಕೆಮಿಸ್ಟ್ರಿ ಕ್ಯಾಂಪ್'ನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದಲ್ಲಿ ರಸಾಯನಶಾಸ್ತ್ರದಲ್ಲಿ ಹೆಚ್ಚೆಚ್ಚು ಸಂಶೋಧನೆಗಳಾಗಬೇಕಿದೆ. ಈ ನಿಟ್ಟಿನಲ್ಲಿ ಮಾರ್ಗದರ್ಶಕರ ಅನುಭವದೊಂದಿಗೆ ಜಾಗೃತಿಯಿಂದ ಸಂಶೋಧನೆ ನಡೆಸುವಂತೆ ಕಿವಿಮಾತು ಹೇಳಿದರು.

ಏಡ್ಸ್ ಸೋಂಕಿತರಿಗೆ ಅಗತ್ಯವಿರುವ ಔಷಧಿ ಗಳನ್ನು 6 ಸಾವಿರ ರೂ.ನಿಂದ 60 ರೂ.ಗೆ ಇಳಿಸಿದ ಕೀರ್ತಿ ಯೂಸುಫ್ ಹಮೀದ್ ಅವರದ್ದಾಗಿದೆ. ಅವರ ಸಂಶೋಧನೆಯಿಂದ ಸಾಕಷ್ಟು ಬಡ ದೇಶಗಳಲ್ಲಿ ಏಡ್ಸ್ ಸೋಂಕಿತರು ಕಡಿಮೆ ಖರ್ಚಿನಲ್ಲಿ ಔಷಧಿಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಅವರ ಹೆಸರಿನಲ್ಲಿ ಶಿಬಿರ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಮಿಸ್ಟ್ರಿ ಎಂಬುದೇ ಒಂದು ಮಿಸ್ಟ್ರಿ. ಇದೊಂದು ಅದ್ಭುತ ವಿಷಯವಾಗಿದೆ. ಆದರೆ, ಯಾವ ರೀತಿಯಲ್ಲಿ ಬೋಧನೆ ಮತ್ತು ಪ್ರಯೋಗಗಳು ಹೇಗೆ ನಡೆಯುತ್ತೇವೆ ಎಂಬುದರ ಮೇಲೆ ರಸಾಯನಶಾಸ್ತ್ರದ ಕಲಿಕೆ ನಿರ್ಧಾರಿತವಾಗಲಿದೆ. ಶಾಲಾ ಮಕ್ಕಳು ಸೇರಿದಂತೆ ಬಹುತೇಕರು ಬಳಸುವ ಪೆನ್ಸಿಲ್ ರಸಾಯನ ವಸ್ತುವಾದರೂ ಅದರಿಂದ ಯಾವುದೇ ತೊಂದರೆಯಾಗದಂತೆ ತಯಾರಿಸಲಾಗಿದೆ. ಡ್ರೈ ಕ್ಲೀನಿಂಗ್ ವಿಧಾನವೂ ಕೂಡ ರಸಾಯನಶಾಸ್ತ್ರದ ಒಂದು ಪ್ರಕ್ರಿಯೆಯಾಗಿದೆ ಎಂದು ಮಾಹಿತಿ ನೀಡಿದರು.

ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್, ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿಯ ಕಾರ್ಯಕ್ರಮ ಕಾರ್ಯನಿರ್ವಾಹಕಿ ಮೆಲಿಸ್ಸಾ ಮೆಂಡೋನ್ಸಾ, ಪ್ರೊ.ಬಿ.ಎಂ. ಗುರುಪಾದಯ್ಯ, ಮತ್ತಿತರರಿದ್ದರು.

ಬಸ್‌ನಲ್ಲಿ ಮಹಿಳೆಯ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಡಿ.11(ಎಂಕೆ)– ಬ್ಯಾಂಕ್ ಲಾಕರ್‌ನಲ್ಲಿಡಲು ಚಿನ್ನಾಭರಣ ತೆಗೆದುಕೊಂಡು ಬಸ್‌ನಲ್ಲಿ ತೆರಳುವಾಗ ಕಳ್ಳತನವಾಗಿರುವ ಕುರಿತು ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ರಾಮಕೃಷ್ಣನಗರದ ನಿವಾಸಿ ಮಾಲಿನಿ(70) ಎಂಬುವರು, ಮಂಗಳವಾರ ಮಧ್ಯಾಹ್ನ ನಜರ್‌ಬಾದ್ ಕಡೆಗೆ ಬಸ್ ಮೂಲಕ ತೆರಳುವಾಗ ಹಾರ್ಡಿಂಜ್ ವೃತ್ತದ ಬಳಿ ಬಸ್‌ನಿಂದ ಇಳಿದು, ಸ್ವಲ್ಪ ದೂರ ನಡೆದುಕೊಂಡು ಹೋಗುತ್ತಿದ್ದಾಗ ಚಿನ್ನಾಭರಣವಿದ್ದ ಬ್ಯಾಗ್‌ನ ಜಿಪ್ ತೆರೆದಿರುವುದು ಕಂಡುಬಂದಿದೆ. ಲಕ್ಷಾಂತರ ಮೌಲ್ಯದ ಚಿನ್ನದ ಬಳೆ, ವಜ್ರದ ಬಳೆ, ಉಂಗುರಗಳು, ಸರಗಳು ಕಳ್ಳತನವಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕಲುಷಿತ ನೀರು ಪೂರೈಕೆ

ಮೈಸೂರಲ್ಲಿ 193 ಮಂದಿಗೆ ವಾಂತಿ ಭೇದಿ; ಒಂದು ಕಾಲರಾ ಪ್ರಕರಣ ಪತ್ತೆ

● ಆರೋಗ್ಯ ಇಲಾಖೆ ತ್ವರಿತ ಕ್ರಮದಿಂದ ಎಲ್ಲರೂ ಗುಣಮುಖ ● ಡಿ.4ರಿಂದ 10ರವರೆಗೆ ಕಾಣಿಸಿಕೊಂಡಿದ್ದ ಪ್ರಕರಣಗಳು

ಮೈಸೂರು, ಡಿ.11(ಪಿಎಂ)– ಶಾಂತಿನಗರ, ಗೌಸಿಯಾನಗರ ಮತ್ತು ರಾಜೀವ್ ನಗರ ಒಳಗೊಂಡಂತೆ 193 ಮಂದಿಯಲ್ಲಿ ಕಾಣಿಸಿಕೊಂಡಿದ್ದ ವಾಂತಿ–ಭೇದಿ ಪ್ರಕರಣಗಳ ಪೈಕಿ ಬಾಲಕಿಯೊಬ್ಬಳಲ್ಲಿ ಕಾಲರಾ ದೃಢಪಟ್ಟಿದೆ.

ಡಿ.4ರಂದು ಮೈಸೂರಿನ ಶಾಂತಿನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಶಾಂತಿನಗರ, ಗೌಸಿಯಾನಗರ ಮತ್ತು ರಾಜೀವ್‌ನಗರದಲ್ಲಿ ವಾಂತಿ ಭೇದಿ ಪ್ರಕರಣಗಳು ಉಲ್ಬಣಗೊಂಡಿದ್ದವು. ಅಂದಿನಿಂದ ಡಿ.10ರವರೆಗೆ 33 ಮಕ್ಕಳು ಹಾಗೂ 160 ಮಂದಿ ವಯಸ್ಕರು ಸೇರಿದಂತೆ ಒಟ್ಟು 193 ಮಂದಿಯಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿತ್ತು.

ಡಿ.4ರಂದು 18 ಮಂದಿಯಲ್ಲಿ ವಾಂತಿ ಭೇದಿ ಕಾಣಿಸಿಕೊಂಡಿತ್ತು. ಅಂತೆಯೇ ಡಿ.5ರಂದು 32, ಡಿ.6ರಂದು 25, ಡಿ.7ರಂದು 28, ಡಿ.8ರಂದು 17, ಡಿ.9ರಂದು 39 ಹಾಗೂ ಡಿ.10ರಂದು 34 ವಾಂತಿ ಭೇದಿ ಪ್ರಕರಣಗಳು ಪತ್ತೆಯಾಗಿದ್ದವು. ಆರೋಗ್ಯ ಇಲಾಖೆ ತ್ವರಿತ ಕ್ರಮ ವಹಿಸಿ ಎಲ್ಲರನ್ನು ಚಿಕಿತ್ಸೆಗೆ ಒಳಪಡಿಸಿದ್ದು, ಇದೀಗ ಎಲ್ಲರೂ ಗುಣಮುಖರಾಗಿದ್ದಾರೆ. ಅದಾಗ್ಯೂ ಆರೋಗ್ಯ ಇಲಾಖೆ ಸಿಬ್ಬಂದಿಯಿಂದ ಮನೆ ಮನೆ ಸಮೀಕ್ಷೆ ಹಾಗೂ ಜಾಗೃತಿ ಮೂಡಿಸುವುದು ಮುಂದುವರೆದಿದೆ.



ವಾಂತಿ ಭೇದಿ ಪ್ರಕರಣಗಳು ಕಾಣಿಸಿಕೊಂಡಿದ್ದ ಮೈಸೂರಿನ ಶಾಂತಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬುಧವಾರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಮುನೀಂದ್ರಮ್ಮ ನೇತೃತ್ವದಲ್ಲಿ ಶಾಂತಿನಗರ ಆರೋಗ್ಯ ಸಿಬ್ಬಂದಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

193 ಮಂದಿ ಪೈಕಿ 10 ಮಂದಿಯ ಮಲದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ರಾಜೀವ್‌ನಗರದ 8 ವರ್ಷದ ಬಾಲಕಿಯ ಮಲದ ಪರೀಕ್ಷೆಯಲ್ಲಿ ಕಾಲರಾ ದೃಢಪಟ್ಟಿದ್ದು, ಇನ್ನು ಐವರ ಮಲದ ಪರೀಕ್ಷೆಯ ಫಲಿತಾಂಶ ನಿರೀಕ್ಷೆಯಲ್ಲಿದೆ. ಎಲ್ಲರೂ ಗುಣಮುಖರಾಗಿರುವ ಹಿನ್ನೆಲೆಯಲ್ಲಿ ಉಳಿದ ಮಲದ ಮಾದರಿಯ ಫಲಿತಾಂಶದಲ್ಲಿ ಕಾಲರಾ ದೃಢಪಟ್ಟರೂ ಯಾವುದೇ ಆತಂಕವಿಲ್ಲ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಹೆಚ್ಚು ಪ್ರಕರಣಗಳು ಕಾಣಿಸಿಕೊಂಡ ಶಾಂತಿನಗರದ 3ನೇ, 4ನೇ, 5ನೇ, 6ನೇ ಹಾಗೂ 12ನೇ ಕ್ರಾಸ್, ಗೌಸಿಯಾನಗರದ ಸಿ ಬ್ಲಾಕ್ 3ನೇ ಮತ್ತು 8ನೇ ಕ್ರಾಸ್, ರಾಜೀವ್‌ನಗರ 1ನೇ ಮತ್ತು 4ನೇ ಕ್ರಾಸ್, ಎನ್‌ಜೆ ಕರೀಂ ಬ್ಲಾಕ್ ಸೇರಿದಂತೆ ಒಟ್ಟು 23 ನೀರಿನ ಮಾದರಿಗಳನ್ನು ಪರೀಕ್ಷಿಸಿದಾಗ, 9 ಮಾದರಿಗಳು ಕುಡಿಯಲು ಯೋಗ್ಯವಾಗಿಲ್ಲವೆಂದು ಫಲಿತಾಂಶ ಬಂದಿದೆ. 10 ನೀರಿನ ಮಾದರಿಗಳನ್ನು ಜಿಲ್ಲಾ ಆರೋಗ್ಯ ಪ್ರಯೋಗ ಶಾಲೆಯಲ್ಲಿ ಎಂಪಿಎನ್ ಪರೀಕ್ಷೆಗೆ ಒಳಪಡಿಸಿದಾಗ, 2 ಮಾದರಿಗಳು ಕುಡಿಯಲು ಯೋಗ್ಯವಾಗಿಲ್ಲವೆಂದು (ರಾಜೀವ್‌ನಗರ 1ನೇ ಮತ್ತು 4ನೇ ಕ್ರಾಸ್ ಮನೆ ನಲ್ಲಿ ನೀರು) ಫಲಿತಾಂಶ ಬಂದಿದೆ.

ಸದರಿ ಪ್ರದೇಶಗಳಿಗೆ ರಮ್ಮನಹಳ್ಳಿಯ ಕುಡಿಯುವ ನೀರಿನ ಶುದ್ಧೀಕರಣ ಘಟಕದಿಂದ ನೀರಿನ ಸರಬರಾಜು ಆಗುತ್ತಿದ್ದು, ನೀರನ್ನು ಸೂಪರ್ ಕ್ಲೋರಿನೇಷನ್ ಮಾಡಿಸಿ ಕ್ಲೋರೋಸ್ಕೋಪ್‌ನಲ್ಲಿ ರೆಸಿಡ್ಯೂಯಲ್ ಕ್ಲೋರಿನ್ ಪ್ರಮಾಣವನ್ನು ಪರೀಕ್ಷಿಸಿ ನೀರು ಸರಬರಾಜು ಮಾಡುವಂತೆ ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರಕ್ಕೆ ಆರೋಗ್ಯ ಇಲಾಖೆ ತಿಳಿಸಿದೆ. ಆರೋಗ್ಯ ಇಲಾಖೆಯಿಂದ ಡಿ.5ರಿಂದ 10ರವರೆಗೆ ಒಟ್ಟು 9,676 ಜನಸಂಖ್ಯೆ ಸರ್ವೇ ನಡೆಸಿ ಪ್ರಕರಣಗಳನ್ನು ಪತ್ತೆ ಮಾಡಿದ್ದು, ಸರ್ವೇ ಕಾರ್ಯ ಸೇರಿದಂತೆ ವಿವಿಧ ಮುನ್ನೆಚ್ಚರಿಕೆಗಳನ್ನು ಮುಂದುವರೆಸಲಾಗಿದೆ.

ಡಿ.23, ಮೈಸೂರಲ್ಲಿ ರಾಜ್ಯಮಟ್ಟದ ರೈತ ಸಮ್ಮೇಳನ

ಮೈಸೂರು,ಡಿ.11(ಎಂಟಿವೈ)– ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ಡಿ.23ರಂದು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ರಾಜ್ಯಮಟ್ಟದ ರೈತ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದಲ್ಲಿ ರೈತ ಮುಖಂಡರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ರೈತ ದಿನದ ಅಂಗವಾಗಿ ಮೈಸೂರಲ್ಲಿ ರೈತರ ಹಬ್ಬ ಅಥವಾ ರಾಜ್ಯಮಟ್ಟದ ರೈತ ಸಮಾವೇಶ ನಡೆಸಲಾಗುತ್ತಿದೆ. ಈ ಸಮಾವೇಶದಲ್ಲಿ ರಾಜ್ಯಮಟ್ಟದ ರೈತ ಮುಖಂಡರು, ಹೋರಾಟಗಾರರು ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಕೃಷಿ ಸಾಲ ನೀತಿ ಬದಲಿ, ಭೂಮಿ ಮೌಲ್ಯಕ್ಕೆ ಅನುಗುಣವಾಗಿ ಸಾಲ ನೀಡುವಂತೆ, ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್, ಸರ್ಫೈಸಿ ಕಾಯ್ದೆ ರದ್ದು ಮಾಡುವಂತೆ ಸೇರಿದಂತೆ ರೈತರ 17 ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ ಎಂದರು. ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ನೀಡಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಯಾಗಬೇಕು. ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಆಗಬೇಕು. ಕೃಷಿ ಉಪಕರಣಗಳು ರಸಗೊಬ್ಬರ ಕೀಟನಾಶಕ, ಮೊಸರು ಮಜ್ಜಿಗೆ ಇತರೆ ಉತ್ಪನ್ನಗಳ ಮೇಲೆ ವಿಧಿಸಿರುವ ಜಿಎಸ್‌ಟಿ ಸುಂಕ ರದ್ದಾಗಬೇಕು. ಮಹಿಳಾ ಸಂಘಗಳಿಗೆ ಸಾಲ ನೀಡುವ ಮೈಕ್ರೋ ಫೈನಾನ್ಸ್ ಕಿರುಕುಳ ನಿಲ್ಲಿಸಲು ಕಠಿಣ ಕಾನೂನು ಜಾರಿಯಾಗ ಬೇಕು. ಕೃಷಿ ಮೇಳಗಳ ಬದಲು ರೈತರ ನೆನಪಿನ ಹಬ್ಬದ ದಿನ ಆಚರಿಸಬೇಕು. ಕೃಷಿ ಭೂಮಿ, ನೀರು ಅರಣ್ಯ ಪರಿಸರ ರಕ್ಷಿಸಲು ಜಲಾಶಯ, ಕೆರೆಗಳ ಹೂಳು ತೆಗೆಸಬೇಕು ಎಂದು ಒತ್ತಾಯಿಸಿದರು.

ಪರಿಸರ ಸಂರಕ್ಷಿಸಲು ಸಾವಿರಾರು ಮರ ಬೆಳೆಸಿದ ಕಂಪನಿ, ಸಂಸ್ಥೆಗಳಿಗೆ ಶೇ. 25 ತೆರಿಗೆ ವಿನಾಯಿತಿ ನೀಡುವಂತಾಗಬೇಕು. ಕಬ್ಬಿನ ದರ ರೈತರ ಹೊಲದಲ್ಲಿನ ದರ ಎಂದು ನಿಗದಿ ಮಾಡುವ ಮಾನದಂಡ ಜಾರಿಯಾಗಲಿ. ಫಸಲ್ ಬೀಮಾ ಬೆಳೆ ವಿಮಾ ಪದ್ಧತಿ ನೀತಿ ಬದಲಾಗಲಿ ಪ್ರತಿ ರೈತನ ಹೊಲದ ಬೆಳೆ ವಿಮೆ ನಷ್ಟ ಪರಿಹಾರ ನೀಡಬೇಕು. ಎಪಿಎಂಸಿಗಳಲ್ಲಿ ದಲ್ಲಾಳಿಗಳು ರೈತರಿಂದ 10 ಕಮಿಷನ್ ವಸೂಲಿ ನಿಲ್ಲಿಸಲು ಕಠಿಣ ಕಾನೂನು ರೂಪಿಸಬೇಕು. ರೈತರ ಮಗನ ಮದುವೆ ಆಗುವ ಹೆಣ್ಣುಮಕ್ಕಳಿಗೆ ಸರ್ಕಾರಿ ಕೆಲಸದಲ್ಲಿ ಶೇ. 20 ಮೀಸಲಾತಿ ನೀಡುವ ನೀತಿ ಜಾರಿಗೆ ಬರಲಿ, ತೆಲಂಗಾಣ ಮಾದರಿಯಲ್ಲಿ 60ವರ್ಷ ತುಂಬಿದ ರೈತರಿಗೆ 10 ಸಾವಿರ ರೂ. ಪಿಂಚಣಿ ನೀಡುವ ಯೋಜನೆ ಜಾರಿಗೆ ತರಬೇಕು. ರಾಜ್ಯದಲ್ಲಿ 10 ಲಕ್ಷ ರೈತರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ ಕೂಡಲೇ ಬೇಷರತ್ತಾಗಿ ಸಾಗುವಳಿ ಪತ್ರ ನೀಡಬೇಕು. ಯುವಕರ ಭವಿಷ್ಯ ಹಾಳು ಮಾಡುತ್ತಿರುವ ಆನ್‌ಲೈನ್ ಗೇಮ್, ಜೂಜು ನಿಷೇಧಿಸುವಂತೆ ಮನವಿ ಮಾಡಿದರು.

ಇದೇ ವೇಳೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಭೆಯಲ್ಲಿ ರೈತ ಮುಖಂಡರಾದ ಎಂ.ಬಿ. ಚೇತನ್, ನಿವೃತ್ತ ಪ್ರಾಂಶುಪಾಲ ಮಹದೇವಯ್ಯ, ಶುಂಠಿ ಬೆಳೆಗಾರರ ಸಂಘದ ಅಧ್ಯಕ್ಷ ಮಹಿ ಮಹೇಶ್, ವಸಂತಕುಮಾರ್, ಹತ್ತಳ್ಳಿ ದೇವರಾಜ್, ನಾಗಾರ್ಜುನ, ಕಿರಗಸೂರ್ ಶಂಕರ, ಬರಡನಪುರ ನಾಗರಾಜ್, ನೀಲ ಕಂಠಪ್ಪ ರೇವಣ್ಣ, ಮಹದೇವಸ್ವಾಮಿ, ಸಿದ್ದೇಶ್, ವೆಂಕಟೇಶ್, ವಿಜಯೇಂದ್ರ ಇನ್ನಿತರರಿದ್ದರು.

ಡಾ. ಸಿ.ರಾಜನ್ ನಿಧನ



ಮೈಸೂರು, ಡಿ.11– ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ, ಮೈಸೂರು ಮೆಡಿಕಲ್ ಕಾಲೇಜ್‌ನ ನಿವೃತ್ತ ಪ್ರಾಧ್ಯಾಪಕರಾದ (ಪ್ರೊಫೆಸರ್ ಇನ್ ಮೆಡಿಸಿನ್) ಡಾ. ಸಿ.ರಾಜನ್ (72) ಅವರು ಬುಧವಾರ ರಾತ್ರಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ, ಸೊಸೆ ಹಾಗೂ ಅಪಾರ ಬಂಧು ವರ್ಗ ಮತ್ತು ಶಿಷ್ಯ ವೃಂದವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಂಚಮಸಾಲಿ ಮೀಸಲಾತಿ ಬೇಡಿಕೆ: ಸರ್ಕಾರದ ವಿರುದ್ಧ ಹೋರಾಟಕ್ಕೆ ಬಿಜೆಪಿ ಸಿದ್ಧತೆ

ಬೆಳಗಾವಿ, ಡಿ.11– ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಬೆಳಗಾವಿಯಲ್ಲಿ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರ ನಡೆದಿದ್ದ ಹೋರಾಟ ತೀವ್ರ ಸ್ವರೂಪವನ್ನು ಪಡೆದುಕೊಂಡಿತ್ತು.

ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲು ಮುಂದಾಗಿದ್ದ ಹೋರಾಟಗಾರರ ಮೇಲೆ ಲಘು ಲಾಠಿ ಪ್ರಹಾರ ನಡೆಸಿದ ಹಿನ್ನೆಲೆಯಲ್ಲಿ ಕೆಲವರು ಗಾಯಗೊಂಡಿದ್ದಾರೆ. ಈ ಹೋರಾಟವನ್ನು ಇದೀಗ ಸದನದಲ್ಲಿ ತೀವ್ರಗೊಳಿಸಲು ಬಿಜೆಪಿಗರು ಮುಂದಾಗಿದ್ದಾರೆ. ಪರಿಣಾಮ ಗುರುವಾರ ಸದನದಲ್ಲಿ ತೀವ್ರ ಗದ್ದಲ ಉಂಟಾಗುವ ಸಾಧ್ಯತೆ ಇದೆ.

ಬೆಳಗಾವಿ ಅಧಿವೇಶನದ ಮೊದಲ ದಿನವೇ ಬಿಜೆಪಿ ಶಾಸಕರಾದ ಯತ್ನಾಳ್ ಹಾಗೂ ಮತ್ತಿತರರು ಸದನದ ಬಾವಿಗೆ ಇಳಿದು ಪ್ರತಿಭಟನೆ ನಡೆಸಿದ್ದರು. ಪಂಚಮಸಾಲಿ ಹೋರಾಟಕ್ಕೆ ಸರ್ಕಾರ ಅಡ್ಡಿ ಪಡಿಸುತ್ತಿದೆ ಎಂದು ಆರೋಪಿಸಿದ್ದರು. ಅಲ್ಲದೆ ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರ್ಪಡೆ ಮಾಡಬೇಕು ಎಂದು ಆಗ್ರಹಿಸಿದ್ದರು. ಈ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ನೀಡುವ ಭರವಸೆಯನ್ನು ಸ್ಪೀಕರ್ ಯು.ಟಿ ಖಾದರ್ ನೀಡಿದ್ದರು.

ಇದರ ಬೆನ್ನಲ್ಲೇ ಮಂಗಳವಾರ ಬೆಳಗಾವಿಯಲ್ಲಿ ಪಂಚಮಸಾಲಿ ಹೋರಾಟಗಾರರು ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದರು. ಈ ವೇಳೆ ಹೋರಾಟಗಾರರ ಮೇಲೆ ಲಘು ಲಾಠಿ ಚಾರ್ಜ್ ನಡೆದಿತ್ತು. ಅಲ್ಲದೆ, ಬಿಜೆಪಿ ಶಾಸಕರಾದ ಯತ್ನಾಳ್ ಮತ್ತು ಬೆಲ್ಲದ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು. ಬುಧವಾರ ಸರ್ಕಾರಿ ರಜೆ ಘೋಷಣೆ ಆದ ಹಿನ್ನೆಲೆಯಲ್ಲಿ ಯಾವುದೇ ಪ್ರತಿಭಟನೆ ನಡೆದಿಲ್ಲ.

ಇಂದು ಸದನದಲ್ಲಿ ಚರ್ಚೆಗೆ ಸಿದ್ಧತೆ: ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಲಾಗಿದೆ ಎಂದು ಆರೋಪಿಸಿ ಬಿಜೆಪಿ ಸದನದಲ್ಲಿ ಹೋರಾಟಕ್ಕೆ ಮುಂದಾಗಿದೆ. ಇದೇ ವಿಚಾರವಾಗಿ ಬೆಂಗಳೂರಿನಲ್ಲಿ ಮಾತನಾಡಿರುವ ವಿಧಾನಪರಿಷತ್ ಸದಸ್ಯ ಸಿಟಿ ರವಿ, ಪಂಚಮಸಾಲಿ ಸಮಾಜದ ಶಾಂತಿಯುತ ಪ್ರತಿಭಟನೆ, ಹೋರಾಟಗಾರರ ಮೇಲೆ ಸರಕಾರವು ಲಾಠಿಚಾರ್ಜ್ ನಡೆಸಿ ಅಮಾನವೀಯವಾಗಿ ವರ್ತಿಸಿದೆ. ಸಾಮಾಜಿಕ ನ್ಯಾಯದಡಿ ಪಂಚಮಸಾಲಿಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿ ಎಂದು ಆಗ್ರಹಿಸಿದರು. ನಿನ್ನೆ ನಡೆದ ಲಾಠಿ ಚಾರ್ಜ್ ಸಂಬಂಧ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಮಾಡಿಸುವಂತೆ ಒತ್ತಾಯವನ್ನು ಮುಂದಿಟ್ಟರು.

ಸರ್ಕಾರ ಹಿಟ್ಲರ್ ಮಾರ್ಗ ಅನುಸರಿಸುತ್ತಿದೆ: ಬೆಳಗಾವಿಯಲ್ಲಿ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿತ್ತು. ಆಗ ನಡೆಸಿದ ಲಾಠಿಚಾರ್ಜ್‌ನಿಂದ ಹೋರಾಟದಲ್ಲಿ ಪಾಲ್ಗೊಂಡಿದ್ದ ನೂರಾರು ಜನ ಲಿಂಗಾಯತ ಸಮುದಾಯಕ್ಕೆ ಸೇರಿದ ಪಂಚಮಸಾಲಿ ರೈತರು ಗಾಯಗೊಂಡಿದ್ದಾರೆ. ಸರಕಾರದ್ದು ಸರ್ವಾಧಿಕಾರಿ ನಡೆ, ಪ್ರಜಾಪ್ರಭುತ್ವ ವಿರೋಧಿ ನಡೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಖಂಡಿಸಿದರು.

ಪಂಚಮಸಾಲಿ ಮೀಸಲಾತಿಗೆ ಹಿಂದುಳಿದ ವರ್ಗಗಳ ಒಕ್ಕೂಟ ವಿರೋಧ



ಬೆಂಗಳೂರು, ಡಿ. 11– ಪಂಚಮಸಾಲಿ ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗ–2ಎಗೆ ಸೇರಿಸಬಾರದು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡರು ಹಾಗೂ ಕಾರ್ಯಕರ್ತರು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಪಂಚಮಸಾಲಿ ಸಮಾಜದವರನ್ನು 2ಎ ವ್ಯಾಪ್ತಿಗೆ ತರಬೇಕು ಎಂಬ ಅವರ ಬೇಡಿಕೆಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಬಾರದು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಬೇಕಾಗುತ್ತದೆ ಎಂದು ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡರು ಸಿದ್ದರಾಮಯ್ಯ ಅವರಿಗೆ ಎಚ್ಚರಿಸಿದರು. ಪಂಚಮಸಾಲಿ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಬಲಿಷ್ಠ ಸಮುದಾಯವಾಗಿದ್ದು, ಅವರನ್ನು 2ಎ ವ್ಯಾಪ್ತಿಗೆ ತರಬಾರದು ಎಂದು ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ ಹಾಗೂ ಪ್ರಧಾನ ಕಾರ್ಯದರ್ಶಿ ಯೆಣ್ಣೆಗೆರೆ ಆರ್.ವೆಂಕಟರಾಮಯ್ಯ, ಕೆ.ಎಸ್.ಶಿವರಾಮು ಅವರು ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಮಂಗಳವಾರ ಬೆಳಗಾವಿಯಲ್ಲಿ ನಡೆದ ಪಂಚಮಸಾಲಿ ಸಮುದಾಯದ ಪ್ರತಿಭಟನೆಯ ವೇಳೆ ನಡೆದ ಹಿಂಸಾಚಾರದ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಅಧಿಕಾರಿಗಳ ಕ್ರಮವನ್ನು ಖಂಡಿಸಿದರು. ಲಾಠಿ ಪ್ರಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು ಎಂದು ಮಾಜಿ ಸಿಎಂ ಆಗ್ರಹಿಸಿದರು.

ಪಂಚಮಸಾಲಿ ಪ್ರತಿಭಟನೆಯಲ್ಲಿ ಪೊಲೀಸರಿಂದಲೇ ಕಲ್ಲು ತೂರಾಟ: ಸ್ವಾಮೀಜಿ ಗಂಭೀರ ಆರೋಪ



ಬೆಳಗಾವಿ, ಡಿ. 11: ಮಂಗಳವಾರ 2ಎ ಮೀಸಲಾತಿಗಾಗಿ ಪಂಚಮಸಾಲಿ ಸಮುದಾಯ ನಡೆಸಿದ ಹೋರಾಟ ಹಿಂಸಾ ರೂಪಕ್ಕೆ ತಿರುಗಿತ್ತು. ಬೆಳಗಾವಿಯ ಸುವರ್ಣ ಸೌಧದ ಬಳಿ ಹೋರಾಟಗಾರರ ಮೇಲೆ ಲಾಠಿಚಾರ್ಜ್ ಕೂಡ ಮಾಡಲಾಗಿತ್ತು. ನಮ್ಮವರ ಮೇಲೆ ಪೊಲೀಸರೇ ಕಲ್ಲು ತೂರಾಟ ಮಾಡಿದ್ದಾರೆ ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಗಂಭೀರ ಆರೋಪ ಮಾಡಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪೊಲೀಸರೇ ಸಿವಿಲ್ ಡ್ರೆಸ್ ಧರಿಸಿ ಬಂದು ಹಲ್ಲೆ ಮಾಡಿದ್ದರು. ದ್ವೇಷದಿಂದ ಕಲ್ಲು ಹೊಡೆಯುವ ಕೆಲಸವನ್ನು ಮಾಡಿದ್ದಾರೆ. ಲಿಂಗಾಯತ ಸಮಾಜದ ಕೋಟ್ಯಂತರ ಜನ ಕಣ್ಣೀರಿಡುತ್ತಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಕ್ಷಮೆ ಕೇಳಬೇಕು. ಹಲ್ಲೆ ಮಾಡಿದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅವರನ್ನು ಅಮಾನತು ಮಾಡಬೇಕೆಂದು ಆಗ್ರಹಿಸಿದ್ದಾರೆ. ವಕೀಲರು, ಮಹಿಳಾ ಹೋರಾಟಗಾರರ ಮೇಲೂ ಹಲ್ಲೆಯಾಗಿದೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಹೀಗಾಗಿದ್ದಕ್ಕೆ ಬಹಳ ನೋವಾಯಿತು. ದೊಡ್ಡ ಲಿಂಗಾಯತ ಸಮುದಾಯದ ಮೇಲೆ ದೌರ್ಜನ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದು ರಸ್ತೆ ತಡೆದು ಹೋರಾಟ ಮಾಡಲು ಕರೆ: ಡಿ.12ರಂದು ರಸ್ತೆ ತಡೆದು ಹೋರಾಟ ಮಾಡುವಂತೆ ರಾಜ್ಯಾದ್ಯಂತ ಪಂಚಮಸಾಲಿಗರಿಗೆ ಜಯ ಮೃತ್ಯುಂಜಯ ಶ್ರೀ ಕರೆ ನೀಡಿದ್ದಾರೆ. ನಿಮ್ಮ ಊರಲ್ಲಿ ರಸ್ತೆ ತಡದು ಹೋರಾಟ ಮಾಡಿ. ನಾಳೆ ಹಿರೇಬಾಗೇವಾಡಿ ಟೋಲ್ ನಾಕಾ ಬಂದ್ ಮಾಡುತ್ತೇವೆ. ಯಾವುದೇ ಕಾರಣಕ್ಕೆ ಹೋರಾಟ ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ.

ಇನ್ನು ಮುಂದೆ ಚೆನ್ನಮ್ಮನಂತೆ ಕ್ರಾಂತಿ ಹೋರಾಟ ಮಾಡುತ್ತೇವೆ. ಈವರೆಗೂ ಸಿದ್ದರಾಮಯ್ಯ ಲಿಂಗಾಯತ ವಿರೋಧಿ ಮುಖ್ಯಮಂತ್ರಿ ಅಂತಿದ್ದರು. ನಾವು ಹಾಗೆ ಅಂದುಕೊಂಡಿರಲಿಲ್ಲ ಆದರೆ ಈಗ ಹಾಗೆ ಅನಿಸುತ್ತಿದೆ ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ಲಿಂಗಾಯತ ವಿರೋಧಿ ಎಂದು ವಾಗ್ದಾಳಿ ಮಾಡಿದ್ದಾರೆ.

ಬೆಳಗಾವಿಯಲ್ಲಿ ಲಾಠಿಚಾರ್ಜ್; ಲಿಂಗಾಯತ ಗೌಡ ಮಹಾಸಭಾ ಖಂಡನೆ



ಮಹೇಶ್

ಮೈಸೂರು, ಡಿ.11(ಎಸ್‌ಪಿಎನ್)– ಬೆಳಗಾವಿಯಲ್ಲಿ ನಡೆದ ಪಂಚಮಸಾಲಿ ಮತ್ತು ಗೌಡ ಲಿಂಗಾಯತ 2ಎ ಮೀಸಲಾತಿ ನ್ಯಾಯಯುತ ಹೋರಾಟದಲ್ಲಿ ಭಾಗವಹಿಸಿದ್ದ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿ ದೌರ್ಜನ್ಯವೆಸಗಿರುವುದನ್ನು, ರಾಜ್ಯ ಲಿಂಗಾಯತ ಗೌಡ ಮಹಾಸಭಾ ಮಂಗಳವಾರ ಖಂಡಿಸಿದೆ. ಪಂಚಮಸಾಲಿ, ಗೌಡ ಲಿಂಗಾಯತ ಸಮುದಾಯದ ಮೀಸಲಾತಿ 2ಎ ಮೀಸಲಾತಿಗಾಗಿ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನ್ಯಾಯಯುತ ಹೋರಾಟ ಹಮ್ಮಿಕೊಳ್ಳಲಾಗಿತ್ತು. ಈ ಹೋರಾಟವನ್ನು ಹತ್ತಿಕ್ಕಲು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪೊಲೀಸ್ ಇಲಾಖೆ ಬಳಸಿಕೊಂಡು ಲಾಠಿಜಾರ್ಜ್ ಮಾಡಲು ಅನುಮತಿ ನೀಡಿದೆ.

ಹಿಟ್ಲರ್ ಮನಸ್ಥಿತಿಯನ್ನು ಹೊಂದಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಗೌಡ ಲಿಂಗಾಯತ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್ ತೀವ್ರವಾಗಿ ಖಂಡಿಸಿದ್ದು, ದೌರ್ಜನ್ಯವೆಸಗಿದ ಪೊಲೀಸರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿದ್ದಾರೆ.

ಪಿಜಿ ಆಯುಷ್: ನೋಂದಣಿಗೆ ನಾಳೆ ಕೊನೆ ದಿನ

ಬೆಂಗಳೂರು, ಡಿ. 11– ಸ್ನಾತಕೋತ್ತರ ಆಯುಷ್ ಕೋರ್ಸ್‌ನ 'ಸ್ಟ್ರೇ ವೆಕೆನ್ಸಿ' ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹರು ಡಿ. 13ರೊಳಗೆ ನೋಂದಣಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ.

ನೋಂದಣಿ ಮಾಡಿ, ಶುಲ್ಕ ಪಾವತಿಸುವ ಅಭ್ಯರ್ಥಿಗಳು ಡಿ. 14ರಂದು ಮೂಲ ದಾಖಲೆಗಳ ಸಮೇತ ಕೆಇಎ ಕಚೇರಿಗೆ ಬಂದು ಪರಿಶೀಲನೆ ಮಾಡಿಸಿಕೊಳ್ಳಬೇಕು. ಡಿ. 16ರವರೆಗೆ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಡಿ.16ರಂದು ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುತ್ತದೆ. 17ರಂದು ಅಂತಿಮ ಫಲಿತಾಂಶ ಪ್ರಕಟಿಸಲಿದ್ದು, 19ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ವಿವರ ನೀಡಿದ್ದಾರೆ.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಮುರುಡೇಶ್ವರ ದುರಂತದಲ್ಲಿ ನಾಲ್ವರು ವಿದ್ಯಾರ್ಥಿನಿಯರ ಸಾವು


ಮೃತರ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ಘೋಷಣೆ; 6 ಶಿಕ್ಷಕರ ಅಮಾನತು

ಕಾರವಾರ, ಡಿ.11– ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರಕ್ಕೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ವೇಳೆ ದುರಂತ ಸಂಭವಿಸಿದ್ದು ಕೋಲಾರದ ವಸತಿ ಶಾಲೆಯ ಒಂಬತ್ತನೇ ತರಗತಿಯ ನಾಲ್ವರು ವಿದ್ಯಾರ್ಥಿನಿಯರು ಸಮುದ್ರದಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಕೋಲಾರ ಜಿಲ್ಲೆಯ ಮುಳಬಾಗಿಲು ಮೊರಾರ್ಜಿ ದೇಸಾಯಿ ವಸತಿ ಶಾಲೆಯ 46 ವಿದ್ಯಾರ್ಥಿಗಳು ಮತ್ತು ಆರು ಶಿಕ್ಷಕರ ತಂಡ ಮಂಗಳವಾರ ತಮ್ಮ ಶಾಲಾ ಪ್ರವಾಸದ ಅಂಗವಾಗಿ ಮುರುಡೇಶ್ವರಕ್ಕೆ ತೆರಳಿತ್ತು. ಪೊಲೀಸರ ಪ್ರಕಾರ, ಸಂಜೆ 5.30ರ ಸುಮಾರಿಗೆ ಶಿಕ್ಷಕರು, ವಿದ್ಯಾರ್ಥಿಗಳ ಜೊತೆಗೆ ಬೀಚ್‌ಗೆ ತೆರಳಿದರು. ಜೀವ ರಕ್ಷಕರ ಎಚ್ಚರಿಕೆಯ ಹೊರತಾಗಿಯೂ, ಏಳು ವಿದ್ಯಾರ್ಥಿಗಳು ಸಮುದ್ರದ ಅಲೆಗಳಿಗೆ ಸಿಕ್ಕಿ ಕೊಚ್ಚಿ ಹೋಗಿದ್ದರು. ಈ ವೇಳೆ ಮೂವರು ವಿದ್ಯಾರ್ಥಿಗಳನ್ನು ಜೀವರಕ್ಷಕರು ಮತ್ತು ಇತರ ಏಜೆನ್ಸಿಗಳ ಸಹಾಯದಿಂದ ರಕ್ಷಿಸಲಾಗಿತ್ತು. ಆದರೆ ನಾಲ್ವರು ಸಮುದ್ರ ಪಾಲಾಗಿದ್ದರು.

ನಿನ್ನೆಯೇ ಓರ್ವ ವಿದ್ಯಾರ್ಥಿನಿ ಶ್ರವಂತಿ ಮೃತದೇಹವನ್ನು ಹೊರತೆಗೆಯಲಾಗಿತ್ತು. ಇಂದು ಜೀವರಕ್ಷಕರು, ಗೃಹ ರಕ್ಷಕರು, ಮೀನುಗಾರರು ಮತ್ತು ಪೊಲೀಸರನ್ನು ಒಳಗೊಂಡ ತಂಡ ಶೋಧ ಕಾರ್ಯಾಚರಣೆ ನಡೆಸಿದ್ದು ಬೆಳಿಗ್ಗೆ ಮೂವರು ಬಾಲಕಿಯರ ಮೃತದೇಹಗಳನ್ನು ಹೊರತೆಗೆದಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 106 (ನಿರ್ಲಕ್ಷ್ಯದಿಂದ ಸಾವಿಗೆ ಕಾರಣ) ಪ್ರಕರಣವನ್ನು ದಾಖಲಿಸಲಾಗಿದ್ದು, ಎಲ್ಲಾ ಆರು ಶಿಕ್ಷಕರನ್ನು ಬಂಧಿಸಲಾಗಿದೆ ಎಂದು ಉತ್ತರ ಕನ್ನಡದ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ತಿಳಿಸಿದ್ದಾರೆ. ನಂತರ ಶಿಕ್ಷಕರನ್ನು ಸ್ಟೇಷನ್ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಟೆಕ್ಕಿ ಆತ್ಮಹತ್ಯೆ: ಪತ್ನಿ, ಆಕೆಯ ಕುಟುಂಬದ ವಿರುದ್ಧ ಕೇಸ್



ಅತುಲ್ ಸುಭಾಷ್

ಬೆಂಗಳೂರು, ಡಿ.11– ನಗರದ ಮಾರತಹಳ್ಳಿಯಲ್ಲಿ ಟೆಕ್ಕಿ ಆತ್ಮಹತ್ಯೆ ಪ್ರಕರಣದಲ್ಲಿ ಟೆಕ್ಕಿಯ ಪತ್ನಿ ಸೇರಿ ಇತರ ನಾಲ್ವರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ದಾಖಲಾಗಿದೆ. ಆತ್ಮಹತ್ಯೆಗೆ ಶರಣಾದ ಟೆಕ್ಕಿ ಅತುಲ್ ಸುಭಾಷ್ (34) 24 ಪೇಜ್‌ಗಳ ಆತ್ಮಹತ್ಯೆ ಪತ್ರ ಬರೆದಿಟ್ಟಿದ್ದಾರೆ.

ಉತ್ತರ ಪ್ರದೇಶ ಮೂಲದ ಅತುಲ್ ಸುಭಾಷ್ (34) ಭಾನುವಾರ ಮಧ್ಯರಾತ್ರಿ ತನ್ನ ಪತ್ನಿ ಮತ್ತು ಆಕೆಯ ಕುಟುಂಬದವರ ಕಿರುಕುಳದಿಂದ ತನ್ನ ನಿವಾಸದಲ್ಲಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾರೆ. ಸುಭಾಷ್ ಅವರ ಸಹೋದರ ಬಿಕಾಸ್ ಕುಮಾರ್ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಆತನ ಪತ್ನಿ ನಿಕಿತಾ ಸಿಂಘಾನಿಯಾ, ಅತ್ತೆ ನಿಶಾ ಸಿಂಘಾನಿಯಾ, ಸೋದರ ಮಾವ ಅನುರಾಗ್ ಸಿಂಘಾನಿಯಾ, ಚಿಕ್ಕಪ್ಪ ಸುಶೀಲ್ ಸಿಂಘಾನಿಯಾ ಮತ್ತು ನಿಕಿತಾ ವಿರುದ್ಧ ಬಿಎನ್‌ಎಸ್‌ನ ಸೆಕ್ಷನ್ 108 (ಆತ್ಮಹತ್ಯೆಗೆ ಪ್ರಚೋದನೆ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಅತುಲ್ ಸುಭಾಷ್ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಮುಕ್ತಾಯಗೊಳಿಸಲು ನಾಲ್ವರೂ 3 ಕೋಟಿ ರೂ.ಗಳನ್ನು ನೀಡುವಂತೆ ಒತ್ತಾಯಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ಪೊಲೀಸರು ಡೆತ್‌ನೋಟ್ ಮತ್ತು ಇತರ ದಾಖಲೆಗಳನ್ನು ತನಿಖೆಗಾಗಿ ಸಂಗ್ರಹಿಸಿದ್ದಾರೆ. ಪರಿಶೀಲನೆ ಬಳಿಕ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗಳು ಮತ್ತು ಪತ್ನಿ ಮತ್ತು ಆಕೆಯ ಕುಟುಂಬದವರ ಕಿರುಕುಳದಿಂದ ಖಿನ್ನತೆಗೆ ಒಳಗಾಗಿದ್ದ ಸುಭಾಷ್ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆತ್ಮಹತ್ಯೆಗೂ ಮುನ್ನ ಅತುಲ್ ತನ್ನ ಜೀವನವನ್ನು ಕೊನೆಗೊಳಿಸುವ ನಿರ್ಧಾರದ ಬಗ್ಗೆ ಎನ್‌ಜಿಒಗೆ ಸಂದೇಶವನ್ನು ಕಳುಹಿಸಿದ್ದಾರೆ ಎಂದು ವರದಿಯಾಗಿದೆ. ಸೋಮವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಎನ್‌ಜಿಒ ಸದಸ್ಯರಿಂದ ಅತುಲ್ ಬಗ್ಗೆ ಪೊಲೀಸರಿಗೆ ಎಚ್ಚರಿಕೆ ಬಂದಿತ್ತು.

ಬಳಿಕ ಒಳಗಿನಿಂದ ಲಾಕ್ ಆಗಿದ್ದ ಮುಂಬಾಗಿಲನ್ನು ಒಡೆದು ಮೃತನ ಶವ ವಶಪಡಿಸಿಕೊಂಡಿದ್ದರು.

ಕೌಟುಂಬಿಕ ಕಾನೂನುಗಳ ಪರಿಷ್ಕರಣೆಯಾಗಲಿ



ತೇಜಸ್ವಿ ಸೂರ್ಯ

ಬೆಂಗಳೂರು, ಡಿ.11– ಪತ್ನಿಯ ಧೋರಣೆ ಹಾಗೂ ಹಿಂಸೆಗೆ ಬೇಸತ್ತು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಬೆಂಗಳೂರಿನ ಟೆಕ್ಕಿ ಅತುಲ್ ಸುಭಾಷ್‌ನ ಸಾವಿಗೆ ದಶದಿಕ್ಕುಗಳಿಂದ ಸಹಾನುಭೂತಿ ಹರಿದುಬರುತ್ತಿದೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಚರ್ಚೆಯನ್ನು ಹುಟ್ಟುಹಾಕಿದೆ. ವರದಕ್ಷಿಣೆ ಕಿರುಕುಳಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಜಾರಿಗೊಳಿಸಿರುವ ಕೆಲವು ಕಾನೂನುಗಳನ್ನು ಇಂದಿನ ಕೆಲವು ಮಹಿಳೆಯರು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆಂದು ಹಲವಾರು ಮಂದಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ, ಕುಟುಂಬ ವ್ಯಾಜ್ಯಗಳ ಕುರಿತಾಗಿ ರೂಪಿಸಲಾಗಿರುವ ಕಾನೂನುಗಳನ್ನು ಮತ್ತೊಮ್ಮೆ ಪರಾಮರ್ಶೆ ಮಾಡುವ ಕಾಲ ಬಂದಿದೆ ಎಂದೆನಿಸುತ್ತದೆ. ಇಂಥ ಕಾನೂನುಗಳು ಇಂದು ದೌರ್ಜನ್ಯದ ಅಸ್ತ್ರಗಳಾಗುತ್ತಿರುವುದು ವಿಪರ್ಯಾಸ. ಕೆಲವರು ಇಂಥ ಕಾನೂನುಗಳನ್ನು ತಮ್ಮ ಅಸ್ತ್ರಗಳನ್ನಾಗಿ ಬಳಸುತ್ತಿದ್ದಾರೆ. ಅದರಿಂದ ಸಂಸಾರಗಳು ಹಾಳಾಗುತ್ತಿವೆ, ಕುಟುಂಬಗಳು ಹಾಳಾಗುತ್ತಿವೆ. ಯಾರದ್ದೋ ಸ್ವಾರ್ಥಕ್ಕೆ ಯಾರೋ ಬಲಿಪಶುಗಳಾಗುತ್ತಿದ್ದಾರೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

ಅದಲ್ಲದೆ, ಕುಟುಂಬ ಎಂಬುದು ಒಂದು ಸಾಮಾಜಿಕ ಸಂಸ್ಥೆ. ಇದು ಸಮಾಜದ ತಳಹದಿ. ಕೌಟುಂಬಿಕ ವ್ಯಾಜ್ಯಗಳಿಗೆ ಸಂಬಂಧಿಸಿದ ಕಾನೂನುಗಳ ದುರ್ಬಳಕೆಯಿಂದ ಸಮಾಜಕ್ಕೆ ಧಕ್ಕೆಯಾಗುತ್ತದೆ ಎಂಬುದನ್ನು ಅರಿಯಬೇಕಿದೆ ಎಂದು ಅವರು ಹೇಳಿದ್ದಾರೆ.

ಸನಾತನ ಧರ್ಮದಲ್ಲಿ ದಾನ–ಧರ್ಮಕ್ಕೆ ಮಹತ್ವದ ಸ್ಥಾನ

ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಅಭಿಮತ


ಮೈಸೂರು, ಡಿ.11(ಎಸ್‌ಪಿಎನ್)– ಸನಾತನ ಧರ್ಮದಲ್ಲಿ ದಾನ–ಧರ್ಮಕ್ಕೆ ಮಹತ್ವದ ಸ್ಥಾನವಿದೆ. ದಾನ ಎಂಬುದು ಮನಸ್ಸಾರೆ ಕೊಡುವಿಕೆ. ಕೊಡುವ ಗುಣವನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಎಂದು ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯ ಜೀವದಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ 2025ರ ರಕ್ತದಾನ ಮಹತ್ವ ಸಾರುವ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ದಾನ ಮಾಡುವುದು ಅಗತ್ಯವಿದೆ. ಸಮಾಜ–ಸಮುದಾಯಕ್ಕೆ ಬೇಕಾಗಿರುವುದನ್ನು ನೀಡುವುದು ಬಹಳ ಮುಖ್ಯ. ಆ ಮೂಲಕ ವ್ಯಕ್ತಿ, ಸಮಾಜದ ಸಂಬಂಧ ಮಧುರವಾಗಿರಲು ಹಾಗೂ ಸಾಮಾಜಿಕ ಸಾಮರಸ್ಯ ಬೆಳೆಯಲು ಕಾರಣವಾಗುತ್ತದೆ. ತಾನು ಕೊಡಲಾಗದಿದ್ದರೂ ಕೊಡಬಲ್ಲವರಿಂದ ದಾನ ಕೊಡಿಸಿ ಸಮಾಜದ ಹಿತ ಕಾಪಾಡಬೇಕು ಎಂದು ಕಿವಿಮಾತು ಹೇಳಿದರು. ಸಮಾಜಕ್ಕೆ ದಾನ ಮಾಡಿದರೆ ನಿಮ್ಮ ಕೈಗಳು ಸದಾ ಪುಣ್ಯದ ಕೈಗಳಾಗುತ್ತವೆ. ಶ್ರೀಮಂತ ಮತ್ತು ಬಡವ ಎಂಬ ಭೇದಭಾವವಿಲ್ಲದೆ ಪ್ರತಿಯೊಬ್ಬರು ಕೊಡುವಿಕೆಯ ಗುಣವನ್ನು ಬೆಳೆಸಿಕೊಳ್ಳಬೇಕು. ಒಡವೆ, ಹಣ–ಆಸ್ತಿ ಸಂಪತ್ತಿಗೆ ನಾವೇ ಕಾವಲುಗಾರರಾಗಬೇಕು ಆದರೆ ದಾನ–ಧರ್ಮ ಮಾಡಿ ಆ ಮೂಲಕ ಸಮಾಜದ ವಿಶ್ವಾಸ, ಜ್ಞಾನ ಸ್ನೇಹವನ್ನು ಹಂಚಿದರೆ ಅವು ನಮಗೆ ಕಾವಲಾಗುತ್ತವೆ ಎಂದು ಸಲಹೆ ನೀಡಿದರು.

ಭೂ ದಾನ, ಗೋ ದಾನ, ಆಹಾರ, ಅಂಗಾಂಗಗಳ ದಾನ, ರಕ್ತದಾನ, ವಿವಿಧ ರೀತಿಯಲ್ಲಿ ದಾನ ನೀಡುವ ಗುಣ ಪುರಾತನ ಕಾಲದಿಂದಲೂ ಈ ನೆಲದಲ್ಲಿದೆ. ಯುವಕರು, ವಿದ್ಯಾರ್ಥಿಗಳು ಬಾಲ್ಯದಿಂದಲೂ ಪರಸ್ಪರ ನೆರವಾಗುವ, ಸಹಾಯಹಸ್ತ ಚಾಚುವ ಮನಸ್ಸನ್ನು ಬೆಳೆಸಿಕೊಳ್ಳಬೇಕು ಎಂದರು.

ಈ ವೇಳೆ ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಜಿ ರಾಘವೇಂದ್ರ ಆಲನಹಳ್ಳಿ, ಎಂ.ಎನ್. ಚೇತನ್ ಗೌಡ, ಮಮತಾ, ಸುರೇಶ್, ಪ್ರಭು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಜೀವಧಾರ ರಕ್ತನಿಧಿ ಕೇಂದ್ರದ 2025ರ ರಕ್ತದಾನ ಮಹತ್ವ ಸಾರುವ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

IN THE COURT OF THE HONOURABLE PRINCIPAL SENIOR CIVIL JUDGE AND CJM AT MYSURU

O.S NO.508/2012

PLAINTIFF: CHANNAJAMMA, Wife of Late Basavaiah. Aged about 65 years, Residing at D.No 220, K.R. Mill Colony, Kasaba Hobli, Mysore Taluk. **V/S**

DEFENDENTS : SRI MAHALINGAIAH AND OTHERS.

To, **D.29. Sri. Venkatesh**, Aged about 45 years, S/o, Lingappa R/o No 117/2, Besthara Block, Kanakagiri, Mysuru 570008.

D.33. Smt.Maramma, Aged about 50 years, W/o Doddanna, R/o 117/1, Besthara Block, Kanakagiri, Mysuru 570008.

D.34. Sri.Srikanta Devaraje Urs, Aged about 65 years, S/o Nanjunda Devaraje Uras, R/o 117/1, Besthara Block, Kanakagiri, Mysuru 570008.

D.35. Smt.Kamala, Aged about 46 years,W/o Revanna, R/o 117, Besthara Block, Kanakagiri, Mysuru 570008.

D.36. Smt.Shivamma, Aged about 45 years, W/o Mahadeva, R/o Varsha Nilaya, Besthara Block, Kanakagiri, Mysuru 570008.

D.40. Sri. Naveena, Aged about 40 years, S/o Not known, R/o 117, Besthara Block, Kanakagiri, Mysuru 570008.

D.41. Sri.Chandregowda, Aged about 40 years, S/o Malechendragowda, R/o 117/1, Besthara Block, Kanakagiri, Mysuru 570008.

D.42. Sri. Dr. Balaraju, Aged about 40 years, S/o Not Known, R/o 117/1, Besthara Block, Kanakagiri, Mysuru 570008.

NOTICE

Whereas, the above named plaintiff has filed the above suit against you and other defendants for Partition and separate possession of the suit schedule property. You are hereby Summons to appear in this Court in person or by a pleader duly instructed, and able to answer all material questions relating to the suit, or who shall be accompanied by some person able to answer all such questions, on the 13 DAY OF January 2025 AT 11 0' CLOCK in the fore noon to answer the claim, and you are directed to produce on that day all the documents upon which you intend to rely in support of your defense.

Take notice that, in default of your appearance on the day before mentioned, the suit will be heard and determined in your absence.

Given under my hand and the seal of the Court, this the 4 day of December 2024.


Sd/- Sri. K.Madhukar, Advocate for the Plaintiff. #2961/15,1 Floor, 2nd Main, 5th Cross, Saraswathipuram, Mysuru.

By Order of the Court

Sd/- Chief Ministerial Office,, Court of Senior Civil Judge and CJM., Mysuru

Date: 15-11-2024, Place: Mysuru

ಪೂಜ್ಯ ತಾಯಿಯವರ 5ನೇ ವರ್ಷದ ಸವಿನೆನಪು



ಸದಾ ನಿಮ್ಮ ನೆನಪಿನಲ್ಲಿ ಮಕ್ಕಳು, ಸಿದ್ದೇಶ್, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಶ್ರೀಮತಿ ಶಿವರಾಜಮ್ಮ CFTRI

W/o ಲೇಟ್ ಶಿವಲಿಂಗ, (ದೊಡ್ಡ ಗರಡಿ ಉಸ್ತಾದ್ ದೊಡ್ಡಣ್ಣನವರ ಮಗಳು), ಗಾಂಧೀನಗರ, ಮೈಸೂರು